ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಚಂದ್ರಶೇಖರ್ 'ರಾವಣ್'
'ಭೀಮ್ ಆರ್ಮಿ' ಸ್ಥಾಪಕ
ಬೈಲ್ ಮರುದಿನ
NSA ಅಡಿ ಬಂಧನ



ಸಂಪುಟ 11 | ಸಂಚಿಕೆ 48 | ಪುಟ 16 | ನವೆಂಬರ್ 20-26, 2017 | ರೂ. 10/-

web: www.janashakthi.co.in e-mail : js_weekly@yahoo.com




ಸಂಸತ್ತಿನ ಬಳಿ ಮೂರು ದಿನಗಳ ಚಾರಿತ್ರಿಕ ಮಹಾ ಧರಣಿ





ಖಾಸಗಿ ಆಸ್ಪತ್ರೆಗಳು ನಿಯಂತ್ರಣಗೊಳ್ಳಲಿ ಸರ್ಕಾರಿ ಆಸ್ಪತ್ರೆಗಳು ಬಲಗೊಳ್ಳಲಿ

ನವೆಂಬರ್ 20 ಕಿಸಾನ್ ಸಂಸತ್‌ಗೆ ಮುನ್ನಡೆಯಿರಿ



ರಾಜಸ್ಥಾನ : ಗೋರಕ್ಷಕರಿಂದ ಉಮ್ಮರ್ ಖಾನ್ ಕೊಲೆ

ರಾಯಚೂರು: ಸಫಲ ಮುಸ್ಲಿಂ ಸಮಾವೇಶ



ಚಿರಸ್ಮರಣೆ ಓದೋಣ ಕಯ್ಯೂರಿಗೆ ಹೋಗೋಣ



ಮತ್ತೊಬ್ಬ ಹೈನು ರೈತನ ಹತ್ಯೆ–ಕೇಂದ್ರ ಮತ್ತು ರಾಜಸ್ತಾನ ಸರಕಾರಗಳು ಸುಪ್ರಿಂ ಕೋರ್ಟ್ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಕಾವಲುಕೋರ, ಪೊಲಿಸ್‌ಗಿರಿ ಗ್ಯಾಂಗುಗಳನ್ನು ನಿಷೇಧಿಸಬೇಕು

–ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ರಾಜಸ್ತಾನದ ಅಲ್ವರ್‌ನಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದ ಮತ್ತೊಬ್ಬ ರೈತ ಉಮ್ಮರ್ ಖಾನ್ ಭೀಕರ ಹತ್ಯೆ ನಡೆದಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಉಮ್ಮರ್‌ಖಾನ್ ಮತ್ತು ಆತನ ಜತೆಗಿದ್ದ ತಾಹಿರ್ ಖಾನ್ ಮತ್ತು ಜಾವೆದ್ ಖಾನ್ ಅಲ್ವರ್‌ನಿಂದ ಖರೀದಿಮಾಡಿದ ಹಸುಗಳನ್ನು ಸಾಗಿಸುವಾಗ ಮೂವರ ಮೇಲೂ ಹಲ್ಲೆ ನಡೆದು ಉಮ್ಮರ್‌ಖಾನ್ ಪ್ರಾಣ ಕಳಕೊಂಡಿದ್ದಾರೆ, ತಾಹಿರ್ ಖಾನ್ ಆಸ್ಪತ್ರೆಯಲ್ಲಿದ್ದಾರೆ ಮತ್ತು ಜಾವೆದ್ ಖಾನ್ ಎಲ್ಲಿದ್ದಾರೆ ತಿಳಿದಿಲ್ಲ. ಇವರು ಮೂವರನ್ನೂ ಗೋರಕ್ಷಕರೆನಿಸಿಕೊಂಡವರು ಹೊಡೆದಿದ್ದಾರೆ ಮತ್ತು ಅವರಿಗೆ ಗುಂಡಿಕ್ಕಿದ್ದಾರೆ. ಆದರೂ ರಾಜಸ್ತಾನ ಪೋಲೀಸರು ಅವರ ವಿರುದ್ಧವೇ ಕೇಸು ದಾಖಲಿಸಿದ್ದಾರೆ, ಕಾವಲುಕೋರರು ತಪ್ಪಿಸಿಕೊಳ್ಳಲು ಅವಕಾಶ ನೀಡಿದ್ದಾರೆ. ಇದು ಇನ್ನಷ್ಟು ಆಘಾತಕಾರಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ತೀರ ಇತ್ತೀಚೆಗಷ್ಟೇ, ಸುಪ್ರಿಂ ಕೋರ್ಟ್ ಇಂತಹ ದಾಳಿಗಳನ್ನು ತಡೆಯಲು ಹಾಗೂ ಇಂತಹ ಕಾವಲುಕೋರ ಘಟನೆಗಳಲ್ಲಿ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಿದೆ. ಪ್ರತಿಯೊಂದು ಜಿಲ್ಲೆಯಲ್ಲಿ ಒಬ್ಬ ಹಿರಿಯ ಪೋಲಿಸ್ ಅಧಿಕಾರಿಗೆ ಈ ಹೊಣೆಯನ್ನು ವಹಿಸಬೇಕು ಎಂದೂ ಅದು ಹೇಳಿದೆ. ಇಂತಹ ಕಾವಲುಕೋರತನಕ್ಕೆ ಬಲಿಯಾದವರಿಗೆ ಸರಿಯಾದ ಪರಿಹಾರ ತೆರಬೇಕು ಎಂದೂ ಅದು ಹೇಳಿದೆ ಎಂಬ ಸಂಗತಿಯನ್ನು ಈ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಕೇಂದ್ರ ಸರಕಾರ ಮತ್ತು ರಾಜಸ್ತಾನ ಸರಕಾರ ಸುಪ್ರಿಂ ಕೋರ್ಟಿನ ಸೂಚನೆಗಳನ್ನು ಪಾಲಿಸಬೇಕು, ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸಬೇಕು, ಈ ಹಿಂಸಾಚಾರಕ್ಕೆ ತುತ್ತಾದವರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಮತ್ತು ನ್ಯಾಯದ ಭರವಸೆ ನೀಡಬೇಕು ಎಂದು ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಕೇಂದ್ರ ಸರಕಾರ ಇಂತಹ ಗೋವು ಸಂಬಂಧಿ ಕಾವಲುಕೋರತನದಲ್ಲಿ ಮತ್ತು ನೈತಿಕ ಪೋಲಿಸ್‌ಗಿರಿಯಲ್ಲಿ ತೊಡಗಿರುವ ಎಲ್ಲ ಗ್ಯಾಂಗುಗಳನ್ನು ನಿಷೇಧಿಸಬೇಕು ಎಂದೂ ಅದು ಆಗ್ರಹಿಸಿದೆ.

ಎಐಕೆಎಸ್: ಆಘಾತಕಾರಿ, ಬಲವಾದ ಖಂಡನೆ

ಅಖಿಲ ಭಾರತ ಕಿಸಾನ್ ಸಭಾ ಈ ಘಟನೆಯ ಬಗ್ಗೆ ಆಘಾತವನ್ನು ವ್ಯಕ್ತಪಡಿಸುತ್ತ ಇದನ್ನು ಬಲವಾಗಿ ಖಂಡಿಸಿದೆ.

ಅಖಿಲ ಭಾರತ ಕಿಸಾನ್ ಸಭಾ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್)ದ ಈ ಕುರಿತ ಹೇಳಿಕೆಗೆ ಪುಟ 7 ನೋಡಿ.

ಎಐಕೆಎಸ್ ಮತ್ತು ಕೆಪಿಆರ್‌ಎಸ್ ನವಂಬರ್ 15ರಂದು ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರ ಮೇಲೆ ಲಾಠೀ ಪ್ರಹಾರ ಮತ್ತು ಗೋಲೀಬಾರನ್ನು ಕೂಡ ಬಲವಾಗಿ ಖಂಡಿಸಿವೆ.(ಪುಟ 7 ನೋಡಿ). ಇದರಲ್ಲಿ ಕನಿಷ್ಟ ಏಳು ರೈತರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಭೀಮ್ ಆರ್ಮಿಯ ಮುಖಂಡರು, ಇತರರ ಮೇಲೆ ಎನ್‌ಎಸ್‌ಎ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಿಗೆ ಡಿಎಸ್‌ಎಂಎಂ ಪತ್ರ

ದಲಿತ ಶೋಷಣ್ ಮುಕ್ತಿಮಂಚ್ (ಡಿಎಸ್‌ಎಂಎಂ) ನವಂಬರ್ 14ರಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಿಗೆ ಪತ್ರ ಬರೆದು ಭೀಮ್ ಆರ್ಮಿಯ ಮುಖಂಡ ಚಂದ್ರಶೇಖರ್, ಶಿವಕುಮಾರ್ ಮತ್ತು ಸೋನು ಅವರ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್‌ಎಸ್‌ಎ) ಅಡಿಯಲ್ಲಿ ಕೇಸ್ ಹಾಕಿರುವುದು ನ್ಯಾಯದ ಗರ್ಭಪಾತ, ಮತ್ತು ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ, ಆದ್ದರಿಂದ ಆಯೋಗ ಇದರಲ್ಲಿ ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿಕೊಂಡಿದೆ.

ಈ ವರ್ಷದ ಮೇ 5 ರಂದು ಉತ್ತರಪ್ರದೇಶದ ಸಹಾರಣಪುರ್ ಜಿಲ್ಲೆಯ ಶಬ್ಬಿರ್‌ಪುರ್ ಗ್ರಾಮದಲ್ಲಿ ಮೇಲ್ಜಾತಿಯ ಮಂದಿ ದಲಿತ ಮಹಿಳೆಯರು ಮತ್ತು ಮಕ್ಕಳ ಮೇಲೆ ಮತ್ತು ದಲಿತರ ಮನೆಗಳ ಮೇಲೆ ಭೀಕರ ದಾಳಿ ನಡೆಸಿದರು. ಈ ಸಂದರ್ಭದಲ್ಲಿ ಮೇ 19ರಂದು ಡಿಎಸ್‌ಎಂಎಂ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ ಇದನ್ನು ಅವರ ಗಮನಕ್ಕೆ ತಂದಿತ್ತು.

ಉತ್ತರಪ್ರದೇಶ ಸರಕಾರ ಅಪರಾಧಿಗಳನ್ನು ಹಿಡಿದು ಶಿಕ್ಷಿಸುವ ಬದಲು ದಲಿತರಿಗೇ 'ಪಾಟ ಕಲಿಸಲು' ಕರಾಳ ಕ್ರಮಗಳನ್ನು ಕೈಗೊಳ್ಳಲಾರಂಭಿಸಿತು. ದಲಿತರ ಮೇಲೆ ಸುಳ್ಳು ಕೇಸುಗಳನ್ನು ಹಾಕಬಹುದು ಎಂಬ ಶಂಕೆಯನ್ನು ಡಿಎಸ್‌ಎಂಎಂ ಆಗ ವ್ಯಕ್ತಪಡಿಸಿತ್ತು. ಅದು ನಿಜವಾಗಿದೆ. ಶಬ್ಬಿರ್‌ಪುರದ ಸರಪಂಚ್ ಶಿವಕುಮಾರ್ ಸೇರಿದಂತೆ ಹಲವು ದಲಿತರ ಮೇಲೆ ಕೆಟ್ಟ ರೀತಿಯ ಸುಳ್ಳು ಆಪಾದನೆ ಹೊರಿಸಿ ಬಂಧಿಸಲಾಗಿದೆ. ಆ ಸಂದರ್ಭದಲ್ಲಿ ಶಬ್ಬಿರ್‌ಪುರದಲ್ಲೇ ಇದ್ದಿರದ ಭೀಮ್ ಆರ್ಮಿಯ ಮುಖಂಡ ಚಂದ್ರಶೇಖರ್‌ನ್ನೂ ಬಂಧಿಸಲಾಗಿದೆ. ಇವರಿಗೆ 10 ದಿನಗಳ ಹಿಂದೆಯಷ್ಟೇ ಅಲಹಾಬಾದ್ ಹೈಕೋರ್ಟ್ ಜಾಮೀನು ನೀಡುತ್ತ ಅವರ ಮೇಲಿನ ಆಪಾದನೆಗಳು ರಾಜಕೀಯ ಸ್ವರೂಪದ್ದು ಎಂದು ಅಭಿಪ್ರಾಯಪಟ್ಟಿತ್ತು.

ಆದರೆ ಉತ್ತರಪ್ರದೇಶ ಸರಕಾರ ಕೂಡಲೇ ಚಂದ್ರಶೇಖರ್, ಶಿವಕುಮಾರ್ ಮತ್ತು ಸೋನು ಮೇಲೆ ಎನ್‌ಎಸ್‌ಎ ಪ್ರಯೋಗಿಸಿದೆ. ಈ ನಡುವೆ ಚಂದ್ರಶೇಖರ್ ಆರೋಗ್ಯ ಕೆಟ್ಟು ಅವರನ್ನು ಮೇರಠ್ ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಗಿದೆ. ಇಲ್ಲಿ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ, ಇದು ಗಂಭೀರ ದುಷ್ಪರಿಣಾಮಗಳನ್ನು ಬೀರಬಹುದು ಎಂದು ಶಂಕೆ ವ್ಯಕ್ತ ಪಡಿಸಿರುವ ಡಿಎಸ್‌ಎಂಎಂ ಆಯೋಗದ ಅಧ್ಯಕ್ಷರು ಮಧ್ಯಪ್ರವೇಶಿಸಬೇಕು ಎಂದು ಮನವಿ ಮಾಡಿಕೊಂಡಿದೆ.

ಕಿಸಾನ್ ಸಂಘರ್ಷ ಸಮಿತಿಯಿಂದ 'ಕಿಸಾನ್ ಕೀ ಲೂಟ್' ಪ್ರಚಾರಾಂದೋಲನ: ನವಂಬರ್ 20 ರಂದು 'ಕಿಸಾನ್ ಸಂಸದ್'

ದಿಲ್ಲಿಯಲ್ಲಿ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ 'ಮಹಾಧರಣಿ' ಆರಂಭವಾದ ದಿನವೇ ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ (ಎಐಕೆಎಸ್‌ಸಿಸಿ) ರೈತರ ಹಕ್ಕುಗಳನ್ನು ನಿರಾಕರಿಸುತ್ತಿರುವುದರ ಬಗ್ಗೆ 'ಕಿಸಾನ್ ಕೀ ಲೂಟ್'(ರೈತರ ಲೂಟಿ) ಪ್ರಚಾರಾಂದೋಲನವನ್ನು ಆರಂಭಿಸು ತ್ತಿರುವುದಾಗಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಪ್ರಕಟಿಸಿದೆ.

180ಕ್ಕೂ ಹೆಚ್ಚು ರೈತ ಸಂಘಟನೆಗಳ ಜಂಟಿ ವೇದಿಕೆಯಾದ ಎಐಕೆಎಸ್‌ಸಿಸಿ ದೇಶದ ರೈತರಿಗೆ ಮತ್ತು ಕೃಷಿ ಕೂಲಿಕಾರರಿಗೆ ಒಂದು ಘನತೆಯ ಮತ್ತು ತಾಳಿಕೆಯ ಬದುಕು ಕಲ್ಪಿಸಲು ಕೆಲಸ ಮಾಡುತ್ತಿದೆ. ವಿವಿಧ ಜಾತಾಗಳನ್ನು ನಡೆಸಿ ದೇಶದ 18 ರಾಜ್ಯಗಳಲ್ಲಿ 10,000 ಕಿ.ಮೀ. ಪಯಣಿಸಿ 50ಲಕ್ಷ ರೈತರನ್ನು ತಲುಪಿದ 'ಕಿಸಾನ್ ಮುಕ್ತಿ ಯಾತ್ರಾ'ಗಳನ್ನು ಸಂಘಟಿಸಿದ ನಂತರ ಕನಿಷ್ಟ ಬೆಂಬಲ ಬೆಲೆಗಳನ್ನು ನಿರಾಕರಿಸಿ ದೇಶದ ರೈತರನ್ನು ಹೇಗೆ ಲೂಟಿ ಮಾಡಲಾಗುತ್ತಿದೆ ಎಂದು ತಿಳಿಸುವ ಈ ಪ್ರಚಾರಾಂದೋಲನವನ್ನು ಆರಂಭಿಸಿದೆ.

ಅದು ನಡೆಸಿದ ಒಂದು ಆಧ್ಯಯನದ ಪ್ರಕಾರ ದೇಶದ ರೈತರು ಸರಕಾರ ನಿಗದಿ ಮಾಡಿರುವ ಕನಿಷ್ಟ ಬೆಂಬಲ ಬೆಲೆಗಳನ್ನೂ ಪಡೆಯಲಾಗದೆ 35,968 ಕೋಟಿ ರೂ.ಗಳ ನಷ್ಟ ಅನುಭವಿಸಿದ್ದಾರೆ ಎಂದು ಲೆಕ್ಕ ಹಾಕಿದೆ.

ಮೋದಿಯವರು ರೈತರಿಗೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿನಷ್ಟು ಕನಿಷ್ಟ ಬೆಂಬಲ ಬೆಲೆ ಕೊಡಿಸುವುದಾಗಿ ಆಶ್ವಾಸನೆ ನೀಡಿ ಪ್ರಧಾನ ಮಂತ್ರಿಗಳಾದರು, ಆದರೆ ನಂತರ ರೈತರಿಗೆ ವಿಶ್ವಾಸಘಾತ ಮಾಡಿದರು ಎನ್ನುತ್ತ ಎಐಕೆಎಸ್‌ಸಿಸಿ 2017–18ರ ಮುಂಗಾರಿನ 14 ಬೇಳೆಗಳಲ್ಲಿ 7ಕ್ಕೆ ಉತ್ಪಾದನಾ ಖರ್ಚಿಗಿಂತಲೂ ಕಡಿಮೆ ಮಟ್ಟದಲ್ಲಿ ಬೆಂಬಲ ಬೆಲೆ ನಿಗದಿ ಪಡಿಸಲಾಗಿದೆ, ಉಳಿದ 7ಕ್ಕೆ ಉತ್ಪಾದನಾ ವೆಚ್ಚಕ್ಕಿಂತ 2% ದಿಂದ 19% ದ ವರೆಗಿನ ಮಟ್ಟದ ವರೆಗೆ ಮಾತ್ರ ನಿಗದಿ ಮಾಡಲಾಗಿದ ಎಂಬ ಸಂಗತಿಯತ್ತ ಗಮನ ಸೆಳೆದಿದೆ.. ಆದರೆ ರೈತರಿಗೆ ಈ ಕನಿಷ್ಟ ಬೆಲೆಗಳನ್ನೂ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗೆ **ಮೋದಿಯವರು ಆಶ್ವಾಸನೆ ನೀಡಿದ ವೆಚ್ಚ+50% ದ ಸೂತ್ರಕ್ಕೆ ಹೋಲಿಸಿದರೆ ರೈತರು 2.03 ಲಕ್ಷ ಕೋಟಿ ರೂ.ಗಳ ನಷ್ಟ ಅನುಭವಿಸಿದ್ದಾರೆ ಎಂದು ಎಐಕೆಎಸ್‌ಸಿಸಿ ಲೆಕ್ಕ ಹಾಕಿದೆ.**

ನವಂಬರ್ 9ರಂದು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಎಐಕೆಎಸ್‌ನ ಮುಖಂಡರಾದ ಹನ್ನನ್ ಮೊಲ್ಲ, ಕಿಸಾನ್ ಸಂಘರ್ಷ ಸಮಿತಿಯ ಡಾ.ಸುನೀಲಂ, ಸ್ವರಾಜ್ ಅಭಿಯಾನ್‌ನ ಯೋಗೇಂದ್ರ ಯಾದವ್, ಎನ್‌ಎಪಿಎಂನ ಮೇಧಾ ಪಾಟ್ಕರ್ ಮತ್ತು ಸ್ವಾಭಿಮಾನಿ ಶೇತಕರ್ ಸಂಘಟನ್‌ನ ರಾಜು ಶೆಟ್ಟಿ ಭಾಗವಹಿಸಿದ್ದರು.

ಎಐಕೆಎಸ್‌ಸಿಸಿ ನವಂಬರ್ 20ರಂದು ಸಂಸತ್ ಭವನದ ಬಳಿ 'ಕಿಸಾನ್ ಸಂಸದ್' ನಡೆಸಿ ಕನಿಷ್ಟ ಬೆಂಬಲ ಬೆಲೆ ಕುರಿತ ಮಸೂದೆಯೊಂದನ್ನು ಚರ್ಚಿಸಿ ಅಂಗೀಕರಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಈ ಮಸೂದೆಯನ್ನು ಬೆಂಬಲಿಸುವ ರಾಜಕೀಯ ಮುಖಂಡರನ್ನು, ಪ್ರಧಾನ ಮಂತ್ರಿಗಳನ್ನು ಕೂಡ, ಅವರು ಇದನ್ನು ಬೆಂಬಲಿಸುತ್ತಿದ್ದರೆ, ಇದಕ್ಕೆ ಆಹ್ವಾನಿಸಲಾಗುತ್ತದೆ ಎಂದು ಈ ಮುಖಂಡರು ಹೇಳಿದ್ದಾರೆ.

ಬೆಲೆಯೇರಿಕೆಗೆ ಮೋದಿ ಸರಕಾರದ ಧೋರಣೆಗಳೇ ಕಾರಣ ಡಿಸೆಂಬರ್ 13: ಕಾರ್ಮಿಕರಿಂದ ದೇಶವ್ಯಾಪಿ ಪ್ರತಿಭಟನೆ–ಸಿಐಟಿಯು

ಸತತವಾಗಿ ಬೆಲೆಯೇರಿಕೆಗಳು ನಡೆಯುತ್ತಿರುವುದರ ವಿರುದ್ಧ ದೇಶಾದ್ಯಂತ ಕಾರ್ಮಿಕರು ಡಿಸೆಂಬರ್ 13ರಂದು ತಮ್ಮ ಪ್ರತಿಭಟನೆಯನ್ನು ದಾಖಲಿಸಬೇಕು ಎಂದು ಸಿಐಟಿಯು ತನ್ನೆಲ್ಲ ಘಟಕಗಳಿಗೆ ಮತ್ತು ದೇಶದ ದುಡಿಯುವ ಜನತೆಗೆ ಕರೆ ನೀಡಿದೆ. ಪ್ರತಿಯೊಂದು ಕೈಗಾರಿಕಾ ಕೇಂದ್ರ, ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮತಪ್ರದರ್ಶನಗಳನ್ನು ನಡೆಸಬೇಕು ಎಂದು ಅದು ಹೇಳಿದೆ.

'ವ್ಯಾಪಾರ ಸುಗಮತೆ' ಅಂದರೆ 'ಜನಗಳ ಲೂಟಿಗೆ ಸುಗಮತೆ'

ಕಾರ್ಮಿಕರು ಮತ್ತಿತರ ದುಡಿಯುವ ಜನವಿಭಾಗಗಳ ಮೇಲೆ ಅಪಾರ ಸಂಕಟಗಳನ್ನು ಹೊರಿಸುತ್ತಿರುವ ಈ ಬೆಲೆಯೇರಿಕೆಗೆ ಮೋದಿ ಸರಕಾರದ ಧೋರಣೆಗಳೇ ಸಂಪೂರ್ಣ ಹೊಣೆ. ಬೆಲೆಗಳು ಏರುತ್ತಿರುವುದಷ್ಟೇ ಅಲ್ಲ, ಮಧ್ಯವರ್ತಿಗಳು, ದೊಡ್ಡ ವ್ಯಾಪಾರಿಗಳು, ಕಾಳಸಂತೆಕೋರರು ಮತ್ತು ಸಟ್ಟಾ ಕೋರರಿಗೆ ಪ್ರಯೋಜನ ತರಲು ಸರಕಾರ ತನ್ನ ಧೋರಣೆಗಳ ಮೂಲಕ ಬೆಲೆಗಳು ಏರುವಂತೆ ಮಾಡುತ್ತಿದೆ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ. ಇದು ಅದರ "ವ್ಯಾಪಾರ ಸುಗಮತೆ'ಯ ಅಭಿನ್ನ ಭಾಗವಾಗಿದೆ, ವಾಸ್ತವವಾಗಿ ಈ 'ವ್ಯಾಪಾರ ಸುಗಮತೆ' ಅಂದರೆ 'ಜನಗಳ ಲೂಟಿಗೆ ಸುಗಮತೆ' ಎಂದೇ ಅರ್ಥ ಎಂದು ಸಿಐಟಿಯು ವರ್ಣಿಸಿದೆ.

ಆಗಾಗ ಸರಕಾರ ಆವಶ್ಯಕ ವಸ್ತುಗಳ ಬೆಲೆಗಳು ಇಳಯುತ್ತಿವೆ ಎಂದು ಸುಳ್ಳು ಸೂಚ್ಯಂಕಗಳನ್ನು ತೋರಿಸುತ್ತ ಬಂದಿದೆ. ಈ ಅವಧಿಯಲ್ಲೆಲ್ಲ ತರಕಾರಿಗಳು, ಧಾನ್ಯಗಳು, ಸಾರಿಗೆ, ಆರೋಗ್ಯ ಸೇವೆಗಳು, ಔಷಧಿಗಳು, ಶಿಕ್ಷಣ ಎಲ್ಲವುಗಳ ಬೆಲೆಗಳೂ ಏರುತ್ತಲೇ ಇದ್ದವು. ಹೆಚ್ಚಿನ ರಾಜ್ಯಗಳಲ್ಲಿ ಪಡಿತರ ವ್ಯವಸ್ಥೆ ಕುಸಿದೇ ಬಿಟ್ಟಿದೆ. ಆಧಾರ್ ಜೋಡಣೆ ಸೇರಿದಂತೆ ಹಲವಾರು ಶರತ್ತುಗಳನ್ನು ಹಾಕಿ ಬಹುಪಾಲು ಬಡಜನರನ್ನು ಪಡಿತರ ವ್ಯವಸ್ಥೆಯಿಂದ ವಂಚಿಸಿ ಆಹಾರ ಭದ್ರತಾ ಕಾಯ್ದೆಯನ್ನು ಹಾಸ್ಯಾಸ್ಪದಗೊಳಿಸಲಾಗುತ್ತಿದೆ. ಪೆಟ್ರೋಲ್, ಡೀಸೆಲ್ ಬೆಲೆಗಳು ನಿಯಮಿತ ಅವಧಿಗಳಲ್ಲಿ ಏರುತ್ತಲೇ ಇವೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಏರದೇ ಇದ್ದರೂ ಅಡುಗೆ ಅನಿಲದ ಮೇಲಿನ ಸಬ್ಸಿಡಿಗಳನ್ನು ಕಡಿತ ಮಾಡಲಾಗುತ್ತಿದೆ, ಬೆಲೆಗಳನ್ನು ಏರಿಸಲಾಗುತ್ತಿದೆ. ಇವೆಲ್ಲವೂ ಎಲ್ಲ ಆವಶ್ಯಕ ಸರಕುಗಳ ಬೆಲೆಗಳ ಮೇಲೂ ಪ್ರಭಾವ ಬೀರುತ್ತಿವೆ.

ಇನ್ನೊಂದೆಡೆಯಲ್ಲಿ ರೈತರಿಗೆ ಫಲದಾಯಕ ಬೆಲೆಗಳು ಸಿಗುತ್ತಿಲ್ಲ. ಅವರ ಉತ್ಪನ್ನಗಳಿಗೆ ಮಾರುಕಟ್ಟೆಗಳಲ್ಲಿ ಆಹಾರಧಾನ್ಯಗಳು ಮತು ಇತರ ಕೃಷಿ ಉತ್ಪನ್ನಗಳ ಬೆಲೆಗಳಿಗಿಂತ ಎಷ್ಟೋ ಕಡಿಮೆ ಬೆಲೆ ಸಿಗುತ್ತಿದೆ. ಬೆಲೆಗಳು ಏರುತ್ತಲೇ ಇದ್ದರೂ, ಅದರ ನಡುವೆಯೇ ಸರಕು ಮಾರುಕಟ್ಟೆಗಳಲ್ಲಿ ಸಟ್ಟಾಕೋರತನದ ಭೀಕರ ವಿದ್ಯಮಾನವನ್ನೂ ಕಾಣುತ್ತಿದ್ದೇವೆ. ಇವು ಕಾರ್ಪೊರೇಟ್ ವ್ಯಾಪಾರಿಗಳಿಗೆ ಮತ್ತು ಸಟ್ಟಾ ಕೋರರಿಗೆ ಭಾರೀ ಲಾಭ ಗಳಿಸುವುದಕ್ಕಾಗಿಯೇ ನಡೆಯುತ್ತಿದೆ ಎಂದು ಸಿಐಟಿಯು ಹೇಳಿದೆ.

ನೋಟುರದ್ಧತಿ, ಅದರ ಬೆನ್ನಹಿಂದೆಯೇ ಜಿಎಸ್‌ಟಿ ಬೆಲೆಯೇರಿಕೆಯ ಬೆಂಕಿಗೆ ತುಪ್ಪ ಸುರಿದಿವೆ. ಮೋದಿ ಆಳ್ವಿಕೆಯಲ್ಲಿ 'ವ್ಯಾಪಾರ ಸುಗಮತೆ' ಹೆಚ್ಚುವುದರೊಂದಿಗೇ, ದೇಶ 'ಹಸಿವು ಸೂಚ್ಯಂಕ'ದಲ್ಲಿ ಕೆಳಗಿಳಿಯುತ್ತಿರುವುದು ಸುಮ್ಮನೇ ಅಲ್ಲ ಎಂದು ಅದು ಹೇಳಿದೆ.

ದೊಡ್ಡ ಬಂಡವಳಿಗರು–ವ್ಯಾಪಾರಿಗಳು–ಸಟ್ಟಾಕೋರರ ಕೂಟದ ಪ್ರಯೋಜನಕ್ಕಾಗಿ ಬೆಲೆಯೇರಿಕೆಗಳನ್ನು ಪ್ರೋತ್ಸಾಹಿಸುವ ಅಮಾನುಷ ಧೋರಣೆ

ಬೆಲೆಯೇರಿಕೆ ಮುಂದುವರೆಯುತ್ತಲೇ ಇರುವುದರಿಂದ ಜನಸಾಮಾನ್ಯರ ಊಹಿಸಲಾರದಂತಹ ಸಂಕಟಗಳನ್ನು ಅನುಭವಿಸುತ್ತಿದ್ದು ಮಾನವರಾಗಿ ಉಳಿಯುವದೇ ಕಷ್ಟವಾಗುತ್ತಿದ್ದರೆ, ಹಸಿವಿನಿಂದ ಸಾವುಗಳು ಸಂಭವಿಸುತ್ತಿದ್ದರೆ, ಸರಕಾರ ಸರಿಯಾದ ಕನಿಷ್ಟ ಕೂಲಿಯನ್ನೂ ವಂಚಿಸಿ ಅವರ ನೋವು–ಸಂಕಟಗಳನ್ನು ಹೆಚ್ಚಿಸುತ್ತಿದೆ. ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ (ಮನರೇಗ) ಯೋಜನೆ ಸೇರಿದಂತೆ ಎಲ್ಲ ಕಲ್ಯಾಣ ವೆಚ್ಚಗಳನ್ನು ತೀವ್ರವಾಗಿ ಕಡಿತಗೊಳಿಸಲಾಗುತ್ತಿದೆ. ಮನರೇಗದ ಅಡಿಯಲ್ಲಿ ಲಭ್ಯವಾಗುವ ಕೆಲಸದ ದಿನಗಳಲ್ಲಿ ತೀವ್ರ ಇಳಿಕೆ ಇದಕ್ಕೊಂದು ಸಾಕ್ಷಿ ಎಂದು ಸಿಐಟಿಯು ಅದರತ್ತ ಗಮನ ಸೆಳೆದಿದೆ.


ಹೀಗೆ ದೊಡ್ಡ ಬಂಡವಳಿಗರು–ವ್ಯಾಪಾರಿಗಳು–ಸಟ್ಟಾಕೋರರ ಕೂಟದ ಪ್ರಯೋಜನಕ್ಕಾಗಿ ಬೆಲೆಯೇರಿಕೆಗಳನ್ನು ಪ್ರೋತ್ಸಾಹಿಸುವ ಮೋದಿ ಸರಕಾರದ ಅತ್ಯಂತ ಅಮಾನುಷ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗ ದೇಶವ್ಯಾಪಿ ಪ್ರಚಾರಾಂದೋಲನವನ್ನು ತೀವ್ರಗೊಳಸಬೇಕು, ಡಿಸೆಂಬರ್ 13ರಂದು ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾದ ಸಮರಧೀರ ಪ್ರತಿಭಟನೆಗಳನ್ನು ಆರಂಭಿಸಬೇಕು. ಮೋದಿ ಸರಕಾರದ ಪ್ರತಿಮೆಗಳನ್ನು ಸುಡಬೇಕು ಎಂದು ಸಿಐಟಿಯು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಖಾಸಗಿ ಆಸ್ಪತ್ರೆಗಳು ವೈದ್ಯರುಗಳ ನಿಯಂತ್ರಣಕ್ಕೆ ಕಾನೂನು ಬೇಕು

ಸಂಪಾದಕೀಯ

ಕೆ.ಎಂ.ಇ.ಎ. (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ) 2007ರ ಕಾಯಿದೆಗೆ ಬೆಳಗಾವಿ ಅಧಿವೇಶನದಲ್ಲಿ ಸರಕಾರ ಮಂಡಿಸಲು ಹೊರಟಿರುವ ತಿದ್ದುಪಡಿಗಳ ಬಗ್ಗೆ ತೀವ್ರ ಸಾರ್ವಜನಿಕ ಚರ್ಚೆ ನಡೆಯುತ್ತಿದೆ. ಖಾಸಗಿ ಆಸ್ಪತ್ರೆಗಳು ವೈದ್ಯರುಗಳು ಇದನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. 'ಬೆಳಗಾವಿ ಚಲೋ" ನಡೆಸಿ ಮುಷ್ಕರ ಆರಂಭಿಸಿದ್ದಾರೆ. ರಾಜ್ಯದಾದ್ಯಂತ ವೈದ್ಯಕೀಯ ಸೇವೆಗಳು ಅಸ್ತವ್ಯಸ್ತವಾಗಿದ್ದು ಜನ ಪರದಾಡುವಂತಾಗಿದೆ. ಈಗಾಗಲೇ ಹಲವು ಸಾವುಗಳೂ ಸಂಭವಿಸಿವೆ. ಹೈಕೋರ್ಟು ವಿವಾದ ಪರಿಹರಿಸಲು ಮತ್ತು ವೈದ್ಯರ ಮುಷ್ಕರ ನಿಲ್ಲಿಸಲು ಗಡುವು ನೀಡಿದೆ. ರಾಜ್ಯ ಮಂತ್ರಿಮಂಡಲದಲ್ಲಿಯೂ ಕಾಂಗ್ರೆಸ್ ಶಾಸಕಾಂಗದಲ್ಲಿಯೂ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಇವೆ. ಆರೋಗ್ಯ ಮಂತ್ರಿ ರಮೇಶ್ ಕುಮಾರ್ ಕಾಯಿದೆ ಮಂಜೂರಾಗಬೇಕು ಎಂದು ಪಟ್ಟು ಹಿಡಿದಿದ್ದಾರೆ. ಬಿಜೆಪಿ ಕಾಯಿದೆಯನ್ನು ವಿರೋಧಿಸಿದ್ದು ತಾನು ಅಧಿಕಾರಕ್ಕೆ ಬಂದರೆ ಅದನ್ನು ರದ್ದು ಮಾಡುವುದಾಗಿ ಹೇಳಿದೆ. ಜನತೆಯಿಂದ, ಜನಾರೋಗ್ಯ ಚಳುವಳಿಯಿಂದ ಕಾಯಿದೆಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ.

ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯರುಗಳಿಂದ ಹಲವು ರೀತಿಯ ಕಿರುಕುಳಗಳಿಗೆ ಶೋಷಣೆಗಳಿಗೆ ಜನತೆ ಒಳಗಾಗಿದ್ದಾರೆ ಎಂಬುದರ ಬಗೆಗೆ ಯಾವುದೇ ಸಂಶಯವಿಲ್ಲ. ಇದು ಕಟು ಸತ್ಯ. ಅನಗತ್ಯ ದುಬಾರಿ ಟೆಸ್ಟುಗಳನ್ನು ಬರೆದು ಕೊಡುವುದು, ಅನಗತ್ಯ ದುಬಾರಿ ಆಪರೇಶನುಗಳನ್ನು ಮಾಡುವುದು, ಜೀವ ಉಳಿಯುವ ಸಾಧ್ಯತೆ ಇಲ್ಲದಾಗಲೂ ಸಾಯುವ ವರೆಗೆ ಐಸಿಯು ನಲ್ಲಿರಿಸಿ ಹಣ ಸುಲಿಯುವುದು, ಬಿಲ್ ಕೊಡಲು ಸಾಧ್ಯವಾಗದಿದ್ದರೆ ಹೆಣ ಕೊಡದೆ ಸತಾಯಿಸುವುದು, ಆಸ್ಪತ್ರೆಗಳು ಹಾಗೂ ವೈದ್ಯರುಗಳ ವಿವಿಧ ವೈದ್ಯಕೀಯ ಸೇವೆಗಳ ದರಗಳಿಗೆ ಯಾವುದೇ ಮಿತಿ ನಿಬಂಧನೆಗಳು ಇಲ್ಲದೆ ಮನಬಂದಂತೆ ಶುಲ್ಕ ವಿಧಿಸುವುದು – ಇವೆಲ್ಲಾ ಹೆಚ್ಚಿನ ಜನ ನೇರವಾಗಿ ಅನುಭವಿಸಿದ್ದಾರೆ. ಇಲ್ಲವೆ ತಮ್ಮ ಹತ್ತಿರದ ಸ್ನೇಹಿತ–ಸಂಬಂಧಿಗಳು ಅನುಭವಿಸಿದ್ದು ನೋಡಿದ್ದಾರೆ. ದಿನೇ ಏರುತ್ತಿರುವ ವೈದ್ಯಕೀಯ ಸೇವೆಗಳ ವೆಚ್ಚದಿಂದ ಜನ ಹೈರಾಣಾಗಿದ್ದಾರೆ. ಸಾಲಬಾಧೆಯಿಂದ ಆಗುವ ರೈತರ ಆತ್ಮಹತ್ಯೆಗಳಲ್ಲೂ ಸಾಮಾನ್ಯವಾಗಿ ಕೊನೆಯ ಇಂತಹ ಪ್ರಯತ್ನಕ್ಕೆ ತಳ್ಳುವ ಅಂಶವೆಂದರೆ ಕುಟುಂಬದಲ್ಲಿ ಅಕಾಸ್ಮಾತ್ತಾಗಿ ಬರುವ ದೊಡ್ಡ ವೈದ್ಯಕೀಯ ವೆಚ್ಚವೇ. ಖಂಡಿತ ಎಲ್ಲಾ ಆಸ್ಪತ್ರೆಗಳು ಹಾಗೂ ವೈದ್ಯರುಗಳೊಂದಿಗೆ ಇಂತಹ ಅನುಭವಗಳಾಗಿಲ್ಲ, ನಿಜ. ಗ್ರಾಮೀಣ/ಸಣ್ಣ ಪಟ್ಟಣಗಳ ಸಣ್ಣ ಆಸ್ಪತ್ರೆಗಳು, ಖಾಸಗಿ ವೈದ್ಯರುಗಳ ಧೋರಣೆ/ವರ್ತನೆಗಳಿಗೂ, ದೊಡ್ಡ ಪ್ರಭಾವಿ ಮಾಲಿಕತ್ವದ ಕಾರ್ಪೊರೆಟ್ ಆಸ್ಪತ್ರೆಗಳ ಧೋರಣೆ/ವರ್ತನೆಗಳಿಗೂ ಖಂಡಿತ ವ್ಯತ್ಯಾಸಗಳಿವೆ. ಆದರೆ ಸಾಮಾನ್ಯವಾಗಿ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯರುಗಳು ಉತ್ತಮ ಸೇವೆ ಒದಗಿಸುತ್ತಾರೆ. ಇಂತಹ ಪ್ರಕರಣಗಳು ಅಪವಾದ ಎಂಬುದಂತೂ ಖಂಡಿತ ವಾಸ್ತವದಿಂದ ಬಹಳ ದೂರದ ಮಾತು. ಆದ್ದರಿಂದ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯರುಗಳ ಕಿರುಕುಳಗಳು ಮತ್ತು ಶೋಷಣೆಗಳಿಂದ ಜನರಿಗೆ ರಕ್ಷಣೆ ನೀಡಬಲ್ಲ ಬಿಗಿ ಕಾನೂನು ಮತ್ತು ಅದರ ಕಟ್ಟು ನಿಟ್ಟಿನ ಜಾರಿ ಅಗತ್ಯ ಎಂಬುದು ನಿರ್ವಿವಾದ.



ಇವೆಲ್ಲದಕ್ಕೂ ಕಾನೂನುಗಳಿವೆ. ವೈದ್ಯರ ನೈತಿಕ ನಡತೆ, ವೃತ್ತಿ ತಪ್ಪುಗಳನ್ನು ಶಿಕ್ಷಿಸುವ ಕಾನೂನುಗಳು (ಇಂಡಿಯನ್ ಮೆಡಿಕಲ್ ಕೌನ್ಸಿಲ್ ಕಾಯಿದೆ 1956 ಇತ್ಯಾದಿ) ವ್ಯವಸ್ಥೆಗಳು (ಇಂಡಿಯನ್ ಮೆಡಿಕಲ್ ಕೌನ್ಸಿಲ್ ದೂರು ಬಗ್ಗೆ ತನಿಖೆ ನಂತರ ವೈದ್ಯರನ್ನು ಪ್ರಾಕ್ಟೀಸು ಮಾಡದಂತೆ ಶಿಕ್ಷಿಸುವುದು) ಇವೆ. ಇದೇ ರೀತಿ – ಗ್ರಾಹಕರ ರಕ್ಷಣೆ ಕಾಯಿದೆ 1986, ಕೆ.ಪಿ.ಎಂ.ಇ. 2007, ಕ್ಲಿನಿಕಲ್ ಎಸ್ಟಾಬ್ಲಿಶ್‌ಮೆಂಟ್ ಕಾಯಿದೆ 2010, ಪಿ.ಸಿ.ಪಿ.ಎನ್.ಡಿ.ಟಿ. ಕಾಯಿದೆ 1994 – ಇತ್ಯಾದಿಗಳು ಖಾಸಗಿ ಆಸ್ಪತ್ರೆಗಳು ಮತ್ತು ವೈದ್ಯರುಗಳು ಇಂತಹ ಕುಕೃತ್ಯಗಳಲ್ಲಿ ತೊಡಗಿದಾಗ ಶಿಕ್ಷಿಸಲು ನಿಯಂತ್ರಣ ಹೇರಲು ಈಗಾಗಲೇ ಇವೆ. ಸಂತ್ರಸ್ತರು ದೂರುಗಳನ್ನೂ ಕೊಡುತ್ತಿಲ್ಲ. ಸರಕಾರ ಈ ವ್ಯವಸ್ಥೆಗಳು ಸರಿಯಾಗಿ ಕೆಲಸ ನಡೆಸುವಂತೆ ಮುತುವರ್ಜಿ ವಹಿಸುತ್ತಿಲ್ಲ. ಕಾನೂನುಗಳಿವೆ. ಅದರ ಕಟ್ಟು ನಿಟ್ಟಿನ ಜಾರಿಯದ್ದೇ ಸಮಸ್ಯೆ. ಎಂಬುದು ಖಾಸಗಿ ವೈದ್ಯರುಗಳ ಆಸ್ಪತ್ರೆ ಮಾಲಿಕರ ವಾದ. ಕಾನೂನುಗಳಿವೆ ನಿಜ. ಆದರೆ ಅವು ಬಹಳ ದುರ್ಬಲವಾಗಿವೆ. ಈಗಿನ ಕಾನೂನು ಪ್ರಕ್ರಿಯೆ ಬಳಸಿ ಸಂತ್ರಸ್ತ ಜನಕ್ಕೆ ಪರಿಹಾರ ಸಿಗುತ್ತಿಲ್ಲ. ವೈದ್ಯಕೀಯ ಸೇವೆಗಳು ಸಂಕೀರ್ಣ ಮತ್ತು ಭಾವನಾತ್ಮಕವಾಗಿ ಜರ್ಝರಿತಗೊಳಿಸುವಂತಹುದು ಆಗಿದ್ದು, ಈಗಿನ ಕಾನೂನು ಪ್ರಕ್ರಿಯೆ ವಿಳಂಬದಿಂದ ಕೂಡಿದ್ದು, ಅದಕ್ಕೆ ಬೇಕಾದ ಪುರಾವೆ ದೊರಕಿಸುವುದು ಕಷ್ಟಸಾಧ್ಯವಾಗಿರುವುದೂ, ಕೊನೆಗೂ ಯಾವುದೇ ಪರಿಹಾರ ನೀಡುವಂತಹುದಲ್ಲ ಎಂಬುದೂ ದೂರುಗಳು ದಾಖಲಾಗದಿರುವುದಕ್ಕೆ ಕಾರಣವಿರಬಹುದು. ಆದ್ದರಿಂದ ಕಾನೂನು ಬಲಗೊಳಿಸುವುದು, ಪರಿಹಾರ ಪ್ರಕ್ರಿಯೆ ಬದಲಾಯಿಸಿ ತ್ವರಿತಗೊಳಿಸುವುದು ಈ ತಿದ್ದುಪಡಿಗಳ ಉದ್ದೇಶ ಎಂಬುದು ಸರಕಾರದ ವಾದ. ವೈದ್ಯರುಗಳ ಮೇಲೆ ದಾಳಿ–ದಾಂಧಲೆ ಮಾಡುವ (ಶ್ರೀಮಂತರ ಅಧಿಕಾರಸ್ಥರ ಸೊಕ್ಕಿನ ನಡೆ ಹೊರತು ಪಡಿಸಿ) ಪ್ರವೃತ್ತಿ ಬೆಳೆಯುತ್ತಿರುವುದಕ್ಕೂ ಈಗಿನ ವ್ಯವಸ್ಥೆಯ ಬಗ್ಗೆ ಹತಾಶೆಯೇ ಕಾರಣವಿರಬಹುದು.

ಸಾಕಷ್ಟು ಅಧಿಕಾರ ಇರುವ ಸಮಯ ಮಿತಿಯೊಳಗೆ ತ್ವರಿತವಾಗಿ ದೂರುಗಳಿಗೆ ಪರಿಹಾರ ಒದಗಿಸುವ ಜಿಲ್ಲಾ ಮಟ್ಟದ ಉನ್ನತ ಮಟ್ಟದ ಕುಂದುಕೊರತೆ ಸಮಿತಿಯ ರಚನೆಯನ್ನು ಮಾಡುವ ತಿದ್ದುಪಡಿ ಬಗ್ಗೆ ವೈದ್ಯರುಗಳ ಖಾಸಗಿ ಆಸ್ಪತ್ರೆಗಳ ಮಾಲಿಕರ ಮುಖ್ಯ ತಕರಾರು. ಸಮಿತಿಯ ರಚನೆಯ ವಿವರಗಳ ಬಗ್ಗೆ (ಕಲೆಕ್ಟರ್ ಅಧ್ಯಕ್ಷತೆ, ಎಲ್ಲಾ ವಿಭಾಗಗಳ ಪ್ರಾತಿನಿಧ್ಯ, ಅಗತ್ಯವಾದಷ್ಟು ವೈದ್ಯಕೀಯ ಪರಿಣತಿ ಇತ್ಯಾದಿ), ಸಮಿತಿ ಅನುಸರಿಸಬೇಕಾದ ವಿಧಿ–ವಿಧಾನಗಳ ಬಗ್ಗೆ (ಪ್ರಾಕೃತಿಕ ನ್ಯಾಯ, ಸಂವಿಧಾನ–ಕಾನೂನು ಚೌಕಟ್ಟಿನೊಳಗೆ ಕೆಲಸ) ಖಂಡಿತ ಸಂವಾದ ಬೇಕಾಗಬಹುದು. ಆದರೆ ಇಂತಹ ಒಂದು ವ್ಯವಸ್ಥೆ ಅತ್ಯಗತ್ಯ ಎಂಬುದರ ಬಗ್ಗೆ ಯಾವುದೇ ಸಂಶಯವಿಲ್ಲ. ಇಂತಹ ವ್ಯವಸ್ಥೆಯ ಅಗತ್ಯವನ್ನೇ ಪ್ರಶ್ನಿಸುವುದನ್ನು ಸರಕಾರ ಮನ್ನಿಸಬಾರದು.

ಅದೇ ರೀತಿ "ತಜ್ಞರ ಸಮಿತಿ ನಿಗದಿ ಮಾಡಿದ ಸೇವಾ ದರಗಳ ಬಗ್ಗೆ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳ ಜತೆ ಸಮಾಲೋಚನೆ ನಂತರ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು" ಎಂಬ ಸ್ಪಷ್ಟೀಕರಣದ ನಂತರವೂ ಸೇವಾ ದರದ ನಿಯಂತ್ರಣವನ್ನು ವೈದ್ಯರು ಮತ್ತು ಖಾಸಗಿ ಆಸ್ಪತ್ರೆಗಳ ಮಾಲಿಕರು ವಿರೋಧಿಸುವುದು ಖಂಡಿತ ಸಲ್ಲ. ಸಮಾನ ದರ ಕಾರ್ಯಸಾಧ್ಯ ವ್ಯವಸ್ಥೆಯಾಗಲಿಕ್ಕಿಲ್ಲ. ಸೇವಾ ದರ ನಿರ್ಧರಿಸುವಾಗ ಆಸ್ಪತ್ರೆಯ ಗಾತ್ರ, ವಿಶಿಷ್ಟ ಸೇವೆಗಳು, ಸ್ಥಾಪನಾ ವೆಚ್ಚ ಇತ್ಯಾದಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂಬುದು ಸಂವಾದದ ವಿಷಯವಾಗಬಹುದು. ಆದರೆ ಸೇವಾ ದರದ ನಿಯಂತ್ರಣ ಈಗಾಗಲೇ ಹಲವು ಆರ್ಥಿಕ ಹೊಡೆತಗಳಿಂದ ಬೆಂದಿರುವ ಒಕ್ಕೊರಲಿನ ಜನತೆಯ ಒತ್ತಾಯ.

ಖಾಸಗಿ ವೈದ್ಯರು, ಆಸ್ಪತ್ರೆಗಳು ಅನುಸರಿಬೇಕಾದ ಕನಿಷ್ಟ ಮಾನದಂಡಗಳು, ನಿರ್ವಹಣಾ ವಿಧಿ–ವಿಧಾನಗಳು, ಸೇವಾ ಮಟ್ಟ ಇತ್ಯಾದಿ ಸಹ ಸಾರ್ವಜನಿಕರ ದೃಷ್ಟಿಯಿಂದ ಅಗತ್ಯ. ವಿವರಗಳ ಬಗ್ಗೆ ಸಂವಾದ ಆಗಬಹುದು. ಆದರೆ ಯಾವುದನ್ನೂ ಒಪ್ಪಲೂ ಸಾಧ್ಯವಿಲ್ಲ ಎಂಬ ವೈದ್ಯರು ಮತ್ತು ಖಾಸಗಿ ಆಸ್ಪತ್ರೆಗಳ ಮಾಲಿಕರ ಧೋರಣೆ ಒಪ್ಪತಕ್ಕದ್ದಲ್ಲ.

ಸರ್ಕಾರಿ ಆಸ್ಪತ್ರೆಗಳು, ವೈದ್ಯರ ಮೇಲೆ ಸಹ ಇಂತಹುದೇ ನಿಯಂತ್ರಣ ಇರಬೇಕು. ಬರಿಯ ಖಾಸಗಿ ಆಸ್ಪತ್ರೆಗಳು, ವೈದ್ಯರ ಮೇಲೆ ಇಂತಹ ನಿಯಂತ್ರಣ ಹೇರುವುದು ತಾರತಮ್ಯವಲ್ಲವೇ? ಅವರನ್ನೂ ಈ ಕಾನೂನಿನ ಚೌಕಟ್ಟಿಗೆ ಸೇರಿಸಬೇಕಲ್ಲವೇ? – ಎಂಬುದು ಖಾಸಗಿ ವೈದ್ಯರು ಮತ್ತು ಆಸ್ಪತ್ರೆಗಳ ಮಾಲಿಕರ ಪ್ರಶ್ನೆ. ಸರಕಾರಿ ಅಸ್ಪತ್ರೆಗಳ, ವೈದ್ಯರ ಸೇವಾ ಗುಣಮಟ್ಟ ಸಹ ಅತ್ಯಂತ ಅತೃಪ್ತಿಕರವಾಗಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ವೈದ್ಯರ, ಇತರ ತರಬೇತಿ ಪಡೆದ ಸಿಬ್ಬಂದಿ, ಮೂಲ ಸೌಕರ್ಯಗಳ ತೀವ್ರ ಕೊರತೆ ಇದೆ – ಎಂಬುದರ ಬಗೆಗೆ ಎರಡು ಮಾತಿಲ್ಲ. ಆದರೆ ಸರಕಾರಿ ಅಸ್ಪತ್ರೆಗಳು ಮತ್ತು ವೈದ್ಯರು ಚುನಾಯಿತ ಸರಕಾರದ ನೇರ ನಿಯಂತ್ರಣದಲ್ಲಿ ಇದ್ದು, ಲೋಕಾಯುಕ್ತಕ್ಕೆ ದೂರು ಸೇರಿದಂತೆ ಆ ಕುಂದುಕೊರತೆಗಳಿಗೆ ಪರಿಹಾರಕ್ಕೆ ಬೇರೆ ವ್ಯವಸ್ಥೆ ಇದೆ. ಆದೂ ಕೆಲಸ ಮಾಡುತ್ತಿಲ್ಲ ಎಂಬುದೂ ಅಷ್ಟೇ ನಿಜ. ಆದರೆ ಇವೆರಡನ್ನೂ ಒಂದೇ ತಕ್ಕಡಿಯಲ್ಲಿ ತೂಗುವುದು ಸರಕಾರಿ ಅಸ್ಪತ್ರೆಗಳು ಮತ್ತು ವೈದ್ಯರನ್ನು ಈ ಕಾನೂನಿನ ಚೌಕಟ್ಟಿನಡಿಯಲ್ಲಿ ತರುವುದು ಸರಿಯೇ ಎಂಬುದು ಚರ್ಚಾಸ್ಪದ. ಸರ್ಕಾರಿ ಆರೋಗ್ಯ ವ್ಯವಸ್ಥೆ ಖಾಸಗಿ ವ್ಯವಸ್ಥೆಯಂತೆ ವಾಣಿಜ್ಯ ಉದ್ದೇಶದ್ದು ಅಲ್ಲ. ಅದಕ್ಕೆ ರೋಗ ತಡೆಯುವಿಕೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣ, ರೋಗಗಳ ಬಗ್ಗೆ ಕಣ್ಗಾವಲು ಮುಂತಾದ ಇತರ ಹಲವು ಜವಾಬ್ದಾರಿಗಳು ಇವೆ. ಆದರೆ ನಾಗರಿಕರು ಮತ್ತು ರೋಗಿಗಳಿಗೆ ಸರ್ಕಾರಿ ಆರೋಗ್ಯ ಸೇವೆಯನ್ನು ಹಕ್ಕಾಗಿಸುವ, ಸೇವಾ ಮಟ್ಟಕ್ಕೆ ನಿಗದಿತ ಅಧಿಕಾರಿಗಳನ್ನು ಜವಾಬ್ದಾರರಾಗಿಸುವ ವ್ಯವಸ್ಥೆಯಂತೂ ಬೇಕು. ಸರಕಾರಿ ಆಸ್ಪತ್ರೆ ಮತ್ತು ವೈದ್ಯರ ಭ್ರಷ್ಟಾಚಾರ ತಡೆಗೆ ವಿಶೇಷ ಕ್ರಮಗಳು ತುರ್ತಾಗಿ ಬೇಕು.

ಖಾಸಗಿ ವೈದ್ಯರು ಕೆ.ಪಿ.ಎಂ.ಎ. 2017 ತಿದ್ದುಪಡಿ ವೈದ್ಯರು ಮತ್ತು ರೋಗಿಗಳ ನಡುವೆ ಇರುವ ಇರಬೇಕಾದ ವಿಶ್ವಾಸವನ್ನು ನಾಶ ಮಾಡುತ್ತದೆ ಎಂದು ಹೇಳುತ್ತಾರೆ. ಇದು ನಿಜವೇ? ಖಾಸಗಿ ವೈದ್ಯರು ಅಂತಹ ವಿಶ್ವಾಸವನ್ನು ಸಾರ್ವತ್ರಿಕವಾಗಿ ಗಳಿಸಿಕೊಂಡಿದ್ದಾರೆಯೇ? ಉಳಿಸಿಕೊಂಡಿದ್ದಾರೆಯೇ? ಅದರಲ್ಲೂ ಕಾರ್ಪೊರೆಟ್ ಆಸ್ಪತ್ರೆ ಮಾಲಿಕರ ಆಪರೇಶನುಗಳ ಟಾರ್ಗೆಟ್ ಗಳನ್ನು ಇನ್ನಿತರ ಅನೈತಿಕ ಕ್ರಮಗಳನ್ನು ಯಾವುದೇ ಪ್ರತಿರೋಧ ಇಲ್ಲದೆ ಒಪ್ಪಿಕೊಂಡು ಅದನ್ನು ರೋಗಿಗಳ ಮೇಲೆ ಹೇರುವ ವೈದ್ಯರು ಈ ವಿಶ್ವಾಸ ಕಳೆದುಕೊಂಡಿರುವುದೇ ಈಗಿನ ಪರಿಸ್ಥಿತಿಗೆ ಮುಖ್ಯ ಕಾರಣ. ಲಾಭದ ದಾಹ ವ್ಯಾಪಕವಾಗಿದ್ದು ಹಲವು ಖಾಸಗಿಯಾಗಿ ಪ್ರಾಕ್ಟೀಸು ಮಾಡುವ ವೈದ್ಯರೂ, ಸಣ್ಣ ಆಸ್ಪತ್ರೆಗಳೂ ಕಾರ್ಪೊರೆಟ್ ಆಸ್ಪತ್ರೆಗಳ ಹಾದಿ ತುಳಿದು ವಿಶ್ವಾಸ ಕಳೆದುಕೊಂಡಿಲ್ಲವೇ? ಈಗಿನ ವೈದ್ಯರ ಚಳುವಳಿಯ ಹಿಂದಿರುವುದು ದೊಡ್ಡ ಖಾಸಗಿ ಮತ್ತು ಕಾರ್ಪೊರೆಟ್ ಆಸ್ಪತ್ರೆಗಳ ಮಾಲಿಕರ ಲಾಬಿಯಲ್ಲವೇ? ಕಾಂಗ್ರೆಸ್ ನಲ್ಲಿ ಈ ಬಗ್ಗೆ **ಪುಟ 4 ಕ್ಕೆ**

ಕರ್ನಾಟಕ ಖಾಸಗಿ ಆಸ್ಪತ್ರೆಗಳ ವಿಧೇಯಕ ತಿದ್ದುಪಡಿ 2017

– ಡಾ. ಪ್ರಕಾಶ್ ಸಿ. ರಾವ್
ಮಾಜಿ ಅಧ್ಯಕ್ಷರು ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು
ಮಾಜಿ ಅಧ್ಯಕ್ಷರು, ಜನಾರೋಗ್ಯ ಆಂದೋಲನ, ಕರ್ನಾಟಕ

ಹಿನ್ನೆಲೆ

ವೈದ್ಯಕೀಯ ಕ್ಷೇತ್ರದಲ್ಲಿ ಸರ್ಕಾರಿ ಹಾಗೂ ಖಾಸಗಿ ವ್ಯವಸ್ಥೆಗಳಿವೆ. ನಾವು ಈಗ ಕೇವಲ ಖಾಸಗಿ ಆರೋಗ್ಯ ವ್ಯವಸ್ಥೆ ಹಾಗೂ ಅದಕ್ಕೆ ಸಂಬಂಧಿಸಿದ ವಿಧೇಯಕ ತಿದ್ದುಪಡಿಗಳನ್ನು ಚರ್ಚಿಸುತ್ತಿದ್ದೇವೆ. ಎನ್‌ಎಸ್‌ಎಸ್‌ಓ (NSSO) ಪ್ರಕಾರ 60ನೇ ಸುತ್ತಿನ ವರದಿಯಲ್ಲಿ ಭಾರತದಲಿ 80% ಹೊರರೋಗಿಗಳ ಆರೋಗ್ಯ ವ್ಯವಸ್ಥೆ ಹಾಗೂ 60% ಒಳರೋಗಿಗಳ ಆರೋಗ್ಯ ವ್ಯವಸ್ಥೆ ಖಾಸಗಿ ಆಸ್ಪತ್ರೆಗಳ ಹಾಗೂ ಕ್ಲಿನಿಕ್‌ಗಳ ಹತೋಟಿಯಲ್ಲಿದೆ. ಜನರ ಜೇಬಿನಿಂದ ಆರೋಗ್ಯ ವೆಚ್ಚಕ್ಕೆ 59–71% ಹಣ ಖರ್ಚಾಗುತ್ತಿದೆ. ಆರೋಗ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಆದ್ದರಿಂದ ಈ ವೆಚ್ಚ ಅತಿ ಹೆಚ್ಚು ಎಂದು ಹೇಳಬಹುದು. ಈಗ ಖಾಸಗೀ ಕ್ಷೇತ್ರದ ವ್ಯಾಪ್ತಿ ದಿನನಿತ್ಯ ಹೆಚ್ಚುತ್ತಿದೆ. ಇದಕ್ಕೆ ಕಾರಣ ಜಾಗತೀಕರಣ ಹಾಗೂ ವ್ಯಾಪಾರೀಕರಣ ನೀತಿ. ಈ ನೀತಿಯನ್ನು ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಖಾಸಗಿ ಕಾರ್ಪೋರೇಟ್ ಧಣಿಗಳು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬೆಂಗಳೂರಿನಲ್ಲಿ 15 ವೈದ್ಯಕೀಯ ಕಾಲೇಜುಗಳು, 10ಕ್ಕಿಂತ ಹೆಚ್ಚು ಕಾರ್ಪೋರೇಟ್ ಆಸ್ಪತ್ರೆಗಳು ಹಾಗೂ 100ಕ್ಕಿಂತ ಹೆಚ್ಚು ಚಾರಿಟಿ ಆಸ್ಪತ್ರೆಗಳಿದ್ದು, ಇವು ಕಾರ್ಪೋರೇಟ್ ವ್ಯವಸ್ಥೆ ಹಾಗೂ ವೈದ್ಯರಲ್ಲದವರ ಒಡೆತನದಲ್ಲಿದೆ. ಖಾಸಗಿ ವೈದ್ಯಕೀಯ ಇಂದು ವ್ಯಾಪಾರವಾಗಿದೆ. ಹಾಗೂ ವೈದ್ಯರು ನೇರವಾಗಿ ಈ ಕಾರ್ಪೋರೇಟ್ ವ್ಯವಸ್ಥೆಗೆ ಸಹಾಯಕರಾಗಿದ್ದಾರೆ. ಈ ಖಾಸಗಿ ವ್ಯವಸ್ಥೆ ಅನಿಯಂತ್ರಿತವಾಗಿದ್ದು, ಕನಿಷ್ಠ ನಿಯಂತ್ರಣವನ್ನು ಹೊಂದದಾಗಿದೆ. ಈಗ ವಿಧೇಯಕ ನಿಯಂತ್ರಣ ತರಲು ಇಚ್ಛಿಸಿದಕ್ಕೆ ವೈದ್ಯರ ವಿರೋಧವೆಂದು ತೋರಿದರೂ ಅದು ಕಾರ್ಪೋರೇಟ್‌ಗಳ ವಿರೋಧವಾಗಿದೆ. ಈ ಕೇಂದ್ರಗಳಲ್ಲಿ ಆರೋಗ್ಯದ ವೆಚ್ಚ ವಿಪರೀತವಾಗಿದ್ದು, ಜನಸಾಮಾನ್ಯರಿಗೆ ಎಟುಕದಂತಾಗಿದೆ. ಜನಸಾಮಾನ್ಯರಿಗೆ ಗುಣಮಟ್ಟದ ಚಿಕಿತ್ಸೆಯೂ ದೊರೆಯದಾಗಿದೆ. ಚಿಕಿತ್ಸೆಯಲ್ಲಿ ನೀತಿ ಸಂಹಿತೆಯನ್ನು ಪಾಲಿಸದಿದ್ದುದು ಕಂಡುಬರುತ್ತದೆ. ಈ ಕೇಂದ್ರಗಳಲ್ಲಿ ಅನಗತ್ಯ ಪ್ರಯೋಗಾಲಯದ ಪರೀಕ್ಷೆಗಳು ಆಸ್ಪತ್ರೆಗೆ ದಾಖಲು ತುರ್ತು ಚಿಕಿತ್ಸಾ ಘಟಕಕ್ಕೆ (Intensive Care Unit) ದಾಖಲಾತಿ ಹಾಗೂ ವೈದ್ಯಕೀಯ ನಿರ್ಲಕ್ಷ, ದುಷ್ಕೃತ್ಯ (Malpractice) ವ್ಯಾಪಕವಾಗಿ ಕಂಡುಬರುತ್ತದೆ.

ವೈದ್ಯರಿಗೆ ರೋಗಿಗಳನ್ನು ಕಳುಹಿಸಿದುದ್ದಕ್ಕಾಗಿ ಪ್ರಯೋಗಾಲಯ ಹಾಗೂ ಆಸ್ಪತ್ರೆಗೆ ಕೊಡುವ ಹಣದಿಂದ ಪಾಲು ಕೊಡುವ– ಕಟ್ಸ್ (Cuts), ಉಡುಗೊರೆ (ಬೇರೆ ದೇಶಕ್ಕೆ ಮೋಜಿಗಾಗಿ ತಿರುಗಾಡಲು ಕಳುಹಿಸುವುದು) ಇತ್ಯಾದಿಗಳನ್ನು ಈ ಕಾರ್ಪೋರೇಟ್ ವ್ಯವಸ್ಥೆ ಮಾಡುತ್ತಿದೆ. ಅನೇಕ ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರಿ ಆಸ್ಪತ್ರೆಗಳಿಂದ ರೋಗಿಗಳನ್ನು ಪ್ರಯೋಗಾಲಯ ಪರೀಕ್ಷೆಗೆ ಹಾಗೂ ಚಿಕಿತ್ಸೆಗೆ ಕಳುಹಿಸಲಾಗುವುದು. ಸರ್ಕಾರಿ ವೈದ್ಯರು ಈ ಸವಲತ್ತಿನಿಂದ ಭ್ರಷ್ಟರಾಗಿದ್ದಾರೆ. ಈ ಖಾಸಗಿ ಆಸ್ಪತ್ರೆಗಳಲ್ಲಿ ಅನಗತ್ಯವಾಗಿ ರೋಗಿಗಳನ್ನು ದೀರ್ಘ ಸಮಯದವರೆಗೆ ಉಳಿಸಿಕೊಳ್ಳುವ ಪದ್ಧತಿಯೂ (ಅನಗತ್ಯ ಆಸ್ಪತ್ರೆ ವೆಚ್ಚ) ವ್ಯಾಪಕವಾಗಿ ಕಂಡುಬರುತ್ತದೆ. ರೋಗಿಗಳಿಗೆ ಅನಗತ್ಯ ದುಬಾರಿ ಔಷಧಿಗಳನ್ನು ಬರೆದುಕೊಡುವುದು, ಅನೇಕರನ್ನು ಔಷಧಿ ಪ್ರಯೋಗಗಳಿಗೆ ಮಾಹಿತಿ ಕೊಡದೆ ದಾಖಲು ಮಾಡಿಕೊಳ್ಳುವುದು ಸಾಮಾನ್ಯವಾಗಿದೆ. ಇವೆಲ್ಲವುಗಳನ್ನು ಹಗಲು ದರೋಡೆ ಎಂದು ಕರೆದರೂ ಅಡ್ಡಿಯಿಲ್ಲ.

ಈ ಬೆಳವಣಿಗೆಗಳನ್ನು ಗಮನಿಸಿ ಸರ್ಕಾರ 2007ರಲ್ಲಿಯೇ ಈ ಖಾಸಗಿ ಆಸ್ಪತ್ರೆಗಳ ವಿಧೇಯಕವನ್ನು ಜಾರಿ ಮಾಡಿತ್ತು. ಈಗ ಅದಕ್ಕೆ ತಿದ್ದುಪಡಿ ಮಾಡಿ ಪುನಃ ಜಾರಿಗೆ ತರಲು ಮುಂದಾಗಿದೆ. ಈ ತಿದ್ದುಪಡಿಯಿಂದ ಖಾಸಗಿ ಕಾರ್ಪೋರೇಟ್‌ಗಳು (ವೈದ್ಯರು) ಅಸಮಾಧಾನಗೊಂಡಿದ್ದಾರೆ. ಕಾರಣ ಅವರ ಆದಾಯಕ್ಕೆ ಕಡಿವಾಣ ಬೀಳಲಿದೆ. ಆದ್ದರಿಂದ ಕರ್ನಾಟಕಾದ್ಯಂತ ಖಾಸಗಿ ವೈದ್ಯರು ಈಗ ಸರ್ಕಾರ ಮಂಡಿಸಲಾಗುವ ವಿಧೇಯಕದ ಬಗ್ಗೆ ಪ್ರತಿಭಟನೆ ಮಾಡುತ್ತಿದ್ದಾರೆ. ಅವರ ಪ್ರತಿಭಟನೆಗೆ ಅವರು ಕೊಡುವ ಕಾರಣಗಳು ಈ ರೀತಿ ಇವೆ.

1. ನಮ್ಮ ಆಸ್ಪತ್ರೆ ನಮ್ಮ ಬಂಡವಾಳದಿಂದ ನಡೆಯುತ್ತದೆ. ನಮ್ಮಿಷ್ಟ ಬಂದಂತೆ ನಾವು ರೋಗಿಯಿಂದ ಶುಲ್ಕ ತೆಗೆದುಕೊಳ್ಳುತ್ತೇವೆ. ಆಸ್ಪತ್ರೆ ತೆರೆಯಲು ಮಾಡಿದ ಖರ್ಚಿಗೆ ಅನುಸಾರವಾಗಿ (ಈ.ಎಂ.ಐ, ಸಾಲ, ಬಂಡವಾಳ) ಶುಲ್ಕ ತೆಗೆದುಕೊಳ್ಳುತ್ತೇವೆ. ನೀವು ವಿಧಿಸುವ ಶುಲ್ಕಕ್ಕೆ ಅನುಸಾರವಾಗಿ ಚಿಕಿತ್ಸೆ ಹೇಗೆ ನೀಡುವುದು?
2. ಈ ವಿಧೇಯಕ ಜಾರಿ ಮಾಡಿದರೆ ವೈದ್ಯರ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ.
3. ಈಗ ಚಿಕಿತ್ಸೆಗೆ ಸರ್ಕಾರ ಶುಲ್ಕ ನಿಗದಿ ಮಾಡಿದರೆ ನಮಗೆ ಅನ್ಯಾಯವಾಗುತ್ತದೆ.
4. ಜಿಲ್ಲಾ ಕುಂದುಕೊರತೆ ಪರಿಹಾರ ಸಮಿತಿ ನಿರ್ಮಿಸುತ್ತಿದ್ದೀರಿ, ಅಲ್ಲಿ ಜಿಲ್ಲಾ ಪಂಚಾಯತ್ ಸದಸ್ಯ ಜಿಲ್ಲಾ ವೈದ್ಯಾಧಿಕಾರಿ, ಜಿಲ್ಲಾಧಿಕಾರಿ ಹಾಗೂ ಒಬ್ಬ ಆಯುರ್ವೇದಿಕ್ ವೈದ್ಯ ಇರುತ್ತಾರೆ. ಇವರೆದುರು ನಾವು ಕೈಕಟ್ಟಿ ನಿಂತು ನಮ್ಮ ಮನವಿ ನೀಡಬೇಕಾಗುತ್ತದೆ. ಹಾಗೂ ನಾವು ನಮ್ಮ ವಿಚಾರಣೆಯ ಸಮಯದಲ್ಲಿ ವಕೀಲರ ಸಹಾಯವನ್ನು ಹೊಂದುವಂತಿಲ್ಲ. ಭಯೋತ್ಪಾದಕ ಕಸಬ್ ವಿಚಾರಣೆಯ ಸಮಯದಲ್ಲಿ ಅವನಿಗೂ ಸರ್ಕಾರ ವಕೀಲನನ್ನು ನೀಡಿತ್ತು. ಆದರೆ ಈಗ ನೀವು ನಮ್ಮ ವಿಚಾರಣೆಯ ವೇಳೆಗೆ ವಕೀಲರ ಸಹಾಯವನ್ನು ನಿರಾಕರಿಸುತ್ತಿದ್ದೀರಿ. ನಮ್ಮನ್ನು ವಿಚಾರಣೆ ಮಾಡುವ ಅಧಿಕಾರಿಗಳು ಅರ್ಹತೆ ಇಲ್ಲದವರು. ಇದಲ್ಲದೆ ಅವರು ನಮ್ಮ ತಪ್ಪಿಗೆ 5 ವರ್ಷ ಜೈಲು ಶಿಕ್ಷೆ ಅಥವಾ 5 ಲಕ್ಷ ರೂಪಾಯಿ ದಂಡ ವಿಧಿಸುವ ಸಾಧ್ಯತೆ ಇದೆ. ಇದು ನ್ಯಾಯಸಮ್ಮತವಲ್ಲ.

ವೈದ್ಯರು ಜನಸಾಮಾನ್ಯರಿಗೆ ದೊರಕದ ವೈದ್ಯ ಸೇವೆಗಳ ಬಗ್ಗೆ ಹಿಂದೆ ಸರ್ಕಾರಕ್ಕೆ ಎಂದೂ ಮನವಿ ಮಾಡಿಲ್ಲ ಹಾಗೂ ಪ್ರತಿಭಟನೆಯನ್ನೂ ಮಾಡಿಲ್ಲ. ಆದರೆ ಈಗ ತಮಗೆ ಬಂದ ಆಪತ್ತಿಗೆ ಅರ್ಥಹೀನ ಕಾರಣಗಳನ್ನು ನೀಡುತ್ತಾ (ಉದಾ: ಕಸಬ್ ಹೋಲಿಕೆ) ಮುಂದೆ ಬಂದಿದ್ದಾರೆ!

ಈ ವಿಧೇಯಕ ವೈದ್ಯರಿಗೆ ಭಯ ಹುಟ್ಟಿಸಿದೆ. "ಈ ಕೂಡಲೆ ಈ ವಿಧೇಯಕವನ್ನು ಹಿಂದೆ ತೆಗೆದುಕೊಳ್ಳಬೇಕು, ಜಿಲ್ಲಾ ಕುಂದುಕೊರತೆ ಪರಿಹಾರ ಸಮಿತಿಯನ್ನು ರದ್ದುಗೊಳಿಸಬೇಕು" ಎಂದು ಕೇಳುತ್ತಿದ್ದಾರೆ. ವೈದ್ಯರ ಈ ಸಂಘಟನೆಗಳು ಆರೋಗ್ಯ ಮಂತ್ರಿಗಳ ಮೇಲೆ ಕೋಪಗೊಂಡು ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ನೀಡಲು ಕೇಳುತ್ತಿದ್ದಾರೆ.

ಚರ್ಚೆ

ಜಾಗತೀಕರಣ, ಖಾಸಗೀಕರಣ ಆರೋಗ್ಯ ಕ್ಷೇತ್ರದಲ್ಲಿ ಹೊಸ ಸಮಸ್ಯೆಯನ್ನು ಹುಟ್ಟಿಹಾಕಿವೆ. ವೈದ್ಯ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳನ್ನು ಸರ್ಕಾರಗಳು ಮೊದಲಿನಿಂದ ಕಡೆಗಣಿಸುತ್ತಾ ಬಂದಿವೆ. ಇದರ ಪರಿಣಾಮವಾಗಿ ಇಂದು ಇಂತಹ ಪರಿಸ್ಥಿತಿ ಬಂದಿವೆ. ಈಗ ಸರ್ಕಾರ ಆರೋಗ್ಯ ವ್ಯವಸ್ಥೆಯನ್ನು ನಿಯಂತ್ರಣ ಮಾಡಲು ಹೊರಟಿದೆ ಹಾಗೂ ಅದು ಅಗತ್ಯವಾಗಿದೆ. ಸರ್ಕಾರ ಆರೋಗ್ಯ ಕ್ಷೇತ್ರದಲ್ಲಿ ಜನಪರವಾದ ಬದಲಾವಣೆ ತರಲೇಬೇಕು.

ಈಗ ಮಂಡಿಸಲಿರುವ ವಿಧೇಯಕದಲ್ಲಿರುವ ಕೆಲವು (ಎರಡು) ಷರತ್ತುಗಳು ಕಠಿಣವಾಗಿದೆ ಎಂದು ವೈದ್ಯರು ಅಭಿಪ್ರಾಯಪಡುತ್ತಾರೆ ಹಾಗೂ ಅದು ಸರಿಯೇ. ಸರ್ಕಾರ ಅದನ್ನು ವೈದ್ಯರೊಂದಿಗೆ ಕುಳಿತು ಚರ್ಚೆ ಮಾಡಿ ಸರಿಪಡಿಸಬೇಕು. ಆದರೆ ಸರ್ಕಾರ ಇದನ್ನು ಮಾಡುತ್ತಿಲ್ಲ. ಸರ್ಕಾರಿ ವ್ಯವಸ್ಥೆಯ ಕೊರತೆಯಿಂದಾಗಿ ಈಗ ಖಾಸಗೀ ವ್ಯವಸ್ಥೆ ಅನಿವಾರ್ಯವಾಗಿದೆ ಹಾಗೂ ಅದು ಕಾರ್ಪೋರೇಟ್ ಧಣಿಗಳಿಗೆ ತಿಳಿದಿದೆ. ಆದ್ದರಿಂದ ಅವರು ವೈದ್ಯರನ್ನು ಪ್ರತಿಭಟನೆಗೆ ಪುಸಲಾಯಿಸುತ್ತಿದ್ದಾರೆ. ಸರ್ಕಾರ ಜನಪರವಾಗಿದ್ದರೆ, ಸಾಧ್ಯವಾದಷ್ಟು ಬೇಗ ಚಿಕಿತ್ಸೆಯ ಕೊರತೆಯಿಂದ ಆಗುತ್ತಿರುವ ಸಾವುಗಳನ್ನು ತಡೆಗಟ್ಟಬೇಕು ಹಾಗೂ ಜನರಿಗೆ ಆರೋಗ್ಯ ನೀಡುವಂತೆ ಮಾಡಬೇಕು. ವೈದ್ಯರೊಂದಿಗೆ ಚರ್ಚಿಸಿ ಮುಷ್ಕರವನ್ನು ಹಿಂತೆಗೆದುಕೊಳ್ಳಲು ಕೇಳಿಕೊಳ್ಳಬೇಕು. ಖಾಸಗಿ ವೈದ್ಯರ ಹಲವಾರು ಬೇಡಿಕೆಗಳು ಸಮಂಜಸವಲ್ಲ ಹಾಗೂ ಸಾಧ್ಯವಾದರೆ ಇದನ್ನು ವೈದ್ಯರಿಗೆ ಮನವರಿಕೆ ಮಾಡಿಕೊಡಬೇಕು. ವೈದ್ಯರು ಒಪ್ಪದಿದ್ದರೆ ವಿಧೇಯಕವನ್ನು ಜಾರಿಗೊಳಿಸಬೇಕು. ಒಟ್ಟಾರೆ ಹೇಳುವುದಾದರೆ ಸಮಸ್ಯೆ ಬಗೆಹರಿಯಬೇಕು.

ಈಗಿನ ಸನ್ನಿವೇಶದಲ್ಲಿ ಖಾಸಗಿ ವೈದ್ಯರು ಸರ್ಕಾರಿ ಆಸ್ಪತ್ರೆಗಳನ್ನು ಸುಧಾರಿಸಲು ಸರ್ಕಾರಕ್ಕೆ ಆದೇಶ ನೀಡುತ್ತಿದ್ದಾರೆ. ಈ ಸಮಯದಲ್ಲಿ ಇದು ಅಸಮಂಜಸ. ಖಾಸಗಿ ವೈದ್ಯರು ಈ ಉಚಿತ ಸಲಹೆ ನೀಡುವುದನ್ನು ಬಿಟ್ಟು ಬಿಕ್ಕಟ್ಟನ್ನು ಪರಿಹರಿಸಲು ಸರ್ಕಾರದೊಂದಿಗೆ ಸಹಕರಿಸಬೇಕು. ಸರ್ಕಾರಿ ಆಸ್ಪತ್ರೆಗಳ ಈಗಿನ ಪರಿಸ್ಥಿತಿಗೆ ಖಾಸಗಿ ಆಸ್ಪತ್ರೆಗಳೂ ಕಾರಣ ಎಂಬುದನ್ನು ಮರೆಯಬಾರದು.

ಜನಸಾಮಾನ್ಯರು ಈ ಬೆಳವಣಿಗೆಯ ಬಗ್ಗೆ ತಿಳಿದಿದ್ದಾರೆ ಎಂಬುದನ್ನು ಒಬ್ಬ ಸಾಮಾನ್ಯ ಆಟೋ ಚಾಲಕನ ಹೇಳಿಕೆಯಿಂದ ಗುರುತಿಸಬಹುದಾಗಿದೆ. ಆಟೋ ಚಾಲಕನು ಈ ರೀತಿ ಹೇಳುತ್ತಾನೆ;

1. ಖಾಸಗಿ ಆಸ್ಪತ್ರೆಗಳಲ್ಲಿ ದೊರಕುವ ಚಿಕಿತ್ಸೆಗೆ ಬೇಕಾಬಿಟ್ಟಿ ದರ ವಿಧಿಸಿ ಬಡವ ಶ್ರೀಮಂತರೆನ್ನದೆ ಹಣ ಕೀಳುವ ಆಸ್ಪತ್ರೆಗಳು ಇನ್ನು ಮುಂದೆ ಯಾವ ದರ ಯಾವ ಚಿಕಿತ್ಸೆಗೆ ಅಂತ ಸರ್ಕಾರ ನಿಗದಿಪಡಿಸಿದ ರೀತಿಯಲ್ಲೇ ಮುಂದುವರಿಯಬೇಕು.
2. ರೋಗಿಗೆ ತಾನು ಪಡೆಯಲು ಬಯಸುವ ಚಿಕಿತ್ಸೆಯ ಸಂಪೂರ್ಣ ವಿವರವನ್ನು ಹಾಗೂ ವೆಚ್ಚವನ್ನು ಮೊದಲೇ ತಿಳಿಸಬೇಕು.
3. ಎಮರ್ಜೆನ್ಸಿ ವೇಳೆ ಹಣ ಪಾವತಿಗೆ ಒತ್ತಾಯಿಸುವಂತಿಲ್ಲ.
4. ವೈದ್ಯರು ಯಾವ ನಿರ್ಧಾರಕ್ಕೂ ಮುನ್ನಾ ರೋಗಿಯ ಸಂಬಂಧಿಕರ ಒಪ್ಪಿಗೆ ಪಡೆಯಬೇಕು. ಇನ್ನು ಮುಂದೆ ಪ್ರಾರಂಭವಾಗುವ ಖಾಸಗಿ ಲ್ಯಾಬ್‌ಗಳು ಸರ್ಕಾರಿ ಆಸ್ಪತ್ರೆಯಿಂದ ಕನಿಷ್ಠ 200 ಮೀಟರ್ ದೂರದಲ್ಲಿರಬೇಕು.
5. ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆಯನ್ನು ನಾನು ಬೆಂಬಲಿಸುತ್ತೇನೆ. ಹಾಗೂ ರಾಜ್ಯದ ಎಲ್ಲಾ ವರ್ಗದ ಜನರು ಈ ಆಸ್ಪತ್ರೆಗಳ ತೊಂದರೆಗೆ ಒಳಗಾಗಿದ್ದು ನಾವೆಲ್ಲರೂ ಆರೋಗ್ಯ ಮಂತ್ರಿ ಕಾಯ್ದೆಯನ್ನು ಬೆಂಬಲಿಸೋಣ.

ಆರೋಗ್ಯ ಕ್ಷೇತ್ರದಲ್ಲಿ ಜನಪರವಾದ ನೀತಿಗೆ ಎಲ್ಲರು ಒತ್ತಾಯಿಸಬೇಕು. ಖಾಸಗೀ ವೈದ್ಯರು ಹಾಗೂ ಆಸ್ಪತ್ರೆಗಳು ತಮ್ಮ ಹಿತದೃಷ್ಟಿಯನ್ನು ಕಾಪಾಡುವುದರೊಂದಿಗೆ ಜನಪರವಾದ ನೀತಿಯನ್ನು ಪ್ರೋತ್ಸಾಹಿಸಬೇಕು ಹಾಗೂ ಸರ್ಕಾರದೊಂದಿಗೆ ಕೈ ಜೋಡಿಸಬೇಕು. ಇಂದು ನಾವು ಖಾಸಗೀ ಆರೋಗ್ಯ ವ್ಯವಸ್ಥೆ ಇಲ್ಲದೇ ಮುಂದುವರಿಯಲು ಸಾಧ್ಯವಿಲ್ಲದಿದ್ದರೂ ಮುಂದೊಂದು ದಿನ ನಾವು ಈ ಖಾಸಗಿ ವ್ಯವಸ್ಥೆಯನ್ನು ಸಂಪೂರ್ಣ ತೆಗೆದುಹಾಕಿ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಯನ್ನು ಜಾರಿಗೆ ತರಲೇಬೇಕು. ಇಲ್ಲದಿದ್ದರೆ ಇಂತಹ ಸಮಸ್ಯೆಗಳು ಮುಂದುವರಿಯುತ್ತವೆ. ●

ಖಾಸಗಿ ಆಸ್ಪತ್ರೆಗಳು ವೈದ್ಯರುಗಳ ನಿಯಂತ್ರಣಕ್ಕೆ.........

ಪುಟ 3 ರಿಂದ

ತೀವ್ರ ಭಿನ್ನಾಭಿಪ್ರಾಯಕ್ಕೂ ಬಿಜೆಪಿಯ ವಿರೋಧಕ್ಕೂ ಈ ಪಕ್ಷಗಳಲ್ಲಿ ಪ್ರಬಲವಾಗಿರುವ ಖಾಸಗಿ ಆಸ್ಪತ್ರೆ ಲಾಬಿ ಕಾರಣವಲ್ಲವೇ? ಖಾಸಗಿ ವೈದ್ಯರು ಎಂದಾದರೂ ತಮ್ಮ ಮಾಲಿಕರ ಲಾಭದಾಹ, ಅನೈತಿಕ ಕ್ರಮಗಳ ಬಗ್ಗೆ ದನಿ ಎತ್ತಿದ್ದಾರೆಯೇ?

ಖಾಸಗಿ ಆಸ್ಪತ್ರೆಗಳು ವೈದ್ಯರುಗಳ ನಿಯಂತ್ರಣಕ್ಕೆ ಮೇಲೆ ಹೇಳಿದ ಪ್ರಮುಖ ಅಂಶಗಳಿರುವ ಕಾನೂನು ಬೇಕು. ಸರಕಾರದ ಕರಡು ಕೆ.ಪಿ.ಎಂ.ಎ. 2017 ಬಗ್ಗೆ ವೈದ್ಯರು, ಜನಸಂಘಟನೆಗಳು, ಜನಾರೋಗ್ಯ ಚಳುವಳಿಗಳ ಜತೆ ಚರ್ಚೆ ಮಾಡಿ ಅಂತಿಮ ಗೊಳಿಸಬೇಕು. ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಪ್ರಬಲವಾಗಿರುವ ಖಾಸಗಿ ಆಸ್ಪತ್ರೆ ಲಾಬಿಗೆ ಮಣಿಯಬಾರದು. ಮುಖ್ಯಮಂತ್ರಿಗಳು ಮತ್ತು ಆರೋಗ್ಯ ಮಂತ್ರಿಗಳು ಈ ಲಾಬಿಗೆ ಕಡಿವಾಣ ಹಾಕುವ ದೃಢವಾದ ರಾಜಕೀಯ ಇಚ್ಛೆ ತೋರಿಸಬೇಕು.

ಆದರೆ ಈ ಪರಿಸ್ಥಿತಿಗೆ ಮೂಲಕಾರಣ ಕಾಂಗ್ರೆಸ್ ಮತ್ತು ಬಿಜೆಪಿ ಸರಕಾರಗಳು ಕೇಂದ್ರದಲ್ಲೂ ರಾಜ್ಯದಲ್ಲೂ ಅನುಸರಿಸುತ್ತಿರುವ ಆರೋಗ್ಯ ಮತ್ತು ಶಿಕ್ಷಣ (ಅದರಲ್ಲೂ ವೈದ್ಯಕೀಯ ಶಿಕ್ಷಣದಲ್ಲಿ) ಕ್ಷೇತ್ರಗಳಲ್ಲೂ ಖಾಸಗೀಕರಣದ ನೀತಿ ಅನುಸರಿಸುತ್ತಿರುವುದು, ಸಾರ್ವತ್ರಿಕ ಉಚಿತ ಆರೋಗ್ಯ ಮತ್ತು ಶಿಕ್ಷಣ ಸೇವೆಯ ಗುರಿಗೆ ತಿಲಾಂಜಲಿ ಇತ್ತಿದ್ದು. ಎರಡೂ ಕ್ಷೇತ್ರಗಳಲ್ಲಿ ವಿಪರೀತ ವ್ಯಾಪಾರೀಕರಣ ಮೂಲಕಾರಣ. ಸರಕಾರ ವೈದ್ಯಕೀಯ ಶಿಕ್ಷಣದಲ್ಲಿ ತಕ್ಕ ಹೂಡಿಕೆ ಮಾಡದೆ ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಕ್ಷಿಪ್ರ ವಿಸ್ತರಣೆಗೆ, ಫೀಸುಗಳ ಮೇಲೆ ಯಾವುದೇ ನಿಯಂತ್ರಣ ಇಲ್ಲದೆ ವೈದ್ಯ ಶಿಕ್ಷಣದ ಆಕಾಂಕ್ಷಿಗಳು ಕೋಟಿಗಟ್ಟಲೆ ಖರ್ಚು ಮಾಡಬೇಕಾಗಿದ್ದು, ಅದನ್ನು ಆದಷ್ಟು ಹಿಂದಕ್ಕೆ ಪಡೆಯಲು ಖಾಸಗಿ ಪ್ರಾಕ್ಟೀಸಿನ ಆಸ್ಪತ್ರೆಗಳ ಲಾಭದಾಹದ ಜತೆ ಶಾಮೀಲಾದ್ದಕ್ಕೆ ಮೂಲಕಾರಣ. ಖಾಸಗಿ ವೈದ್ಯಕೀಯ ಕಾಲೇಜುಗಳ ಮಾಲಿಕರ ಲಾಬಿಯಲ್ಲಿ ಕಾಂಗ್ರೆಸ್ ರಾಜ್ಯಾಧ್ಯಕ್ಷರಿಂದ ಆರಂಭಿಸಿ ಹಲವು ಮಂತ್ರಿಗಳು, ಬಿಜೆಪಿಯ ನಾಯಕರೂ ಇದ್ದಾರೆ. ಸರಕಾರಿ ಆಸ್ಪತ್ರೆಗಳನ್ನು ಬಲಪಡಿಸಿ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ಒದಗಿಸುವಲ್ಲಿ ವಿಫಲವಾಗಿದ್ದೂ ಇದಕ್ಕೆ ಪೂರಕವಾಗಿದೆ. ಇದರಿಂದಾಗಿ ಬೆಳೆದಿರುವ ಖಾಸಗಿ ಆರೋಗ್ಯ ವ್ಯವಸ್ಥೆ ಜಾಗತೀಕರಣದ ಅವಧಿಯಲ್ಲಿ ಈಗ ವಿಪರೀತವಾಗಿ ಕೊಬ್ಬಿದೆ. ಎರಡೂ ಪ್ರಮುಖ ಪಕ್ಷಗಳಲ್ಲಿ ಪ್ರಬಲ ಲಾಬಿಯನ್ನು ಹೊಂದಿದೆ. ಯಾವುದೇ ನಿಯಂತ್ರಣಕ್ಕೆ ಸುಲಭವಾಗಿ ಜಗ್ಗುವುದಿಲ್ಲ.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಖಾಸಗೀಕರಣದ ನೀತಿಯನ್ನು ಬದಲಾಯಿಸದೆ, ಸಾರ್ವತ್ರಿಕ ಉಚಿತ ಶಿಕ್ಷಣ ಮತ್ತು ಆರೋಗ್ಯ ಸೇವೆಗಳು ಗುರಿಯಾಗದೆ ಇದಕ್ಕೆ ದೀರ್ಘಕಾಲೀನ ಪರಿಹಾರ ಇಲ್ಲ. ಕಾನೂನು ತರಲು ಪಟ್ಟು ಹಿಡಿದಿರುವ ಆರೋಗ್ಯ ಮಂತ್ರಿಗಳು ಸಹ ಖಾಸಗಿ ಆಸ್ಪತ್ರೆಗಳ ಮಾಲಿಕರ ಲಾಬಿಯನ್ನೂ ಟೀಕಿಸುವುದು ಹೋಗಲಿ, ಹೆಸರಿಸುವುದೂ ಇಲ್ಲ. ಬದಲಾಗಿ ಖಾಸಗಿ ವೈದ್ಯರನ್ನು ರಾಕ್ಷಸರಂತೆ ಚಿತ್ರಿಸುತ್ತಾ, ಅವರ ಮೇಲೆ ದಾಳಿ ಮಾಡುತ್ತಾ (ಖಾಸಗಿ ಕಾರ್ಪೊರೆಟ್ ಮಾಲಿಕರ ಮತ್ತು ಲಾಭದಾಹಿ ವ್ಯವಸ್ಥೆಯ ಪಾತ್ರ ಮರೆಮಾಚುತ್ತಾ) ತಿರುಗುತ್ತಾರೆ. ಸರಕಾರಿ ಆರೋಗ್ಯ ವ್ಯವಸ್ಥೆಯನ್ನು ನಿರ್ಣಾಯಕವಾಗಿ ಸುಧಾರಿಸುವ ರಾಜಕೀಯ ಇಚ್ಛೆ ತೋರಿಸಿಲ್ಲ. ಬದಲಾಗಿ ಅತ್ಯುತ್ತಮ ಸರಕಾರಿ ಆಸ್ಪತ್ರೆಯನ್ನು ಮುಖ್ಯಮಂತ್ರಿಯ ಉದ್ಯಮಿ ಗೆಳೆಯನಿಗೆ (ವಾಚಿಗೆ ರಿಟರ್ನ್ ಗಿಫ್ಟ್ ಆಗಿ) ಸಂತೋಷದಿಂದ ಉಡುಗೊರೆಯಾಗಿ ಕೊಟ್ಟಿದ್ದಾರೆ. ದೊಡ್ಡ ಮತ್ತು ಕಾರ್ಪೊರೆಟ್ ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಳ್ಳುವ ರಾಜಕೀಯ ದೃಢ ಇಚ್ಛೆ ಈ ಸರಕಾರಕ್ಕೆ ಇದೆಯೇ ಎಂಬುದು ಅನುಮಾನ. ಕೊನೆಗೂ ಜಾರಿಯಲ್ಲಿ ಕೆ.ಎಂ.ಇ.ಎ. ಕಾಯಿದೆ 2017 ತಿದ್ದುಪಡಿ ಸಣ್ಣ ಮತ್ತು ಗ್ರಾಮೀಣ ಆಸ್ಪತ್ರೆಗಳ ಹಾಗೂ ವೈದ್ಯರ ಮೇಲೆ ಕ್ರಮ ಕೈಗೊಳ್ಳುವ ಮೂಲಕ ಅವನ್ನು ಮುಚ್ಚಿಸಿ ಕಾರ್ಪೊರೆಟ್ ಆಸ್ಪತ್ರೆಗಳ ಬಲ ಇನ್ನಷ್ಟು ಹೆಚ್ಚಿಸುವ ಹುನ್ನಾರ ಎನ್ನುವ ವರೆಗೆ ಕೆಲವರು ಹೋಗಿದ್ದಾರೆ. ಇತ್ತೀಚಿನ ವರುಷಗಳಲ್ಲಿ ಸರಕಾರದ ರೆಕಾರ್ಡ್ ಅದರಲ್ಲೂ ನಿರ್ದಿಷ್ಟವಾಗಿ ಆರ್.ಟಿ..ಇ. ಜಾರಿ ಮತ್ತು ಇಂಜಿನೀಯರಿಂಗ್–ಮೆಡಿಕಲ್ ಕಾಲೇಜುಗಳಲ್ಲಿ ಫೀಸು ಡೊನೇಶನ್ ನಿಯಂತ್ರಣಗಳ ಜಾರಿಯ ವೈಖರಿ ನೋಡಿದರೆ ಈ ಅನುಮಾನ ನಿರಾಧಾರವೇನೂ ಅಲ್ಲ. ಕೆ.ಎಂ.ಇ.ಎ. ಕಾಯಿದೆಯ ಜಾರಿಯಲ್ಲಿ ಈ ಎಚ್ಚರವನ್ನೂ ಕಾಪಾಡಬೇಕಾಗಿದೆ.

ಈ ಬಗ್ಗೆ ಜನತೆಯಲ್ಲಿ ಅರಿವು ಮೂಡಿಸುತ್ತಲೇ, ಸದ್ಯಕ್ಕೆ ಕೆ.ಎಂ.ಇ.ಎ. ಕಾಯಿದೆ ಮಂಡನೆಗೆ ಜನ ಸಂಘಟನೆಗಳು ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಒತ್ತಾಯ ಹೇರಬೇಕು. ●

ನವೆಂಬರ್ 27 ರಿಂದ ಕಟ್ಟಡ ಕಾರ್ಮಿಕರ ‘ಅನಿರ್ದಿಷ್ಟ ಅಹೋರಾತ್ರಿ ಸತ್ಯಾಗ್ರಹ’

ಕಟ್ಟಡ ಕಾರ್ಮಿಕರ ನಡುವೆ ಕೆಲಸ ಮಾಡುತ್ತಿರುವ INTUC- AITUC-CITU-NCL-TUCC-HMKP- BMS- ಸಂಯೋಜಿತ ಸಂಘಟನೆಗಳು ನವೆಂಬರ್ 27 ರಿಂದ ಬೆಂಗಳೂರಿನಲ್ಲಿರುವ ‘ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ’ಮುಂದೆ ಕಟ್ಟಡ ಕಾರ್ಮಿಕರ ‘ಅನಿರ್ಧಿಷ್ಟ ಅಹೋರಾತ್ರಿ ಸತ್ಯಾಗ್ರಹ’ ನಡೆಸಲು ನಿರ್ಧರಿಸಿವೆ.

ರಾಜ್ಯದಲ್ಲಿರುವ ಲಕ್ಷಾಂತರ ಬಡ ಕಟ್ಟಡ ನಿರ್ಮಾಣ ಕಾರ್ಮಿಕರ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಮಂಡಳಿಯನ್ನು 2006 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಈ ಮಂಡಳಿಗೆ ಕಟ್ಟಡ ನಿರ್ಮಾಣ ವಲಯದಿಂದ ಇರುವರೆಗೂ ಸುಮಾರು 5950 ಕೋಟಿ(ಐದು ಸಾವಿರದ ಅರುನೂರಐವತ್ತು ಕೋಟಿ) ಸೆಸ್ ಹಣ ಸಂಗ್ರಹವಾಗಿದೆ. ಆದರೆ ರಾಜ್ಯದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಖರ್ಚು ಮಾಡಿರುವುದು ಹತ್ತು ವರ್ಷಗಳಲ್ಲಿ ಕೇವಲ 200 ಕೋಟಿ ಮಾತ್ರ! ಇದಕ್ಕೆ ಕಾರ್ಮಿಕ ಇಲಾಖೆ ಆಡಳಿತಶಾಹಿ ಮತ್ತು ಆಳುವ ಸರಕಾರಗಳು ವಹಿಸಿದ ನಿರ್ಲಕ್ಷ್ಯತೆ ಕಾರಣವಾಗಿದೆ

ಕಾರ್ಮಿಕ ಸಚಿವರಾದ ಶ್ರೀ ಸಂತೋಷ ಲಾಡ್ ಅವರು ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಕಲ್ಯಾಣ ಮಂಡಳಿಯಲ್ಲಿರುವ ಸಂಗ್ರಹವಾಗಿರುವ ಸುಮಾರು 6000 ಕೋಟಿಗಿಂತಲೂ ಅಧಿಕ ಸೆಸ್ ಹಣವನ್ನು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಆದಿತ್ಯ ಬಿಸ್ವಾಸ್ ಜೊತೆ ಸೇರಿ ಮನಬಂದಂತೆ ಖರ್ಚು ಮಾಡಲು ಕಾರ್ಯಕ್ರಮಗಳನ್ನು ರೂಪಿಸುತ್ತಾ ವಿಫಲ ಯತ್ನಗಳನ್ನು ನಡೆಸುತ್ತಲೇ ಇದ್ದಾರೆ. ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಒಂದು ತ್ರಿಪಕ್ಷೀಯ ಸ್ವಾಯತ್ತ ಸಮಿತಿಯಾಗಿದ್ದರೂ ಆ ವಿಷಯಗಳನ್ನು ಅಲ್ಲಿ ಚರ್ಚಿಸದೇ ಮತ್ತು ಸಂಬಂಧಿಸಿದ ಕಾರ್ಮಿಕ ಸಂಘಗಳ ಜೊತೆ ಯಾವುದೇ ಚರ್ಚೆ ಕೂಡ ನಡೆಸದೆ ಏಕಾಏಕೀ ಹಲವು ನಿರ್ಧಾರಗಳನ್ನು ಕೈಗೊಂಡು ಮಂಡಳಿಯಲ್ಲಿ ಸಂಗ್ರಹವಾಗಿರುವ ಸಾವಿರಾರು ಕೋಟಿ ಹಣವನ್ನು ಖರ್ಚು ಮಾಡಲು ಕಾರ್ಮಿಕರಿಗೆ ಅಪ್ರಯೋಜಕಾರಿಯಾದ ಹಲವು ಸ್ವಯಂ ಘೋಷಿತ ಕಾರ್ಯಕ್ರಮಗಳನ್ನು ರೂಪಿಸಿ ಲಕ್ಷಾಂತರ ಬಡ ಕಟ್ಟಡ ಕಾರ್ಮಿಕರಿಗೆ ದ್ರೋಹ ಮಾಡುತ್ತಿದ್ದಾರೆ.

ಹತ್ತು ವರ್ಷಗಳಿಂದ ನೊಂದಾಯಿತ ಕಾರ್ಮಿಕರಿಗೆ ನೀಡಲಾಗುತ್ತಿರುವ ಮದುವೆ, ಹೆರಿಗೆ ಮತ್ತಿತರೆ ಕಲ್ಯಾಣ ಸೌಲಭ್ಯಗಳಿಗೆ ಕತ್ತರಿ ಹಾಕಲು ಏಕಪಕ್ಷೀಯವಾಗಿ ಸಚಿವರು ನಿರ್ಧರಿಸಿದ್ದಾರೆ ಅಲ್ಲದೆ ಮುಂಬರುವ ವಿಧಾನಸಭಾ ಚುನಾವಣೆ ಹಿನ್ನಲೆಯಲ್ಲಿ ಈ ಬಡ ಕಾರ್ಮಿಕರಿಗಾಗಿ ಸಂಗ್ರಹಿಸಲಾದ ಸೆಸ್ ಹಣವನ್ನು ಬಹುಸಂಖ್ಯಾತ ಕಟ್ಟಡ ಕಾರ್ಮಿಕರಿಗೆ ಪ್ರಯೋಜನವಾಗದ ಉಚಿತ ಬಸ್ ಪಾಸ್, ಸ್ಮಾರ್ಟ ಫೋನ್, ಅಡಿಗೆ ಅನಿಲ, ಉದ್ಯೋಗ ಖಾತ್ರಿ ಕಾರ್ಮಿಕರಿಗೆ ಆರು ಜಿಲ್ಲೆಗಳಲ್ಲಿ ಸ್ಮಾರ್ಟ ಕಾರ್ಡ, ಇಂದಿರಾ ಕ್ಯಾಂಟೀನ್ ಮೊದಲಾದ ಹೆಸರಲ್ಲಿ ಸಾವಿರಾರು ಕೋಟಿಹಣವನ್ನು ಸುಪ್ರೀಂ ಕೋರ್ಟ ನಿರ್ದೇಶನ ಮೀರಿ ಬಳಸಲು ನಿರ್ಧರಿಸಿದ್ದಾರೆ.

ಒತ್ತಾಯಗಳನ್ನು ಮಾಡಿ ಈ ಕೆಲವು ತೀರ್ಮಾನಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದೆ. ಆದರೂ ಕಾರ್ಮಿಕ ಸಚಿವರು ಮತ್ತು ಇಲಾಖಾ ಕಾರ್ಯದರ್ಶಿಗಳು ತಮ್ಮ ಹಠಮಾರಿ ಧೋರಣೆಯನ್ನು ಇನ್ನೂ ಹಲವು ವಿಷಯಗಳಲ್ಲಿ ಮುಂದುವರೆಸಿದ್ದಾರೆ. ಈ ಬಗ್ಗೆ ಸ್ವತಃ ಸಚಿವರನ್ನೇ ಕಾರ್ಮಿಕ ಸಂಘಗಳ ಜಂಟಿ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಿದಾಗ ನಮ್ಮ ಬೇಡಿಕೆಗಳನ್ನು ಕನಿಷ್ಠ ಕೇಳಿಸಿಕೊಳ್ಳುವ ತಾಳ್ಮೆಯನ್ನು ಅವರು ಕಳೆದುಕೊಂಡಿದ್ದರು. ಇದು ಅತ್ಯಂತ ಖಂಡನಾರ್ಹ.

ಈ ಹಿನ್ನಲೆಯಲ್ಲಿ ಅನಿವಾರ್ಯವಾಗಿ ರಾಜ್ಯದ ಲಕ್ಷಾಂತರ ಕಟ್ಟಡ ಕಾರ್ಮಿಕರ ಬದುಕಿನ ಮತ್ತು ಜೀವನ್ಮರಣದ ಹಲವು ಪ್ರಶ್ನೆಗಳ ವಿಷಯವಾಗಿ ರಾಜಿಯಾಗದೆ ಕಾರ್ಮಿಕರ ಈ ಐಕ್ಯ ಅನಿರ್ಧಿಷ್ಟ ಹೋರಾಟ ಹಮ್ಮಿಕೊಳ್ಳಲಾಗಿದೆ.

ಮದುವೆ ಹಾಗೂ ಹೆರಿಗೆ ಧನ ಸಹಾಯವನ್ನು ಮುಂದುವರೆಸಬೇಕು; ಸೆಸ್ ಹಣವನ್ನು ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರ ಬಳಸಬೇಕು ಮತ್ತು ಈಗಿರುವ 12 ಸೌಲಭ್ಯಗಳನ್ನು ಮತ್ತಷ್ಟು ಬಲಪಡಿಸಿ ಧನ ಸಹಾಯ ಹೆಚ್ಚಿಸಬೇಕು; ಒಂದು ಲಕ್ಷಕ್ಕೂ ಹೆಚ್ಚಿನ ಅರ್ಜಿಗಳು ಸೌಲಭ್ಯ ವಿತರಣೆಗಾಗಿ ಬಾಕಿ ಇದ್ದು, 30 ದಿನಗಳ ಕಾಲಮಿತಿಯೊಂದಿಗೆ ವಿತರಿಸಬೇಕು; ಹೊಸ ನೋಂದಣಿಗೆ ಮಾಲೀಕರು/ಗುತ್ತಿಗೆದಾರರ ಪ್ರಮಾಣ ಪತ್ರ ಬೇಕೆನ್ನುವ ಕಡ್ಡಾಯ ಹಿಂಪಡೆಯಬೇಕು; ಆನ್‌ಲೈನ್ ವ್ಯವಸ್ಥೆಯನ್ನು ಬಲಪಡಿಸಬೇಕು ಮತ್ತು ಮ್ಯಾನುವಲ್ ನೋಂದಾವಣಿಯನ್ನು ಮುಂದುವರೆಸಬೇಕು – ಇವು ಕಟ್ಟಡ ಕಾರ್ಮಿಕರ ಹಕ್ಕೊತ್ತಾಯಗಳು.

ಹಾಸ್ಟೆಲ್ ನೌಕರರ ಹೋರಾಟ, ಸಚಿವರ ಭೇಟಿ

ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ರಾಜ್ಯ ಸಮಿತಿ ನೇತೃತ್ವದಲ್ಲಿ ಹಾಸ್ಟೆಲ್ ಹೊರಗುತ್ತಿಗೆ ನೌಕರರು 14 ನವೆಂಬರ್ 2017 ರಂದು ಸುವರ್ಣ ಸೌಧ ಎದುರು **“ಬೆಳಗಾವಿ ಚಲೋ”** ನಡೆಸಲಾಯಿತು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಮಂತ್ರಿಗಳಾದ ಮಾನ್ಯ ಶ್ರೀ ಹೆಚ್.ಆಂಜನೇಯ ರವರಿಗೆ ಮನವಿ ಸಲ್ಲಿಸಲಾಯಿತು.

ಕೆಲಸದ ಭದ್ರತೆ, ಇಲಾಖೆಯಿಂದಲೇ ನೇರವಾಗಿ ಸಂಬಳ, ಸಮಾನ ಕೆಲಸಕ್ಕೆ ಸಮಾನ ವೇತನ, ಕಾರ್ಮಿಕ ಕಾನೂನು ಗಳನ್ನು ಜಾರಿಗೆ ಒತ್ತಾಯಿಸಲಾಯಿತು. ಹಾಸ್ಟೆಲ್ ನೌಕರರ ಬೇಡಿಕೆಗಳನ್ನು ಈಡೇರಿಸಲು ಮುಂದಾಗುವುದಾಗಿ ಸಚಿವರು ಭರವಸೆಯಿತ್ತರು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಹೊರಗುತ್ತಿಗೆ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

– ಕೆ. ಹನುಮೇಗೌಡ



ಸುಜ್ಲಾನ್ ಘಟಕದ ಬೀಗ ಮುದ್ರೆ ಹಿಂತೆಗೆಯಿರಿ : ಸಿಐಟಿಯು

ಕೈಗಾರಿಕಾ ಎಸ್.ಇ.ಝಡ್ ಅಭಿವೃದ್ಧಿಗಾಗಿ ಸುಮಾರು 647 ಎಕ್ರೆ ಜಾಗವನ್ನು ಕೆ.ಐ.ಎ.ಡಿ.ಬಿ. ಯಿಂದ ಪಡೆದಿದ್ದ ಸುಜ್ಲಾನ್ ಕಂಪೆನಿಯು ನ್ಯಾಯಬಾಹಿರವಾಗಿ ಹಾಗೂ ಕಾನೂನು ಬಾಹಿರವಾಗಿ ಲಾಕೌಟ್‌ನ್ನು ಘೋಷಿಸಿ ಕಾರ್ಮಿಕರನ್ನು ಸಂಕಷ್ಟಕ್ಕೆ ದೂಡಿದೆ. ಸಿಐಟಿಯುವಿನ ಜಿಲ್ಲಾ ಅಧ್ಯಕ್ಷರಾದ ಶ್ರೀಯುತ ಪಿ.ವಿಶ್ವನಾಥ ರೈ ಮತ್ತು ಪ್ರಧಾನ ಕಾರ್ಯದರ್ಶಿಯವರಾದ ಕೆ.ಶಂಕರ್‌ರವರು ಕಂಪೆನಿಯ ಈ ಕ್ರಮವನ್ನು ಖಂಡಿಸಿರುತ್ತಾರೆ.

ಕೂಡಲೇ ಕಂಪೆನಿಯು ಬೀಗ ಮುದ್ರೆಯನ್ನು ಹಿಂತೆಗೆದುಕೊಂಡು ಎಲ್ಲಾ ಕಾರ್ಮಿಕರಿಗೆ ಕೆಲಸ ನೀಡಬೇಕೆಂದು ಒತ್ತಾಯಿಸಿರುತ್ತಾರೆ. ಜಿಲ್ಲಾಡಳಿತವು ಸೂಕ್ತ ಕ್ರಮ ಕೈಗೊಂಡು ಕಂಪೆನಿಯ ಕಾರ್ಮಿಕರಿಗೆ ಕೆಲಸ ನೀಡುವಂತೆ ಕ್ರಮ ವಹಿಸಬೇಕೆಂದು ಒತ್ತಾಯಿಸಿರುತ್ತಾರೆ.

ಸಾಂದರ್ಭಿಕ ಜೇಷ್ಠತೆಯ ತಿದ್ದುಪಡಿ ಮಸೂದೆ ಅಂಗೀಕರಿಸಿ : ದೇವದಾಸಿ ಸಂಘ

ಫೆಬ್ರವರಿ 09, 2017 ರ ಸುಪ್ರಿಂ ಕೋರ್ಟಿನ ಅದೇಶದಂತೆ ಹಿಂಬಡ್ತಿ ಪಡೆಯಲಿರುವ ರಾಜ್ಯದ ಸಾವಿರಾರು ಪರಿಶಿಷ್ಠ ಜಾತಿ ಹಾಗೂ ಪಂಗಡಗಳ ನೌಕರರ ಮುಂಬಡ್ತಿ ರಕ್ಷಣೆಗೆ ಮತ್ತು ಪರಿಸಿಶಿಷ್ಠರ ನ್ಯಾಯಯುತ ಬಡ್ತಿ ಮೀಸಲಾತಿಯನ್ನು ಉಳಿಸಲು ಕರ್ನಾಟಕ ಸರಕಾರ ಇದೇ ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಸಭಾ ಚಳಿಗಾಲದ ಅಧಿವೇಶನದಲ್ಲಿ ಕರ್ನಾಟಕ ರಾಜ್ಯ 2002ರ ಸಾಂದರ್ಭಿಕ ಜೇಷ್ಠತೆಯ ತಿದ್ದುಪಡಿ ಮಸೂದೆ ಮಂಡಿಸಿ ಅಂಗೀಕರಿಸುವಂತೆ ರಾಜ್ಯ ಸರಕಾರವನ್ನು ಮತ್ತು ಅದು ಸರ್ವಾನುಮತದ ಮೇರೆಗೆ ಅಂಗೀಕರಿಸಲು ನೆರವಾಗುವಂತೆ ವಿರೋಧ ಪಕ್ಷಗಳ ನಾಯಕರನ್ನು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಸಮಿತಿ ಒತ್ತಾಯಿಸಿದೆ.

ರಾಜ್ಯ ಸರಕಾರ ಇನ್ನೂ ಕೂಡಾ 2.2 ಲಕ್ಷ ಉದ್ಯೋಗ ಗಳನ್ನು ತುಂಬದೇ ಬಿಟ್ಟಿರುವುದರಿಂದ ಸುಮಾರು 50 ಸಾವಿರ ಪರಿಶಿಷ್ಠ ಜಾತಿ ಮತ್ತು ಪಂಗಡದ ಯುವಜನರಿಗೆ ಮೀಸಲಾತಿಯ ಉದ್ಯೋಗ ದೊರೆಯದ ಪರಿಸ್ಥಿತಿ ಉಂಟಾಗಿದೆ. ಬ್ಯಾಕ್ ಲಾಗ್ ಹುದ್ದೆಗಳು ಸೇರಿದಂತೆ ಈ ಎಲ್ಲಾ ಹುದ್ದೆಗಳನ್ನು ತುಂಬಲು ರಾಜ್ಯ ಸರಕಾರ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳ ಬೇಕೆಂದು, ಇಲ್ಲದೇ ಹೋದಲ್ಲಿ ಎಲ್ಲಾ ಮೀಸಲು ಸಂಘದ ಅಧ್ಯಕ್ಷರಾದ ಬಿ. ಮಾಳಮ್ಮ ಮತ್ತು ಪ್ರಧಾನ ಕಾರ್ಯದರ್ಶಿ ಟಿ.ವಿ. ರೇಣುಕಾ ಒತ್ತಾಯಿಸಿದ್ದಾರೆ.

ಕರ್ನಾಟಕ ರಾಜ್ಯ ದೇವದಾಸಿ
ಮಹಿಳೆಯರ ವಿಮೋಚನಾ ಸಂಘ,
ರಾಜ್ಯ ಸಮಿತಿ, ಬೆಂಗಳೂರು.

ಸಾಚಾರ್ ಸಮಿತಿ ಶಿಫಾರಸು ಜಾರಿಯಾಗಬೇಕು

ದಲಿತ ಹಾಗೂ ಹಿಂದುಳಿದವರಿಗಿಂತಲೂ ಮುಸ್ಲಿಮರು ಕೆಟ್ಟ ಪರಿಸ್ಥಿತಿ ಎದುರಿಸುತ್ತಿದ್ದು, ಇದನ್ನು ಸರಿಪಡಿಸಲು ಯಾರೂ ಮುಂದಾಗುತ್ತಿಲ್ಲ ಎಂದು ಕೋರಣೇಶ್ವರ ಸ್ವಾಮಿಜಿ ಹೇಳಿದರು. ಸಿಂಧನೂರಿನ ಸತ್ಯ ಗಾರ್ಡನಿನಲ್ಲಿ ಅವರು ರಾಯಚೂರು ಜಿಲ್ಲಾ ಮಟ್ಟದ ಅಲ್ಪಸಂಖ್ಯಾತ ಮುಸ್ಲಿಮರ ಹಕ್ಕುಗಳ ಸಮಾವೇಶ ಉದ್ಘಾಟಿಸಿ ಆತನಾಡುತ್ತಿದ್ದರು. ರಾಜಿಂದರ್ ಸಾಚಾರ್ ಸಮಿತಿಯ ವರದಿಯ ಶಿಫಾರಸುಗಳನ್ನು ಇದುವರೆಗೆ ಅನುಷ್ಠಾನ ಮಾಡುವ ಪ್ರಯತ್ನವಾಗಿಲ್ಲ ಎಂದರು.

ರಾಜ್ಯ ಡಿ.ವೈ.ಎಫ್.ಐ. ಅಧ್ಯಕ್ಷ ಅಬ್ದುಲ್ ಮುನೀರ್ ಕಾಟಿಪಳ್ಳ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಕರ್ನೂಲ್ ಮಾಜಿ ಶಾಸಕರೂ ಆದ ಕಾ. ಎಂ.ಎ.ಗಫೂರ್ ಮುಖ್ಯ ಅತಿಥಿಗಳಾಗಿದ್ದರು. ಅಖಿಲ ಭಾರತ ಎಲ್.ಐ.ಸಿ. ನೌಕರರ ಸಂಘದ ಅಧ್ಯಕ್ಷ ಕಾ. ಅಮಾನುಲ್ಲಾ ಖಾನ್, ಅಖಿಲ ಭಾರತ ಮಾನವ ಧರ್ಮ ಸೇವಾ ಸಮಿತಿ (ಮಾಳಖೇಡ್) ಅಧ್ಯಕ್ಷರಾದ ಹಜರತ್ ಸೈಯದ್ ಷಾ ಮುಸ್ತಫಾ ಖಾದ್ರಿ, ಬೆಂಗಳೂರಿನ ಮಾವ್ ಮೆಂಟಿನ ಕಾರ್ಯದರ್ಶಿಗಳಾದ ಸೈಯದ್ ಅಕ್ಮಲ್ ರಜ್ವಿ ಮತ್ತಿತರರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.





ಮುಸ್ಲಿಮರು ಹೆಚ್ಚಿರುವ ಕಡೆ ವಸತಿ ಶಾಲೆಗಳನ್ನು ಆರಂಭಿಸಬೇಕು. ಮುಸ್ಲಿಂ ಬಾಲಕಿಯರ ಹಾಸ್ಟೆಲುಗಳನ್ನು ನಿರ್ಮಿಸಬೇಕು. ಸ್ಕಾಲರ್ ಶಿಪ್ ಮತ್ತು ಸ್ಟೈಪೆಂಡ್ ಹೆಚ್ಚಿಸಬೇಕು. ಉರ್ದು ಭಾಷಾ ಶಿಕ್ಷಕರ ನೇಮಕ ಮಾಡಬೇಕು. ಮದರಸಾಗಳಲ್ಲಿ ವೈಜ್ಞಾನಿಕ ಮತ್ತು ಉದ್ಯೋಗೋನ್ಮುಖ ಶಿಕ್ಷಣ ಆರಂಭಿಸಬೇಕು. ಮುಸ್ಲಿಂ ಸಮುದಾಯ ಇರುವ ಸ್ಥಳಗಳಲ್ಲಿ ಉದ್ಯೋಗ ತರಬೇತಿ ಸಂಸ್ಥೆಗಳನ್ನು ಪಾಲಿಟೆಕ್ನಿಕ್ ಮತ್ತು ಕಾಲೇಜು ಸ್ಥಾಪಿಸಬೇಕು. ಮೌಲಾನಾ ಆಜಾದ್ ಫೌಂಡೇಶನ್, ಎನ್.ಎಂ.ಡಿ.ಎಫ್.ಸಿ. ವಕ್ಫ್ ಕೌನ್ಸಿಲ್ ನಂತಹ ಸಂಸ್ಥೆಗಳಿಗೆ ಹಣಕಾಸು ನೀಡಿಕೆಗಳನ್ನು ಹೆಚ್ಚಿಸಿ ಯೋಜನೆ ಬಲಗೊಳಿಸಬೇಕು – ಇವೇ ಮುಂತಾದ 14 ನಿರ್ಣಯಗಳನ್ನು ಸಮಾವೇಶ ಅಂಗೀಕರಿಸಿತು. ●

ಮಾಧ್ಯಮ ಮಂಥನ

– ವಿಶ್ವ

ಸಣ್ಣ ಮಾಧ್ಯಮಗಳೂ ದೊಡ್ಡ ಪರಿಣಾಮ ಬೀರುತ್ತವೆ..... ರಾಜಕೀಯ ವಿಜ್ಞಾನಿಗಳ ಅಧ್ಯಯನ

ಸರಾಸರಿ 50 ಸಾವಿರ ಓದುಗರನ್ನು ಹೊಂದಿದ ಕೇವಲ ಮೂರು ಮಾಧ್ಯಮ ಸಂಸ್ಥೆಗಳು ಒಂದು ವಾರ ಯಾವುದಾದರೂ ಒಂದು ವಿಷಯದ ಮೇಲೆ ವರದಿಯನ್ನು ಪ್ರಕಟಿಸಿದರೆ ದೇಶದಾದ್ಯಂತ ಆ ವಿಷಯದ ಮೇಲೆ ಸಾಮಾಜಿಕ ಮಾಧ್ಯಮದಲ್ಲಿ ನಡೆಯುವ ಸಾರ್ವಜನಿಕ ಚರ್ಚೆಯ ಪ್ರಮಾಣವು ಒಂದು ದಿನದ ಪ್ರಮಾಣಕ್ಕೆ ಹೋಲಿಸಿದರೆ ಶೇಕಡಾ 62ಕ್ಕಿಂತ ಹೆಚ್ಚಾಗಿರುತ್ತದೆ ಎನ್ನುವುದನ್ನು ಮಾಧ್ಯಮ ಪ್ರಯೋಗ ನಡೆಸಿದವರು ಕಂಡುಕೊಂಡಿದ್ದಾರೆ. ಅಮೆರಿಕದಲ್ಲಿ ನಡೆಸಿರುವ ಈ ಅಧ್ಯಯನ ಭಾರತಕ್ಕೆ ಕೂಡ ಪಸ್ತುತವೆನಿಸುತ್ತದೆ. ಅಮಿತ್ ಶಾ ಮಗನ ಕಂಪನಿಯ ಹಗರಣಗಳ ಬಗ್ಗೆ "ದಿ ವೈರ್" ವರದಿ ರಾಷ್ಟ್ರೀಯ ಚರ್ಚೆಗೆ ಹಾದಿ ಮಾಡಿಕೊಟ್ಟಿತು. "ಮಹಾ ಪಡಾವ್" ಬಗ್ಗೆ ಮಾಧ್ಯಮ "ಬ್ಲಾಕ್ ಔಟ್"ನ್ನು "ನ್ಯೂಸ್ ಕ್ಲಿಕ್" ಮುರಿಯಿತು. ಕನಿಷ್ಟ ಇತರ ಸ್ವತಂತ್ರ ಆನ್ ಲೈನ್ ಪತ್ರಿಕೆಗಳು "ಮಹಾ ಪಡಾವ್" ಬಗ್ಗೆ ಬರೆಯುವಂತೆ ಮಾಡಿತು. ಇವೆಲ್ಲವೂ "ಜನಶಕ್ತಿ"ಯಂತಹ ಪತ್ರಿಕೆಗಳಿಗೆ ಜನಪರ ಚಳುವಳಿಗಳಿಗೆ ಸಿಹಿ ಸುದ್ದಿ.

ದೊಡ್ಡ ಪತ್ರಿಕೆಗಳು, ಪತ್ರಿಕೆ – ಮಾಧ್ಯಮ ಸಮೂಹಗಳು ಸಾಮಾಜಿಕ, ರಾಜಕೀಯ ಪರಿಣಾಮಗಳನ್ನು ಬೀರುತ್ತವೆ ಎನ್ನುವುದು ಸಾಮಾನ್ಯವಾದ ನಂಬಿಕೆ. ಅದು ಸರಿ ಕೂಡ. ಆದರೆ ದೊಡ್ಡ ಮಾಧ್ಯಮ ಮಾತ್ರವಲ್ಲ, ಚಿಕ್ಕ ಪತ್ರಿಕೆಗಳು ಕೂಡ ಅಗಾಧ ಪರಿಣಾಮ ಬೀರುತ್ತವೆ ಎನ್ನುವುದು ಒಂದು ಅಧ್ಯಯನದಿಂದ ರುಜುವಾತಾಗಿದೆ.

ಅಮೆರಿಕದ ರಾಜಕೀಯ ವಿಜ್ಞಾನಿಗಳು ನಡೆಸಿದ ಒಂದು ಅಧ್ಯಯನವು ಸಣ್ಣ ಮಾಧ್ಯಮ ಸಮೂಹವು ಸಾರ್ವಜನಿಕ ನೀತಿಗೆ ಸಂಬಂಧಿಸಿದ ವಿಚಾರಗಳ 'ರಾಷ್ಟ್ರೀಯ ಸಂವಾದದ' ಮೇಲೆ ನಾಟಕೀಯ ಪರಿಣಾಮ ಬೀರಬಹುದು ಎನ್ನುವುದನ್ನು ತೋರಿಸಿಕೊಟ್ಟಿದೆ.

ಸರಾಸರಿ 50 ಸಾವಿರ ಓದುಗರನ್ನು ಹೊಂದಿದ ಕೇವಲ ಮೂರು ಮಾಧ್ಯಮ ಸಂಸ್ಥೆಗಳು ಒಂದು ವಾರ ಯಾವುದಾದರೂ ಒಂದು ವಿಷಯದ ಮೇಲೆ ವರದಿಯನ್ನು ಪ್ರಕಟಿಸಿದರೆ ದೇಶದಾದ್ಯಂತ ಆ ವಿಷಯದ ಮೇಲೆ ಸಾಮಾಜಿಕ ಮಾಧ್ಯಮದಲ್ಲಿ ನಡೆಯುವ ಸಾರ್ವಜನಿಕ ಚರ್ಚೆಯ ಪ್ರಮಾಣವು ಒಂದು ದಿನದ ಪ್ರಮಾಣಕ್ಕೆ ಹೋಲಿಸಿದರೆ ಶೇಕಡಾ 62ಕ್ಕಿಂತ ಹೆಚ್ಚಾಗಿರುತ್ತದೆ ಎನ್ನುವುದನ್ನು ಮಾಧ್ಯಮ ಪ್ರಯೋಗ ನಡೆಸಿದವರು ಕಂಡುಕೊಂಡಿದ್ದಾರೆ. ಸಾರ್ವಜನಿಕ ಅಭಿಪ್ರಾಯದಲ್ಲಿನ ಪರ ಮತ್ತು ವಿರೋಧವಾದ ಅಂಶಗಳಲ್ಲಿನ ಪಕ್ಷಪಾತಿ ಸಮತೋಲನವನ್ನು ಕೂಡ ಗಣನೀಯ ಪ್ರಮಾಣದಲ್ಲಿ ಬದಲಾಯಿಸಬಹುದಾಗಿದೆ. ಯಾಕೆಂದರೆ ಅನೇಕ ಶೇಕಡಾವಾರು ಪಾಯಿಂಟ್‌ಗಳು (ಪರ್ಸಂಟೇಜ್ ಪಾಯಿಂಟ್ಸ್) ಅದರ ಮೇಲೆ ಪರಿಣಾಮ ಬೀರಿರುತ್ತದೆ ಎನ್ನುವುದು ತಜ್ಞರು ಕಂಡುಕೊಂಡ ವಾಸ್ತವತೆ.

ಹಾರ್ವರ್ಡ್ ವಿಶ್ವ ವಿದ್ಯಾನಿಲಯದ ಗ್ಯಾರಿ ಕಿಂಗ್, ಫ್ಲೋರಿಡಾ ಸ್ಟೇಟ್ ವಿವಿಯ ಬೆಂಜಮಿನ್ ಷ್ನೀರ್ ಮತ್ತು ಮೆಸಾಚುಯೆಟ್ಸ್ ತಂತ್ರಜ್ಞಾನ ಸಂಸ್ಥೆಯ (ಎಂಐಟಿ) ಏರಿಯಲ್ ವೈಟ್ ಅವರಿದ್ದ ತಂಡ ಐದು ವರ್ಷಗಳಷ್ಟು ಸುದೀರ್ಘ ಕಾಲ ಅಧ್ಯಯನ ನಡೆಸಿದ್ದು ಇದೀಗ ವರದಿಯನ್ನು ಪ್ರಕಟಿಸಿದ್ದಾರೆ. 'ಸಾಯನ್ಸ್' ಪತ್ರಿಕೆಯ ನವೆಂಬರ್ 10ರ ಸಂಚಿಕೆಯಲ್ಲಿ ವರದಿ ಪ್ರಕಟಗೊಂಡಿದೆ. ಸಾರ್ವಜನಿಕರ ಅಭಿಪ್ರಾಯ ಮತ್ತು ರಾಷ್ಟ್ರೀಯ ಚರ್ಚೆಗಳ ಮೇಲೆ ಮಾಧ್ಯಮ ಬೀರುವ ಪರಿಣಾಮ ಕುರಿತು ನಡೆದಿರುವ ಪ್ರಪ್ರಥಮ ಅತಿ ದೊಡ್ಡ ಮಟ್ಟದ ಅಧ್ಯಯನ ಇದಾಗಿದೆ.

ಸಂಶೋಧಕರು ಬಹುತೇಕವಾಗಿ 48 ಸಣ್ಣ ಹಾಗೂ ಮಧ್ಯಮ ಪ್ರಮಾಣದ ಮಾಧ್ಯಮ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಅವುಗಳಲ್ಲಿ ಅರ್ಧದಷ್ಟು ಸಂಸ್ಥೆಗಳು ಅಮೆರಿಕದ ಮಾಧ್ಯಮ ಒಕ್ಕೂಟದ (ಮೀಡಿಯಾ ಕನ್‌ಸೋರ್ಷಿಯಂ) ಸದಸ್ಯ ಸಂಸ್ಥೆಗಳು. ಈ ಒಕ್ಕೂಟವು ಸ್ವತಂತ್ರ ಮಾಧ್ಯಮ ಸಂಸ್ಥೆಗಳ ಕೂಟವಾಗಿದೆ. ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸಲು ಮತ್ತು ಅಧ್ಯಯನ ಇತರೆ ಅನೇಕ ವಿಚಾರಗಳಲ್ಲಿ ಒಕ್ಕೂಟ ನೆರವು ನೀಡಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ತಂಡದ ನೇತೃತ್ವ ವಹಿಸಿರುವ ಕಿಂಗ್ ಮತ್ತು ಇತರರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು ಈ ಮುಂದಿನ 11 ಅಂಶಗಳನ್ನು: ಜನಾಂಗ, ವಲಸೆ, ಉದ್ಯೋಗ, ಹವಾಮಾನ, ಆಹಾರ ನೀತಿ, ನೀರು, ಶಿಕ್ಷಣ ನೀತಿ, ನಿರಾಶ್ರಿತರು, ದೇಶೀಯ ಇಂಧನ ಉತ್ಪಾದನೆ ಮತ್ತು ಪ್ರಜನನ (ರೀಪ್ರೊಡಕ್ಟಿವ್) ಹಕ್ಕುಗಳು.



'ಮಹಾ ಪಡಾವ್' : ಮಾಧ್ಯಮ ಬ್ಲಾಕ್–ಔಟ್

ಅಮೆರಿಕದಲ್ಲಿ ನಡೆಸಿರುವ ಈ ಅಧ್ಯಯನ ಭಾರತಕ್ಕೆ ಕೂಡ ಪಸ್ತುತವೆನಿಸುತ್ತದೆ. ಯಾಕೆಂದರೆ ಮುಖ್ಯವಾಹಿನಿಯ ಅಜೆಂಡಾವು ದೊಡ್ಡ ಮಾಧ್ಯಮ ಸಂಸ್ಥೆಗಳ ಕಾರ್ಪೊರೇಟ್–ಪರ ಹಿತಗಳ ಆಧಾರದಲ್ಲಿ ನಿರ್ಧಾರವಾಗುತ್ತವೆ. ಅದೇ ಸಮಯದಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳು ಸುದ್ದಿಗಳ ಪ್ರವಾಹವೇ ಹರಿಯುತ್ತಿದೆ. ವಿಶಾಲವಾದ ಜನವಿಭಾಗದ ಜನಜೀವನವನ್ನು ಬಾಧಿಸುವ, ಮಧ್ಯಮ ವರ್ಗ ಮತ್ತು ಅದಕ್ಕಿಂತ ಮೇಲ್‌ಸ್ತರದ ಅಲ್ಪಸಂಖ್ಯೆಯ ಜನರನ್ನು ಬಿಟ್ಟು ಇತರ ಜನರನ್ನು ಕಾಡುವ ಸಮಸ್ಯೆಗಳ ಬಗ್ಗೆ ಅಲ್ಲೊಮ್ಮೆ ಇಲ್ಲೊಮ್ಮೆ ಬಿಟ್ಟರೆ ಮಾಧ್ಯಮದಲ್ಲಿ ಸಾಕಷ್ಟು ಸ್ಥಾನ ಸಿಗುವುದೇ ಇಲ್ಲ. ಈ ಪ್ರವೃತ್ತಿ ತುಂಬಾ ಎದ್ದು ಕಾಣುವಂಥದ್ದಾಗಿದೆ. ನವೆಂಬರ್ 9ರಿಂದ 11ರವರೆಗೆ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಸಂಸತ್ ಭವನದ ಮುಂದೆ ಕಾರ್ಮಿಕರು ನಡೆಸಿದ ಬೃಹತ್ ಪ್ರತಿಭಟನೆ 'ಮಹಾ ಪಡಾವ್' ಅನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಈ ಪ್ರತಿಭಟನೆಯನ್ನು ಇಡೀ ಭಾರತೀಯ ಮಾಧ್ಯಮ ನಿರ್ಲಕ್ಷಿಸಿತು. ನಿರ್ಲಕ್ಷಿಸಿತು ಎನ್ನುವುದು ತುಂಬಾ ಸೌಮ್ಯ ಪದವಾಗುತ್ತದೆ, ಬ್ಲಾಕ್–ಔಟ್ ಮಾಡಿತು ಎನ್ನುವುದೇ ಸರಿಯಾಗುತ್ತದೆ.

ಮಹಾ ಪಡಾವ್ ಮಾತ್ರವೇ ಅಲ್ಲ, ವಿವಿಧ ಜನವಿಭಾಗಗಳ ಸಂಘಟನೆಗಳು– ಕಾರ್ಮಿಕರು, ರೈತರು, ಯುವಜನರು, ವಿದ್ಯಾರ್ಥಿಗಳು, ದಲಿತರು, ಮಹಿಳೆಯರು, ಬುಡಕಟ್ಟು ಜನರು ಇತ್ಯಾದಿ – ನಡೆಸುವ ಚಳವಳಿಗಳನ್ನು ಭಾರತೀಯ ಮಾಧ್ಯಮ ಬ್ಲಾಕ್–ಔಟ್ ಮಾಡುವುದು ಸರ್ವೇ ಸಾಮಾನ್ಯವಾಗಿದೆ.

ಶಕ್ತಿ ಮತ್ತು ಜವಾಬ್ದಾರಿ

ಮತ್ತೆ ಅಮೆರಿಕದ ಅಧ್ಯಯನದತ್ತ ಬರೋಣ. "ಪತ್ರಕರ್ತರು ದೊಡ್ಡ ಶಕ್ತಿಯನ್ನು ಹೊಂದಿರುತ್ತಾರೆ, ಹೀಗಾಗಿ ಅವರ ಮೇಲೆ ದೊಡ್ಡ ಹೊಣೆಗಾರಿಕೆಯೂ ಇದೆ ಎನ್ನುವುದು ನಮ್ಮ ಅಧ್ಯಯನಗಳ ಫಲಿತವಾಗಿದೆ"– ಇದು ಕಿಂಗ್ ಅವರ ಅಭಿಮತ.

ಸಂಶೋಧಕರು ತಾವು ಸೂಚಿಸಿದ ವಿಷಯಗಳ ಮೇಲೆ ಲೇಖನಗಳನ್ನು ಬರೆಯುವಂತೆ ಎರಡರಿಂದ ಐದು ಆಯ್ದ ಮಾಧ್ಯಮ ಸಂಸ್ಥೆಗಳಿಗೆ ಸೂಚಿಸಿದ್ದರು, ಅವುಗಳನ್ನು ರ್‍ಯಾಂಡಮ್ ಆಗಿ ಆಯ್ಕೆ ಮಾಡಲಾದ ದಿನಾಂಕಗಳಂದು – ಆ ವಿಷಯಗಳ ಮೇಲೆ ಆ ಅವಧಿಯಲ್ಲಿ ಯಾವುದೇ ಅಚ್ಚರಿದಾಯಕವಾದ ಬೆಳವಣಿಗೆಗಳು ನಡೆಯಲಾರವು ಎಂಬುದನ್ನು ಊಹಿಸಿ– ಪ್ರಕಟಿಸುವಂತೆ ತಿಳಿಸಲಾಗಿತ್ತು. ಎರಡು ವಾರಗಳ ಕಾಲ ಇದನ್ನು ಮಾಡಲಾಯಿತು. ಮೊದಲನೆಯ ವಾರ– ಲೇಖನಗಳನ್ನು ಪ್ರಕಟಿಸಿದ "ಟ್ರೀಟ್‌ಮೆಂಟ್ ವೀಕ್(ವಾರ)', ಎರಡನೆಯದು ಆ ವಿಷಯಗಳ ಮೇಲೆ ಸಾಮಾಜಿಕ ಮಾಧ್ಯಮದಲ್ಲಿ ಉಂಟಾದ ಪರಿಣಾಮಗಳನ್ನು ಸಂಶೋಧಕರು ಮಾಪನ ಮಾಡಿದ 'ನಿಯಂತ್ರಣ ವಾರ'.

ಟ್ರೀಟ್‌ಮೆಂಟ್ ಮತ್ತು ನಿಯಂತ್ರಣ ಈ ಎರಡೂ ವಾರಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಅದರಲ್ಲೂ ವಿಶೇಷವಾಗಿ ಟ್ವಿಟ್ಟರ್‌ನಲ್ಲಿ ಆದ ರಾಷ್ಟ್ರೀಯ ಸಂವಾದವನ್ನು ಮಾನಿಟರ್ ಮಾಡಲು ಸಂಶೋಧಕರು ವಿಶ್ಲೇಷಣಾ ಸಾಧನಗಳನ್ನು (ಅನಲಿಟಿಕ್ಸ್ ಟೂಲ್ಸ್) ಬಳಸಿದರು.

ತಮ್ಮ ಮಧ್ಯಪ್ರವೇಶದಿಂದಾಗಿ ನಿರ್ದಿಷ್ಟ ನೀತಿ ವಿಷಯದ ಮೇಲಿನ ಚರ್ಚೆ ಶೇಕಡಾ 62.7ರಷ್ಟು ಹೆಚ್ಚಾಯಿತು ಎಂಬುದನ್ನು ಸಂಶೋಧಕರು ಕಂಡುಕೊಂಡರು. ಅಂದರೆ ಟ್ರೀಟ್‌ಮೆಂಟ್ ವಾರದಲ್ಲಿ 13,166 ಹೆಚ್ಚುವರಿ ಪೋಸ್ಟ್‌ಗಳು ಬಂದವು. ರಾಜಕೀಯ ಅಫಿಲಿಯೇಷನ್, ಲಿಂಗ ಮತ್ತು ಅಮೆರಿಕದ ಪ್ರದೇಶಗಳಲ್ಲಿ ಜನರ ಉಪ–ಗುಂಪುಗಳನ್ನು ಸಮಾನವಾಗಿ ಹಂಚಲಾಗಿದ್ದು ಪರಿಣಾಮ ಕೂಡ ಅದೇ ಪ್ರಮಾಣದಲ್ಲಿರುವುದು ತಿಳಿದುಬಂತು.

"ಸುದ್ದಿ ಮಾಧ್ಯಮಕ್ಕೆ ಒಡ್ಡುವುದರಿಂದ ನಿರ್ದಿಷ್ಟ ವಿಷಯಗಳ ಮೇಲೆ ಸಾರ್ವಜನಿಕ ನಿಲವನ್ನು ತಾಳುವಂತೆ, ರಾಷ್ಟ್ರೀಯ ನೀತಿ ನಿರೂಪಣೆ ಸಂವಾದದಲ್ಲಿ ಭಾಗವಹಿಸುವಂತೆ ಹಾಗೂ ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಅಮೆರಿಕನ್ನರನ್ನು ಪ್ರೇರೇಪಿಸಲು ಸಾಧ್ಯವಾಯಿತು ಎನ್ನುವುದನ್ನು ಫಲಿತಾಂಶ ತೋರಿಸಿಕೊಟ್ಟಿದೆ" ಎಂದು ತಮ್ಮ ಲೇಖನದಲ್ಲಿ ಸಂಶೋಧಕರು ಹೇಳಿದ್ದಾರೆ. ಈ ಮೂರೂ ಅಂಶಗಳು ಪ್ರಜಾಪ್ರಭುತ್ವ ರಾಜಕೀಯದ ಪ್ರಮುಖ ಭಾಗಗಳು. ಸಾಮಾನ್ಯವಾದ ಅಭಿವ್ಯಕ್ತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಅಭಿವ್ಯಕ್ತಿಸಿದ್ದಾರೆ ಎನ್ನುವುದು ಫಲಿತಾಂಶದ ವರದಿ.

ಸಾಮಾಜಿಕ ಮಾಧ್ಯಮದ ಮೂಲಕ ಸುದ್ದಿಯನ್ನು ಪಡೆಯುವ ಹಾಗೂ ಅಭಿಪ್ರಾಯವನ್ನು ರೂಪಿಸುವ ಜನರ ಸಂಖ್ಯೆ ಹೆಚ್ಚಾಗುತ್ತಿದ್ದು ವೆಬ್ 2.0 ಜಗತ್ತು ಸುದ್ದಿಯ ಗ್ರಹಿಕೆಯನ್ನು ವಿಭಜಿಸಿದೆ ಹಾಗೂ ವಿಸ್ತರಿಸಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಮಹತ್ವವನ್ನು ಪಡೆದುಕೊಂಡಿದೆ. ಇದು ಸುಳ್ಳು ಸುದ್ದಿ ಹರಡುವ ಪ್ರಕ್ರಿಯೆ ಹೆಚ್ಚಳಕ್ಕೂ ದಾರಿ ಮಾಡಿದೆ. ಸುಳ್ಳು ಸುಳ್ಳೇ ಎಚ್ಚರಿಕೆಗಳೂ ಅನೇಕ ಸಲ ಸರಿಯಾದ ಮಾಹಿತಿಯಿಲ್ಲದ ಸಾರ್ವಜನಿಕ ಅಭಿಪ್ರಾಯ ನಿರೂಪಣೆಗೂ ಅವಕಾಶ ಕಲ್ಪಿಸುತ್ತಿದೆ. ತಥಾಕಥಿತ ದೊಡ್ಡ ಮಾಧ್ಯಮಗಳು ಭ್ರಮೆಗಳಲ್ಲಿ ಕಾರ್ಯನಿರ್ವಹಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಹಾಗೂ ದೇಶದ ಭಾವನೆ ಏನಿದೆ ಎನ್ನುವುದನ್ನು ಸರಿಯಾಗಿ ಅಂದಾಜು ಮಾಡುವಲ್ಲಿ ಅವುಗಳ ಹೀನಾಯ ವೈಫಲ್ಯಗಳಿಂದ ಇದು ಇನ್ನಷ್ಟು ಸ್ಪಷ್ಟವಾಗಿ ಗೋಚರಿಸುತ್ತದೆ. ಉದಾಹರಣೆಗೆ 2016ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಏನಾಯಿತು ಎನ್ನುವುದನ್ನು ಗಮನಿಸಿ.

ನಮ್ಮ ರಾಷ್ಟ್ರೀಯ ಸಂವಾದದ ಮೇಲೆ ಪ್ರಬಲವಾಗಿ ಪ್ರಭಾವ ಬೀರಬಲ್ಲ ಸಾಮರ್ಥ್ಯ ಮಾಧ್ಯಮಕ್ಕೆ ಇದೆ ಎನ್ನುವುದಾದರೆ ಸುಳ್ಳು ಸುದ್ದಿಗಳ ಪ್ರಭಾವವನ್ನು ಕಡಿಮೆ ಮಾಡಲು ಅಥವಾ ಅವುಗಳನ್ನು ಸೋಸಲು ಮುಂದೆ ಸಂಶೋಧನೆಗಳನ್ನು ನಡೆಸಲು ಅವಕಾಶಗಳಿವೆ ಎನ್ನುವುದು ಇದರ ಸೂಚನೆಯಾಗಿದೆ ಎಂದು ಅಧ್ಯಯನ ವರದಿ ಅಭಿಪ್ರಾಯ ಪಟ್ಟಿದೆ. ●

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಬೀದರ್ : ನವೆಂಬರ್ 18–19 ಹುಮನ್ನಾಬಾದ್.
ಶಿವಮೊಗ್ಗ : ನವೆಂಬರ್ 19, ಭದ್ರಾವತಿ.
ಬೆಂಗಳೂರು ಉತ್ತರ : ನವೆಂಬರ್ 24–25, ಬೆಂಗಳೂರು.
ಧಾರವಾಡ : ನವೆಂಬರ್ 25–26, ಗಜೇಂದ್ರಗಡ
ಕೊಡಗು : ನವೆಂಬರ್ 26–27, ಸಿದ್ದಾಪುರ.
ಬಿಜಾಪುರ : ಡಿಸೆಂಬರ್ 2–3 ಬಿಜಾಪುರ.
ಬೆಂಗಳೂರು ಗ್ರಾಮಾಂತರ : ಡಿಸೆಂಬರ್ 3, ನೆಲಮಂಗಲ.
ಗುಲ್ಬರ್ಗಾ: ಡಿಸೆಂಬರ್ 3–5, ಕಮಲಾಪುರ.
ಬಳ್ಳಾರಿ: ಡಿಸೆಂಬರ್ 9–10, ಕಂಪ್ಲಿ.
ತುಮಕೂರು : ಡಿಸೆಂಬರ್ 9–10 ತುಮಕೂರು.
ಹಾಸನ : ಡಿಸೆಂಬರ್ 9–10, ಸಕಲೇಶಪುರ.
ಚಿಕ್ಕಬಳ್ಳಾಪುರ : ಡಿಸೆಂಬರ್ 13–14, ಗುಡಿಬಂಡೆ.
ಬೆಂಗಳೂರು ದಕ್ಷಿಣ : ಡಿಸೆಂಬರ್ 15–17, ಬೆಂಗಳೂರು.
ಮೈಸೂರು : ಡಿಸೆಂಬರ್ 16–17, ಹುಣಸೂರು
ದಕ್ಷಿಣ ಕನ್ನಡ : ಡಿಸೆಂಬರ್ 17–18, ಮಂಗಳೂರು.
ಉತ್ತರ ಕನ್ನಡ : ಡಿಸೆಂಬರ್ 17–18, ದಾಂಡೇಲಿ.
ಕೋಲಾರ : ಡಿಸೆಂಬರ್ 22–23, ಕೋಲಾರ.
ರಾಯಚೂರು : ಡಿಸೆಂಬರ್ 23–24, ರಾಯಚೂರು.
ದಾವಣಗೆರೆ : ಡಿಸೆಂಬರ್ 24–25, ದಾವಣಗೆರೆ.
ಉಡುಪಿ : ಡಿಸೆಂಬರ್ 24–26, ಬೈಂದೂರು.

ಅಸ್ಸಾಂ: ರಾಷ್ಟ್ರೀಯ ನಾಗರಿಕ ದಾಖಲೆ ಪ್ರಕ್ರಿಯೆ ನ್ಯಾಯಯುತವಾಗಿ ನಡೆಯಲಿ

ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ ಅಸ್ಸಾಂನ ರಾಷ್ಟ್ರೀಯ ನಾಗರಿಕರ ದಾಖಲೆ (ನ್ಯಾಷನಲ್ ರಿಜಿಸ್ಟರ್ ಆಫ್ ಸಿಟಿಜನ್ಸ್-ಎನ್‌ಆರ್‌ಸಿ)ಯ ಕರಡನ್ನು 2017 ಡಿಸೆಂಬರ್ 31ರಂದು ಪ್ರಕಟಿಸಬೇಕಾಗಿದೆ. 1951ರ ಎನ್‌ಆರ್‌ಸಿಯನ್ನು ಸಮಕಾಲಿಕಗೊಳಿಸುವ ಪ್ರಕ್ರಿಯೆ 1985ರ ಅಸ್ಸಾಂ ಒಪ್ಪಂದವನ್ನು ಅನುಷ್ಠಾನಗೊಳಿಸುವಲ್ಲಿನ ಒಂದು ಮಹತ್ವದ ಅಂಶ. ಈ ಒಪ್ಪಂದವು ಕಾನೂನುಬಾಹಿರ ವಲಸೆಗಾರರನ್ನು ನಿರ್ಧರಿಸಲು 1971 ಮಾರ್ಚ್ 25ರ ದಿನಾಂಕವನ್ನು ಕಟ್‌ಆಫ್ ದಿನಾಂಕವನ್ನಾಗಿ ನಿಗದಿಪಡಿಸಿದೆ. ಆ ದಿನಾಂಕದ ನಂತರ ಬಂದವರು ಅಕ್ರಮ ವಲಸಿಗರು ಎಂಬುದು ಅದರ ಅರ್ಥವಾಗಿದೆ.

ಹೀಗಾಗಿ ಎನ್‌ಆರ್‌ಸಿ ಯನ್ನು ಸಮಕಾಲಿಕಗೊಳಿಸುವುದು ಅಸ್ಸಾಂನಲ್ಲಿ 'ವಿದೇಶಿಯರು' ಯಾರೆಂಬುದನ್ನು ನಿರ್ಧರಿಸುವ ವಿಷಯವನ್ನು ಇತ್ಯರ್ಥಪಡಿಸುವಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಅಸೊಮಿಯಾ ಮತ್ತು ಸ್ಥಳೀಯ ಸಮುದಾಯಗಳು ಅಕ್ರಮ ವಲಸೆಯ ಬಗ್ಗೆ ಹೊಂದಿರುವ ಭಯವನ್ನು ಇದು ನಿವಾರಿಸುತ್ತದೆ.

ಅಲ್ಲದೆ, 1971 ಮಾರ್ಚ್ 24ರ ಕಟ್‌ಆಫ್ ದಿನಾಂಕ ಬಳಸಿ ನ್ಯಾಯಸಮ್ಮತವಾಗಿ ನಾಗರಿಕರನ್ನು ದಾಖಲಿಸಿದರೆ, ಪೂರ್ವ ಬಂಗಾಳ ಮೂಲದ ಜನರಿಗೆ- ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ಸಮುದಾಯಗಳೆರಡೂ ಸೇರಿ- ಕಿರುಕುಳ ನೀಡುವುದಕ್ಕೆ ಅಂತ್ಯ ಹಾಡಲೂ ಸಾಧ್ಯವಾಗುತ್ತದೆ.

ಸುಪ್ರೀಂ ಕೋರ್ಟ್‌ನ ಮೇಲುಸ್ತುವಾರಿಯಲ್ಲಿ ಎನ್‌ಆರ್‌ಸಿ ಉನ್ನತೀಕರಣವನ್ನು ಸಿದ್ಧಪಡಿಸಲಾಗುತ್ತಿದೆ. ಆದರೆ ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನಗಳು ಪದೇ ಪದೇ ನಡೆಯುತ್ತಿವೆ. ಮುಸ್ಲಿಮೇತರ ವಲಸಿಗರಿಗೆ ನಾಗರಿಕತ್ವ ನೀಡುವ ನಿಟ್ಟಿನಲ್ಲಿ ಕೇಂದ್ರ ಸರಕಾರ ತಂದಿರುವ ನಾಗರಿಕತ್ವ ತಿದ್ದುಪಡಿ ಮಸೂದೆ-2016 ಇದು ಎನ್‌ಆರ್‌ಸಿ ಪ್ರಕ್ರಿಯೆಯನ್ನು ದುರ್ಬಲಗೊಳಿಸುವ ಒಂದು ಗಂಭೀರ ಪ್ರಯತ್ನವಾಗಿದೆ. ಈ ಎಲ್ಲವುಗಳ ಹೊರತಾಗಿಯೂ ಸಮಕಾಲಿಕಗೊಳಿಸಿ ಪರಿಷ್ಕರಿಸುವ ಪ್ರಕ್ರಿಯೆ ಮುಂದುವರಿದಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ವಿಭಾಗಗಳಲ್ಲಿ ಕಳವಳ ಹಾಗೂ ಆತಂಕ ಮೂಡಲು ಕಾರಣವಾದ ಕೆಲವು ವಿದ್ಯಮಾನಗಳು ನಡೆದಿವೆ.

1971ರ ಮುಂಚೆ ನೆಲೆಸಿದ್ದ ತಂದೆ-ತಾಯಿ ಮತ್ತು ಅಜ್ಜ-ಅಜ್ಜಿಯರ ಸಂಬಂಧವನ್ನು ಸಂಸ್ಥಾಪಿಸಲು ಪಂಚಾಯತ್‌ಗಳು ನೀಡುವ ಪ್ರಮಾಣ ಪತ್ರಗಳನ್ನು ಒಂದು ಪ್ರಮುಖ ದಾಖಲೆ ಎಂದು ಪಟ್ಟಿ ಮಾಡಲಾಗಿದೆ. 47 ಲಕ್ಷಕ್ಕೂ ಹೆಚ್ಚು ಜನರು ಇಂಥ ಜೋಡಣೆ ದಾಖಲೆಗಳನ್ನು ಸಲ್ಲಿಸಿದ್ದಾರೆ. ಸುಪ್ರೀಂ ಕೋರ್ಟ್‌ಗೆ ಎನ್‌ಆರ್‌ಸಿ ಸಮನ್ವಯಕಾರರು ಇದೇ ಅಕ್ಟೋಬರ್‌ನಲ್ಲಿ ಸಲ್ಲಿಸಿರುವ ವರದಿ ಪ್ರಕಾರ ಈ 47 ಲಕ್ಷ ಅರ್ಜಿದಾರರ ಪೈಕಿ ಸುಮಾರು 17.40 ಲಕ್ಷ ಜನರು 'ಮೂಲ ನಿವಾಸಿಗಳು' ಆಗಿದ್ದು ಅವರ ಹೆಸರುಗಳನ್ನು ಎನ್‌ಆರ್‌ಸಿಯಲ್ಲಿ ಸೇರ್ಪಡೆ ಮಾಡಲಾಗುತ್ತದೆ. ಉಳಿದ 29 ಲಕ್ಷ ಜನರ ಪರಿಸ್ಥಿತಿ ಅನಿಶ್ಚಯ ಎನ್ನುವುದು ಇದರ ಅರ್ಥವಾಗಿದೆ. ಈ 29 ಲಕ್ಷ ಅರ್ಜಿದಾರರ ಪೈಕಿ 27 ಲಕ್ಷ ಜನರು ವಿವಾಹಿತ ಮಹಿಳೆಯರಾಗಿದ್ದಾರೆ. ತಮ್ಮ ಪೋಷಕರ ಗುರುತನ್ನು ಸಾಬೀತು ಪಡಿಸುವ ಪಂಚಾಯತ್ ನೀಡಿರುವ ದಾಖಲೆಗಳನ್ನು ಈ ಮಹಿಳೆಯರು ಸಲ್ಲಿಸಿದ್ದಾರೆ. ಆ ಸರ್ಟಿಫಿಕೆಟ್‌ಗಳಿಗೆ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಕೌಂಟರ್-ಸಹಿ ಮಾಡಿದ್ದಾರೆ. ಆದರೆ ಸಂಬಂಧವನ್ನು ಸಾಬೀತು ಪಡಿಸುವ ಈ ಪಂಚಾಯತ್ ಪ್ರಮಾಣ ಪತ್ರಗಳನ್ನು ಪುರಾವೆಯಾಗಿ ಅಂಗೀಕರಿಸದಿದ್ದರೆ ದೊಡ್ಡ ಸಂಖ್ಯೆಯಲ್ಲಿರುವ ನಿಜವಾದ ನಾಗರಿಕರ ಪರಿಸ್ಥಿತಿ ಅಯೋಮಯವಾಗುತ್ತದೆ.

ಜನರನ್ನು 'ಮೂಲ ನಿವಾಸಿಗಳು' ಎಂದು ವರ್ಗೀಕರಿಸುವುದಕ್ಕೆ ಯಾವುದೇ ಕಾನೂನಾತ್ಮಕ ಆಧಾರವಿಲ್ಲ. 1955ರ ನಾಗರಿಕತ್ವ ಕಾನೂನು ಅಥವಾ ಯಾವುದೇ ಸಾಂವಿಧಾನಿಕ ಪ್ರಾಧಿಕಾರವು ಅದನ್ನು ವ್ಯಾಖ್ಯಾನಿಸಿಲ್ಲ. 'ಮೂಲ ನಿವಾಸಿಯೇತರ' ಆಧಾರದಲ್ಲಿ ಯಾರನ್ನಾದರೂ ಹೊರತುಪಡಿಸಿದರೆ ಅದು ಅಸ್ಸಾಂ ಮತ್ತು ಪೂರ್ವ ಬಂಗಾಳದಲ್ಲಿ ಬ್ರಿಟಿಷರ ಕಾಲದಿಂದಲೂ ದೀರ್ಘ ಸಮಯದಿಂದ ನೆಲೆಯೂರಿರುವ ಜನರನ್ನು ಗುರಿಯಾಗಿಸುತ್ತದೆ.

ಈ ಪ್ರಶ್ನೆಗಳು ಈಗಾಗಲೇ ಉದ್ವಿಗ್ನತೆಯನ್ನು ಸೃಷ್ಟಿಸಿವೆ ಹಾಗೂ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ಅದನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ. ಅದು ಎನ್‌ಆರ್‌ಸಿ ಸಮಕಾಲಿಕಗೊಳಿಸುವ ಪ್ರಕ್ರಿಯೆ ಮೇಲೆ ದುಷ್ಪರಿಣಾಮ ಬೀರಬಹುದಾಗಿದೆ.

ಹೀಗಾಗಿ ಸುಪ್ರೀಂ ಕೋರ್ಟ್ ಸೂಚಿಸಿದ ಮಾರ್ಗದರ್ಶಿ ಸೂತ್ರಗಳ ಪ್ರಕಾರವೇ ಎನ್‌ಆರ್‌ಸಿ ಸಮಕಾಲಿಕಗೊಳಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು ಮಹತ್ವದ್ದಾಗಿದೆ. ರಿಜಿಸ್ಟರ್‌ನಲ್ಲಿ ಸೇರ್ಪಡೆ ಮಾಡಲು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿದವರನ್ನು ಅದರಲ್ಲೂ ವಿಶೇಷವಾಗಿ ವಿವಾಹಿತ ಮಹಿಳೆಯರನ್ನು ಎನ್‌ಆರ್‌ಸಿಯಲ್ಲಿ ಸೇರಿಸಬೇಕು. 'ಮೂಲ ನಿವಾಸಿಗಳು' ಎಂಬ ಅಸ್ಪಷ್ಟ ವ್ಯಾಖ್ಯಾನಕ್ಕೆ ಅಂಟಿಕೊಳ್ಳಬಾರದು. 1971 ಮಾರ್ಚ್ 25ರ ಮುಂಚೆ ಅಸ್ಸಾಂನಲ್ಲಿ ವಾಸಿಸುತ್ತಿದ್ದ ಎಲ್ಲರನ್ನೂ ಅಥವಾ ಆ ದಿನಕ್ಕಿಂತ ಮುಂಚೆ ವಾಸಿಸುತ್ತಿರುವುದಕ್ಕೆ ಜೋಡಣೆ ದಾಖಲೆಗಳನ್ನು ಸಲ್ಲಿಸಿದ ಎಲ್ಲರ ಹೆಸರುಗಳನ್ನು ರಾಷ್ಟ್ರೀಯ ನಾಗರಿಕ ದಾಖಲೆಯಲ್ಲಿ ಸೇರಿಸಬೇಕು. ಇದು ಅಕ್ರಮ ವಲಸಿಗರ ಪ್ರಶ್ನೆಯನ್ನು ಬಗೆಹರಿಸುವಲ್ಲಿ ತುಂಬಾ ನೆರವಾಗುತ್ತದೆ.

> ಅಸ್ಸಾಂನಲ್ಲಿ ರಾಷ್ಟ್ರೀಯ ನಾಗರಿಕರ ದಾಖಲೆಯನ್ನು ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ, ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಹಸ್ತಕ್ಷೇಪ ಮಾಡುವ ಪ್ರಯತ್ನಗಳು ಪದೇ ಪದೇ ನಡೆಯುತ್ತಿವೆ. ಕೆಲವು ಜನವಿಭಾಗಗಳಲ್ಲಿ ಕಳವಳ ಹಾಗೂ ಆತಂಕ ಮೂಡಲು ಕಾರಣವಾದ ಕೆಲವು ವಿದ್ಯಮಾನಗಳು ನಡೆದಿವೆ. ಈ ಪ್ರಶ್ನೆಗಳು ಈಗಾಗಲೇ ಉದ್ವಿಗ್ನತೆಯನ್ನು ಸೃಷ್ಟಿಸಿವೆ ಹಾಗೂ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ಅದನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ.



* ಪ್ರಕಾಶ್ ಕಾರಟ್

ಅನು: ವಿಶ್ವ

ಗೋರಕ್ಷಕರೆನ್ನುವ ಗುಂಡಾಗಳಿಂದ ರಾಜಸ್ಥಾನದಲ್ಲಿ ಮತ್ತೊಬ್ಬ ರೈತನ ಕೊಲೆ

ರೈತ ಸಂಘದ ಖಂಡನೆ

ರಾಜಸ್ತಾನದ ಅಳವಾರ್ ನಲ್ಲಿ ಗೋರಕ್ಷಕ ಗುಂಡಾಗಳು ಉಮರ್ ಖಾನ್ ಎಂಬ ಮತ್ತೊಬ್ಬ ರೈತನನ್ನು ಕೊಲೆ ಗೈದ ಘಟನೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್‌ಎಸ್.)ದ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಇದು ಕಳೆದ ವರ್ಷ ಇದೇ ಪ್ರದೇಶದಲ್ಲಿ ರೈತ ಪೆಹ್ಲುಖಾನ್ ಕೊಲೆಯ ನಂತರದ ಎರಡನೇ ಕೊಲೆಯಾಗಿದೆಯೆಂದು ತನ್ನ ಆಳವಾದ ಆತಂಕವನ್ನು ವ್ಯಕ್ತ ಪಡಿಸಿದೆ.

ಉಮರ್ ಖಾನ್ ಮತ್ತು ಅವನ ಇಬ್ಬರು ಜೊತೆಗಾರರಾದ ತಾಹಿರ್ ಖಾನ್ ಮತ್ತು ಜಾವೇದ್ ಖಾನ್ ಜೈಪುರದ ಹತ್ತಿರದ ಗ್ರಾಮ ಒಂದರಿಂದ ಹಸುಗಳನ್ನು ಖರೀದಿಸಿ ವಾಪಾಸು ನಡೆದ ಹಾದಿಯಲ್ಲಿ ರಾಮಗಡವನ್ನು ದಾಟಿದ ನಂತರ ಗಹಾಂಕರ್ ಎಂಬ ಗ್ರಾಮದ ಹತ್ತಿರ, ಬಿಳಿ ಬಣ್ಣದ ಟಾಟಾ ಸುಮೊ ಕಾರಿನಲ್ಲಿ ಬಂದ ಆರೇಳು ಜನ ಹಂತಕರು ರೈತರನ್ನು ತಡೆಗಟ್ಟಿ ಗೋರಕ್ಷಣೆಯ ಹೆಸರಿನಲ್ಲಿ ಹಲ್ಲೆ ನಡೆಸಿ ಗುಂಡು ಹಾರಿಸಿದ್ದಾರೆ.

ಈ ದಾಳಿಯಲ್ಲಿ ಉಮರ್ ಖಾನ್ ಕೊಲ್ಲಲ್ಪಟ್ಟಿದ್ದಾನೆ. ಜಾವೇದ್ ಖಾನ್‌ಗೆ ಏನಾಗಿದೆಯೆಂದು ತಿಳಿದಿಲ್ಲ.

ಈ ಘಟನೆಗಿಂತಲೂ ಆತಂಕಕಾರಿ ಹಾಗೂ ತೀವ್ರ ಖಂಡನೀಯವಾದ ವಿಚಾರವೆಂದರೆ ಹಂತಕ ಗೂಂಡಾಗಳನ್ನು ಬಂದಿಸುವ ಬದಲು ರಾಜಸ್ತಾನದ ಪೋಲೀಸರು ಧಾಳಿಗೊಳಗಾದ ಈ ರೈತರ ಮೇಲೆಯೇ ಕೇಸು ದಾಖಲಿಸಿರುವುದಾಗಿದೆ. ಅದೇ ರೀತಿ, ಕೊಲೆಗಡುಕರ ಮೇಲೆ ಕ್ರಮ ವಹಿಸದೇ, ಅಲ್ಲಿನ ಪೋಲೀಸ್ ಸೂಪರಿಂಟೆಂಡೆಂಟರು ಯಾವುದೇ ತನಿಖೆ ನಡೆಸದೇ ದಾಳಿಗೊಳಗಾದ ರೈತರನ್ನು ಹಸುಗಳ್ಳರೆಂದು ನಿರ್ಧರಿಸಿರುವುದಾಗಿದೆ.

ಕಳೆದ ತಿಂಗಳು ಅಲ್ಲಿನ ಬಿಜೆಪಿ ನಾಯಕನೊಬ್ಬನ ಅಣತಿಯಂತೆ ಮುಸ್ಲಿಂ ರೈತನೊಬ್ಬನ ಮನೆಗೆ ನುಗ್ಗಿದ ಅಳವಾರದ ಪೋಲೀಸರು ಬಲವಂತವಾಗಿ 40 ಹಸುಗಳನ್ನು ವಶಪಡಿಸಿಕೊಂಡು ಅವುಗಳನ್ನು ಗೋಶಾಲೆಗೆ ಬಿಟ್ಟುದನ್ನು, ವ್ಯಾಪಕವಾದ ಪ್ರತಿಭಟನೆಗಳ ನಂತರ ಮಾತ್ರವೇ ವಾಪಾಸು ನೀಡಿದ್ದ ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಇದೆಲ್ಲಾ ರಾಜಸ್ಥಾನದ ಬಿಜೆಪಿ ಸರಕಾರ ಗೋಪಾಲಕ ರೈತರ ಕುರಿತ ಅದರ ವಿರೋದಿ ನೀತಿಯನ್ನು ಮತ್ತು ಗೋರಕ್ಷಕ ಗೂಂಡಾಗಳ ಪರವಾದ ಅದರ ನಿಲುಮೆಯನ್ನು ಮತ್ತೊಮ್ಮೆ ಬಯಲುಗೊಳಿಸಿದೆ. ಎಂದು ಕೆ.ಪಿ.ಆರ್‌ಎಸ್.) ಹೇಳಿದೆ.

ಇಂತಹ ಘಟನೆಗಳು ಮತ್ತು ಕಗ್ಗೊಲೆಗಳು ದೇಶದಾದ್ಯಂತ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿ, ಗೋರಕ್ಷಕ ಗುಂಡಾಗಳ, ಗೋಪಾಲಕ ರೈತರ ಮೇಲಿನ ದಾಳಿಯನ್ನು ನಿಗ್ರಹಿಸಲು ಮತ್ತು ಧಾಳಿಕೋರರ ಮೇಲೆ ಕಠಿಣ ಕ್ರಮವಹಿಸುವಂತೆ ಹಾಗೂ ಅದೇ ರೀತಿ ದಾಳಿಗೊಳಗಾದವರ ಕುಟುಂಬಗಳಿಗೆ ಅಗತ್ಯ ಪರಿಹಾರ ನೀಡಲು ಕ್ರಮ ವಹಿಸುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಸ್ಪಷ್ಟವಾದ ಆದೇಶಗಳನ್ನು ನೀಡಿದ್ದರೂ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಈ ಆದೇಶದ ಉಲ್ಲಂಘನೆಗಳಿಂದ ಗುಂಡಾ ಹಾವಳಿ ಮುಂದುವರೆದಿರುವುದು ಸರಕಾರಗಳ ರೈತ ಹಾಗೂ ಗೋಪಾಲಕರ ವಿರೋದಿ ನೀತಿಯನ್ನು ಬಯಲಿಗೆಳೆದಿದೆ.

ಕಳೆದ ವರ್ಷ ಹತ್ಯೆಯಾದ ಪೆಹ್ಲು ಖಾನನ ಕುಟುಂಬಕ್ಕೆ ಈಗಲೂ ಪರಿಹಾರವನ್ನು ರಾಜಸ್ಥಾನದ ಬಿಜೆಪಿ ಸರಕಾರ ನೀಡಿಲ್ಲ. ಆ ರೈತನ ಕೊಲೆಗಡುಕರು ರಾಜಾರೋಷವಾಗಿ ತಿರುಗುತ್ತಿದ್ದಾರೆ.

ತಕ್ಷಣವೇ ಎಲ್ಲಾ ಕೊಲೆಗಡುಕರನ್ನು ಬಂಧಿಸಿ ಕಠಿಣ ಕ್ರಮ ವಹಿಸಲು ಮತ್ತು ದಾಳಿಗೊಳಗಾದ ಕುಟುಂಬದ ಸದಸ್ಯರಿಗೆ ತಲಾ 10 ಲಕ್ಷ ರೂಗಳ ಪರಿಹಾರವನ್ನು ವಿತರಿಸಬೇಕೆಂದು ರಾಜಸ್ಥಾನ ರಾಜ್ಯ ಸರ್ಕಾರವನ್ನು ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಒತ್ತಾಯಿಸಿದೆ. ಹಾಗೂ ರಾಷ್ಟಪತಿಗಳು ಮತ್ತು ಕೇಂದ್ರ ಸರಕಾರ ತಕ್ಷಣವೇ ಮಧ್ಯಪ್ರವೇಶಿಸಿ ಗೋರಕ್ಷಕ ಗುಂಡಾಪಡೆಗಳನ್ನು ದೇಶದಾದ್ಯಂತ ನಿಷೇಧಿಸಿ ಕಠಿಣ ಕ್ರಮಕ್ಕೆ ಮುಂದಾಗುವಂತೆ ಹಾಗೂ ಹತ್ಯೆಗೊಳಗಾದ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ವಿತರಿಸುವಂತೆ ಒತ್ತಾಯಿಸಿದೆ.

ನವಂಬರ್ 15 ರಂದು ದಿಲ್ಲಿಯ ಬಿಕಾನೇರ್ ಹೌಸ್ ಎದುರು ಹಲವು ಸಂಘಟನೆಗಳು ಸೇರಿ ನಡೆಸಿದ ಪ್ರತಿಭಟನಾ ಸಭೆಯಲ್ಲಿ ಎಐಕೆಎಸ್ ಅಧ್ಯಕ್ಷ ಅಶೋಕ ಧವಳೆ ಮತ್ತು ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಭಾಗವಹಿಸಿದರು.

ಇವರಿಬ್ಬರು ಮತ್ತು ಹಣಕಾಸು ಕಾರ್ಯದರ್ಶಿ ಕೃಷ್ಣಪ್ರಸಾದ್ ಮತ್ತು ರಾಜಸ್ತಾನ ಕಿಸಾನ್ ಸಭಾದ ಪ್ರತಿನಿಧಿಗಳಿರುವ ಇರುವ ಎಐಕೆಎಸ್ ನಿಯೋಗವೊಂದು ನವಂಬರ್ 17ರಂದು ಉಮ್ಮರ್ ಖಾನ್ ಕುಟುಂಬವನ್ನು ಭೇಟಿ ಮಾಡಲಿದೆ.


ಮಹಾರಾಷ್ಟ್ರದಲ್ಲಿ ಕಬ್ಬು ಬೆಳೆಗಾರ ರೈತರ ಮೇಲೆ ಲಾಠಿ ಪ್ರಹಾರ-ಗಾಳಿಯಲ್ಲಿ ಗುಂಡು - ರೈತ ಸಂಘದ ಖಂಡನೆ


ಮಹಾರಾಷ್ಟ್ರ ರಾಜ್ಯದ ಅಹಮದ್ ನಗರ ಜಿಲ್ಲೆಯ ಶಿವಗಾಂವ್ ಪ್ರದೇಶದಲ್ಲಿ ಕಬ್ಬು ಬೆಳೆಗೆ ಪ್ರತಿ ಟನ್ ಗೆ 3100 ರೂಗಳ ಬೆಂಬಲ ಬೆಲೆಯನ್ನು ನೀಡಬೇಕೆಂದು ಒತ್ತಾಯಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಅಲ್ಲಿನ ನೂರಾರು ಕಬ್ಬು ಬೆಳೆಗಾರರ ಮೇಲೆ ಎರಗಿ ವ್ಯಾಪಕವಾಗಿ ಲಾಠಿ ಚಾರ್ಜ ನಡೆಸಿ ಗಾಳಿಯಲ್ಲಿ ಹಲವು ಸುತ್ತು ಗುಂಡು ಹಾರಿಸಿ ಪೋಲೀಸ್ ದಾಳಿ ನಡೆಸಿ ಪ್ರತಿಭಟನೆಗಳನ್ನು ಹತ್ತಿಕ್ಕಲು ಯತ್ನಿಸಿದ ಮಹಾರಾಷ್ಟ್ರ ರಾಜ್ಯದ ಬಿಜೆಪಿ ನೇತೃತ್ವದ ಸರಕಾರದ ದೌರ್ಜನ್ಯವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ತಕ್ಷಣವೇ ಕಬ್ಬು ಬೆಳೆಗಾರರ ಮೇಲಿನ ಈ ದೌರ್ಜನ್ಯಕ್ಕೆ ಕಾರಣರಾದ ಪೋಲೀಸ್ ಮತ್ತಿತರೆ ಅಧಿಕಾರಿಗಳನ್ನು ಅಮಾನತಿನಲ್ಲಿಟ್ಟು, ಅವರ ಮೇಲೆ ಕಾನೂನಿನ ಕ್ರಮ ವಹಿಸಲು ಕೆ.ಪಿ.ಆರ್.ಎಸ್. ಒತ್ತಾಯಿಸಿದೆ..

ಅದೇ ರೀತಿ ದೊಡ್ಡ ಪ್ರಮಾಣದಲ್ಲಿ ಗಾಯಗೊಂಡಿರುವ ಎಲ್ಲರಿಗೆ ಮತ್ತು ತೀವ್ರವಾಗಿ ಗಾಯಗೊಂಡ ಸುಮಾರು 7 ಜನ ರೈತರಿಗೆ ಉಚಿತ ಚಿಕಿತ್ಸೆ ಮತ್ತು ತಲಾ 5 ಲಕ್ಷ ರೂಗಳ ಪರಿಹಾರವನ್ನು ವಿತರಿಸುವಂತೆ ಹಾಗೂ ಕಬ್ಬು ಬೆಳೆಗೆ ಖರ್ಚಿನ ಒಂದೂವರೆ ಪಟ್ಟು ಬೆಂಬಲ ಬೆಲೆಯನ್ನು ನೀಡುವಂತೆ ಒತ್ತಾಯಿಸಿದೆ.

ಕಳೆದ ಒಂದು ವಾರದಿಂದ ಮಹಾರಾಷ್ಟ್ರ ರಾಜ್ಯದಾದ್ಯಂತ ಹಲವು ಕೇಂದ್ರಗಳಲ್ಲಿ ಕಬ್ಬು ಬೆಳೆಗಾರರು 3100 ರೂಗಳ ಬೆಂಬಲ ಬೆಲೆಗಾಗಿ ಶಾಂತಿಯುತ ಪ್ರತಿಭಟನೆಯಲ್ಲಿ ತೊಡಗಿದ್ದರೂ ರಾಜ್ಯ ಸರಕಾರ ಅವರ ಜೊತೆ ಮಾತುಕತೆ ನಡೆಸಿ ಪರಿಹರಿಸುವ ಬದಲು, ಪೋಲೀಸ್ ಬಲ ಉಪಯೋಗಿಸಿ ಹತ್ತಿಕ್ಕಲು ಮುಂದಾಗಿರುವುದು ಮಹಾರಾಷ್ಟ್ರ ರಾಜ್ಯ ಬಿಜೆಪಿ ನೇತೃತ್ವದ ಸರಕಾರದ ಜನ ವಿರೋಧಿ ನೀತಿಯನ್ನು ಬಯಲಿಗೆಳೆದಿದೆ ಎಂದು ಕೆಪಿಆರ್‌ಎಸ್ ಹೇಳಿದೆ.





ದಿಲ್ಲಿಗೆ ಲಕ್ಷಾಂತರ ಕಾರ್ಮಿಕರ ಅಭೂತಪೂರ್ವ ಲಗ್ಗೆ

ದೇಶದ ಕಾರ್ಮಿಕ ಸಂಘಟನೆಗಳ ಮೂರು ದಿನಗಳ ಐಕ್ಯ 'ಮಹಾಪಡಾವ್' ಹಲವು ರೀತಿಗಳಲ್ಲಿ ಮಹತ್ವಪೂರ್ಣವಾಗಿದೆ. ಕಾರ್ಮಿಕರು ಗೊಂದಲ ಸೃಷ್ಟಿಸುವ ವಿಭಜಿಸುವ, ಐಕ್ಯತೆಯನ್ನು ಮುರಿಯುವ ಎಲ್ಲ ಕುತಂತ್ರಗಳನ್ನು ವಿಫಲಗೊಳಿಸಿ ದೊಡ್ಡ ಸಂಖ್ಯೆಯಲ್ಲಿ ಈ ಮಹಾಧರಣಿಯಲ್ಲಿ ಭಾಗವಹಿಸಿದರು. ಇದು ಒಂದು ವಿಷಯವನ್ನು ದೃಢಪಡಿಸಿತು. ಅದೇಂದರೆ, ಸರಕಾರ ಅನುಸರಿಸುತ್ತಿರುವ ಧೋರಣೆಗಳ ವಿರುದ್ಧ ಅಸಂತೃಪ್ತಿ ಕಾರ್ಮಿಕ ವರ್ಗದ ಎಲ್ಲ ವಿಭಾಗಗಳಲ್ಲಿ, ಮೋದಿಯವರಿಗೆ ಮತನೀಡಿದ ಮಧ್ಯಮವರ್ಗಗಳ ನೌಕರರಲ್ಲಿಯೂ ಹೆಚ್ಚುತ್ತಿದೆ.

ಕಾರ್ಮಿಕರು ಹೋರಾಟ ನಡೆಸಲು ಸಿದ್ಧವಾಗಿದ್ದಾರೆ. ಈಗ ಅವರಲ್ಲಿ ವಿನಾಶಕಾರಿ ನವ-ಉದಾರವಾದಿ ಧೋರಣೆಗಳಿಗೆ ಪರ್ಯಾಯ ಇದೆ ಎಂಬುದರ ಅರಿವನ್ನು ಮೂಡಿಸಬೇಕಾಗಿದೆಯಷ್ಟೇ. ಇಂತಹ ಒಂದು ಪರ್ಯಾಯಕ್ಕೆ ಹೋರಾಟದ ನೇತೃತ್ವವನ್ನು ವಹಿಸಬೇಕಾದ್ದು ಕಾರ್ಮಿಕ ವರ್ಗ ಎಂಬ ಜಾಗೃತಿಯನ್ನು ಮೂಡಿಸಬೇಕಾಗಿದೆ; ಅವರಲ್ಲಿ ತಾವು ಇದನ್ನು ತಮ್ಮ ಸಂಘಟಿತ ಶಕ್ತಿಯ ಮೂಲಕ, ಮತ್ತು ರೈತರು, ಕೃಷಿಕೂಲಿಕಾರರು ಮುಂತಾದ ಇತರ ಶ್ರಮಜೀವಿ ವಿಭಾಗಗಳೊಂದಿಗೆ ಒಂದುಗೂಡುವ ಮೂಲಕ ಸಾಧಿಸಬಲ್ಲೆವು ಎಂಬ ವಿಶ್ವಾಸವನ್ನು ಮೂಡಿಸಬೇಕಾಗಿದೆ.

–**ಡಾ. ಕೆ..ಹೇಮಲತಾ,** ಈ ಕಾರ್ಯಾಚರಣೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಸಿಐಟಿಯುನ ಅಖಿಲ ಭಾರತ ಅಧ್ಯಕ್ಷರು.



ಮೋದಿ ಸರಕಾರದ ರಾಷ್ಟ್ರ-ವಿರೋಧಿ ಧೋರಣೆಗಳನ್ನು ಹಿಮ್ಮೆಟ್ಟಿಸಲು ತೀವ್ರತರ ಹೋರಾಟಕ್ಕೆ ಸಿದ್ಧಗೊಳಿಸಿರುವ ಬೃಹತ್ ಕಾರ್ಮಿಕ ಕಾರ್ಯಾಚರಣೆ

ಜಂಟಿ ಕಾರ್ಮಿಕ ಸಂಘಗಳ ಅಭೂಪತೂರ್ವ 'ಕಾರ್ಮಿಕ ಮಹಾಪಡಾವ್' ನವಂಬರ್ 11ರ ಸಂಜೆ ಬಿಜೆಪಿ ನೇತೃತ್ವದ ಸರಕಾರದ ಕಾರ್ಮಿಕ-ವಿರೋಧಿ, ಜನವಿರೋಧಿ ಮತ್ತು ದೇಶವಿರೋಧಿ ಧೋರಣೆಗಳ ವಿರುದ್ಗಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ದೇಶದ ಕಾರ್ಮಿಕ ವರ್ಗಕ್ಕೆ ನೀಡಿದ ರಣಕಹಳೆಯೊಂದಿಗೆ ಮುಕ್ತಾಯಗೊಂಡಿತು.

ಇದರಲ್ಲಿ ದೇಶದ ಎಲ್ಲೆಡೆಗಳಿಂದ ಮತ್ತು ಆರ್ಥಿಕದ ಎಲ್ಲ ವಲಯಗಳಿಂದ ಕಾರ್ಮಿಕರ ಅಪಾರ ಜನಸ್ತೋಮ ಭಾಗವಹಿಸಿತ್ತು. ಅವರೆಲ್ಲರೂ ಸರಕಾರ ಕಾರ್ಮಿಕರ ದನಿಗೆ ಕಿವಿಗೊಡದೆ, ತನ್ನ ದಾರಿಯನ್ನು ಬದಲಿಸದಿದ್ದರೆ ಒಂದು ಅನಿರ್ದಿಷ್ಟ ಕಾಲದ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಸಿದ್ರಧರಾಗಬೇಕು ಎಂಬ ಆಗಸ್ಟ್ 8, 2017ರ ರಾಷ್ಟ್ರೀಯ ಸಮಾವೇಶದ ಸರ್ವಸಮ್ಮತಿಯ ಕರೆಗೆ ಅತ್ಯುತ್ಸಾಹದಿಂದ ಅನುಮೋದನೆ ನೀಡಿದರು. ಆ ಗುರಿಸಾಧನೆಯತ್ತ ಒಂದು ದೀರ್ಘಕಾಲದ ಚಳುವಳಿಗಳ ಮತ್ತು ಕಾರ್ಯಾಚರಣೆಗಳ ಕಾರ್ಯಕ್ರಮವನ್ನು ರೂಪಿಸಲು ಕಾರ್ಮಿಕ ಸಂಘಟನೆಗಳ ಜಂಟಿ ಮುಖಂಡತ್ವ ನಿರ್ಧರಿಸಿದೆ (ಬಾಕ್ಸ್ ನೋಡಿ-ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಅಭಿನಂದನೆ).

ಮೂರು ದಿನಗಳ 'ಮಹಾಪಡಾವ್' ಹಲವು ರೀತಿಗಳಲ್ಲಿ ಮಹತ್ವಪೂರ್ಣವಾಗಿದೆ. ದೇಶ ರಾಜಧಾನಿಯಲ್ಲಿ ಸತತ ಮೂರು ದಿನಗಳ ಕಾಲ 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಕೈಗಾರಿಕಾ ಒಕ್ಕೂಟಗಳು ಒಟ್ಟಾಗಿ ಧರಣಿಯನ್ನು ಸಂಘಟಿಸಿರುವುದು ಇದೇ ಮೊದಲ ಬಾರಿ. ಮೂರೂ ದಿನಗಳಲ್ಲಿ ಸಾವಿರ-ಸಾವಿರ ಸಂಖ್ಯೆಯಲ್ಲಿ ಕಾರ್ಮಿಕರನ್ನು ಅಣಿನೆರೆಸಲಾಯಿತು. ಮಹಿಳಾ ಕಾರ್ಮಿಕರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದರು. ಸ್ಕೀಮ್ ನೌಕರರು ಮಾತ್ರವೇ ಅಲ್ಲ, ಬೀಡಿ, ಕಟ್ಟಡ ನಿರ್ಮಾಣ, ಮನೆಗೆಲಸದವರು, ಬೀದಿ ವ್ಯಾಪಾರಿಗಳು, ಮನೆ-ಆಧಾರಿತ ಕೆಲಸ ಮಾಡುತ್ತಿರುವ ಮಹಿಳೆಯರೂ ಭಾರೀ ಸಂಖ್ಯೆಯಲ್ಲಿ, ವಿಶೇಷವಾಗಿ ಮೂರನೇ ದಿನ ಬಂದಿದ್ದರು. ಯುವ ಕಾರ್ಮಿಕರ ಭಾಗವಹಿಸುವಿಕೆಯೂ ಗಮನಾರ್ಹವಾಗಿತ್ತು.

ಹಲವು ರಾಜ್ಯಮಟ್ಟದ ಕಾರ್ಮಿಕ ಸಂಘಟನೆಗಳೂ ಭಾಗವಹಿಸಿದ್ದು ಮತ್ತೊಂದು ಮಹತ್ವದ ಸಂಗತಿ. ಅವುಗಳಲ್ಲಿ ಕೆಲವು ಕೇರಳ, ತೆಲಂಗಾಣ ಮುಂತಾದೆಡೆಗಳಲ್ಲಿ ರಾಜ್ಯಮಟ್ಟದ ಜಂಟಿ ಕಾರ್ಮಿಕ ವೇದಿಕೆಗಳ ಸದಸ್ಯರಾಗಿರುವವರು. ಇವರೊಂದಿಗೆ, ಯಾವುದೇ ಕೇಂದ್ರೀಯ ಕಾರ್ಮಿಕ ಸಂಘಟನೆಗೆ ಸೇರಿರದ ಸುಮಾರು 3000 ರಸ್ತೆ ಸಾರಿಗೆ ಕಾರ್ಮಿಕರು, ಟ್ರಕ್ಕುಗಳ ಮಾಲಕ-ಚಾಲಕರು, ಮುಂತಾದವರು ಅಖಿಲ ಭಾರತ ರಸ್ತೆ ಸಾರಿಗೆ ನೌಕರರ ಒಕ್ಕೂಟದ ಮುತುವರ್ಜಿಯಿಂದ ಹಲವು ರಾಜ್ಯಗಳಿಂದ ಬಂದಿದ್ದರು.

ಅಸಾಮಾನ್ಯ ದೃಢತೆಯ ಪ್ರದರ್ಶನ

ಕಾರ್ಮಿಕರು ಅಸಾಮಾನ್ಯ ದೃಢತೆಯೊಂದಿಗೆ 'ಮಹಾಪಡಾವ್'ನಲ್ಲಿ ಭಾಗವಹಿಸಿದರು. ಏಕೆಂದರೆ ಅವರು ಇಲ್ಲಿಗೆ ಬರಲು ಹಲವಾರು ತೊಂದರೆಗಳನ್ನು ಎದುರಿಸಿಕೊಂಡೇ ಬರಬೇಕಾಯಿತು. ದಿಲ್ಲಿಯ ವಾಯುದೂಷಣೆ ದೇಶಾದ್ಯಂತ ವ್ಯಾಪಕ ಪ್ರಚಾರ ಡಪೆದಿತ್ತು. ದಿಲ್ಲಿ ಒಂದು 'ಗ್ಯಾಸ್ ಚೆಂಬರ್' ಆಗಿ ಬಿಟ್ಟಿದೆ, 'ಸಾರ್ವಜನಿಕ ಆರೋಗ್ಯದ ತುರ್ತು ಪರಿಸ್ಥಿತಿ' ಉಂಟಾಗಿದೆ ಎಂಬ ವರ್ಣನೆ ಹಲವರಲ್ಲಿ , ವಿಶೇಷವಾಗಿ ದಕ್ಷಿಣದ ರಾಜ್ಯಗಳಿಂದ ಬರುವವರಲ್ಲಿ ಭೀತಿ ಉಂಟು ಮಾಡಿತ್ತು. ಜಂತರ್‌ಮಂತರ್‌ನಲ್ಲಿ ಮತಪ್ರದರ್ಶನಗಳ ಮೇಲೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಹಾಕಿರುವ ನಿಷೇಧ 'ಮಹಾಪಡಾವ್' ಗೆ ಅವಕಾಶವನ್ನೇ ಕೊಡುತ್ತಾರೋ ಇಲ್ಲವೋ ಎಂಬ ಪ್ರಶ್ನೆಯನ್ನು ಎತ್ತಿತ್ತು.

ಹಲವು ರೈಲುಗಳು ವಿಪರೀತ ವಿಳಂಬದಿಂದ ಬರುತ್ತಿದ್ದವು, ಕೆಲವಂತೂ ರದ್ದಾದವು. ದೂರದ ಹಳ್ಳಿಗಳಿಂದ ತಮ್ಮ ಹತ್ತಿತರದ ರೈಲ್ವೆ ನಿಲ್ದಾಣಕ್ಕೆ ಬಂದ ಸಾವಿರಾರು ಮಂದಿ, ಮಹಿಳಾ ಕಾರ್ಮಿಕರು ಕೂಡ ತಾವು ದಿಲ್ಲಿಗೆ ಹೋಗಬೇಕಾಗಿದ್ದ ರೈಲು ರದ್ದಾದ್ದರಿಂದ ವಾಪಾಸು ಹೋಗಬೇಕಾಯಿತು. ಸಾವಿರಾರು ಕಾರ್ಮಿಕರು ಹಿಂದಿರುಗಿ ಹೋಗಲು ನಿರಾಕರಿಸಿದರು, ಹೇಗಾದರೂ 'ಮಹಾಪಡಾವ್'ನಲ್ಲಿ ಭಾಗವಹಿಸಲೇಬೇಕು, ಸ್ವಲ್ಪ ಹೊತ್ತಿಗಾದರೂ ಸರಿ ಎಂದು ದೃಢ ಪ್ರಯತ್ನ ನಡೆಸಿದರು. ಮೂರೂ ದಿನಗಳೂ ಸಾವಿರಾರು ಕಾರ್ಮಿಕರು ಧರಣಿ ಇನ್ನೇನು ಆ ದಿನ ಕೊನೆಗೊಳ್ಳಬೇಕು ಎನ್ನುವ ವೇಳೆಗೆ, ಕೆಲವರು ನಂತರ ಕೂಡ ಬಂದು ಸೇರಿಕೊಂಡರು. ಸುಮಾರು ಒಂದು ಸಾವಿರ ಮಹಿಳಾ ಕಾರ್ಮಿಕರು ನವಂಬರ್ 11ರ ರಾತ್ರಿ ದಿಲ್ಲಿ ತಲುಪಿದರು!

ಗೊಂದಲ ಸೃಷ್ಟಿಸುವ ಕುತಂತ್ರಗಳನ್ನೂ ಧಿಕ್ಕರಿಸಿ..

ಇದಲ್ಲದೆ ಕಾರ್ಮಿಕರಲ್ಲಿ ಗೊಂದಲ



ದೇಶದ ಕಾರ್ಮಿಕ ವರ್ಗಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಅಭಿನಂದನೆ –ಕುತಂತ್ರಗಳನ್ನು ವಿಫಲಗೊಳಿಸಿ ಐಕ್ಯ ಹೋರಾಟವನ್ನು ತೀವ್ರಗೊಳಿಸಲು ಕರೆ

ನವಂಬರ್ 9ರಿಂದ 11 ರ ವರೆಗೆ ದೇಶದ ರಾಜಧಾನಿಯಲ್ಲಿ ಸಂಸದ್ ಭವನದ ಬಳಿ ಜಂಟಿ 'ಮಹಾಪಡಾವ್'ನ ಕರೆಗೆ ಅತ್ಯಂತ್ಯ ಉತ್ಸಾಹಪೂರ್ಣ ಸ್ಪಂದನೆ ವ್ಯಕ್ತವಾಗಿದ್ದು ಇದಕ್ಕಾಗಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಭಾರತದ ಕಾರ್ಮಿಕ ವರ್ಗವನ್ನು ಅಭಿನಂದಿಸಿವೆ. ಈ ಮೂರು ದಿನಗಳಲ್ಲಿ ವಿವಿಧ ರಾಜ್ಯಗಳಿಂದ, ವಿವಿಧ ಸಂಘಟನೆಗಳಿಂದ ಬಂದ ಕಾರ್ಮಿಕರು ಪ್ರದರ್ಶಿಸಿದ ಶಿಸ್ತು ಗಮನಾರ್ಹ ಮತ್ತು ಬಹಳ ಮಹತ್ವಪೂರ್ಣ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ಹೇಳಿಕೆ ತಿಳಿಸಿದೆ.

ದೇಶದೆಲ್ಲೆಡೆಗಳಿಂದ ನಮ್ಮ ಆರ್ಥಿಕ ವ್ಯವಸ್ಥೆಯ ಎಲ್ಲ ವಲಯಗಳನ್ನು ಪ್ರತಿನಿಧಿಸಿದ ಲಕ್ಷಾಂತರ ಕಾರ್ಮಿಕರು ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ದೇಶ-ವಿರೋಧಿಯೂ ಅಗಿರುವ ಧೋರಣೆಗಳ ವಿರುದ್ಧ ತಮ್ಮ ತೀವ್ರ ಆಕ್ರೋಶವನ್ನು ಪ್ರದರ್ಶಿಸಿದ್ದಾರೆ. ಕಾರ್ಮಿಕರ ಐಕ್ಯತೆಯನ್ನು ಛಿದ್ರಗೊಳಿಸುವ ಕೋಮುವಾದಿ ಶಕ್ತಿಗಳ ಕುತಂತ್ರಗಳನ್ನೆಲ್ಲ ಬದಿಗೊತ್ತಿ ತಮ್ಮ ಐಕ್ಯ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ತಮ್ಮ ದೃಢನಿರ್ಧಾರವನ್ನೂ ಪ್ರದರ್ಶಿಸಿದ್ದಾರೆ ಎಂದು ಈ ಹೇಳಿಕೆ ವರ್ಣಿಸಿದೆ.

ಬಿಜೆಪಿ ನೇತೃತ್ವದ ಸರಕಾರ ತನ್ನ ಧೋರಣೆಗಳಿಂದಾಗಿ ಕಾರ್ಮಿಕರಿಗೆ ಉಂಟಾಗಿರುವ ಸಂಕಟಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿದೆ, ಅವೇ ವಿನಾಶಕಾರಿ ಧೋರಣೆಗಳನ್ನು ಮುಂದುವರೆಸಲು ಹಟ ತೊಟ್ಟಂತಿದೆ. ಇಂತಹ ಸನ್ನಿವೇಶದಲ್ಲಿ ಈ ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ರಾಷ್ಟ್ರ-ವಿರೋಧಿ ಧೋರಣೆಗಳನ್ನು ಕೈಬಿಡುವಂತೆ ಮಾಡಲು ಹೋರಾಟಗಳನ್ನು ತೀವ್ರಗೊಳಿಸುವುದಲ್ಲದೆ ಅನ್ಯ ಮಾರ್ಗವಿಲ್ಲ ಎಂದಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಹೇಳಿಕೆ ಆಗಸ್ಟ್ 8ರಂದು ನಡೆದ ರಾಷ್ಟ್ರೀಯ ಸಮಾವೇಶ ನೀಡಿದ ಕರೆಯಂತೆ ಮುಷ್ಕರವೂ ಸೇರಿದಂತೆ ಒಂದು ದೀರ್ಘ ಕಾಲದ ಚಳುವಳಿಗೆ ಸಿದ್ಧವಾಗಬೇಕು ಎಂದು ಕಾರ್ಮಿಕರಿಗೆ ಕರೆ ನೀಡಿದೆ. ಸರಕಾರ ತನ್ನ ನಿಲುವನ್ನು ಬದಲಿಸದಿದ್ದರೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಒಂದು ದೇಶವ್ಯಾಪಿ ಅನಿರ್ದಿಷ್ಟ ಕಾಲದ ಮುಷ್ಕರದ ಬಗ್ಗೆಯೂ ಯೋಚಿಸಬೇಕಾಗುತ್ತದೆ ಎಂದು ಎಚ್ಚರಿಸಿವೆ.

ಈ ನಡುವೆ ಐಕ್ಯ ಕಾರ್ಮಿಕ ಆಂದೋಲನದ ಮುಂದಿನ ಘಟ್ಟದಲ್ಲಿ ಚಳುವಳಿಗಳು, ಕಾರ್ಯಾಚರಣೆಗಳು ಮುಂದುವರೆಯುತ್ತವೆ ಎಂದಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ಹೇಳಿಕೆ ಮುಂಬರುವ ತಿಂಗಳುಗಳಲ್ಲಿ ಈ ಕೆಳಗಿನ ಚಟುವಟಿಕೆಗಳು ನಡೆಯಲಿವೆ ಎಂದಿದೆ:

- ಜನವರಿ 2018ರೊಳಗೆ ಜಿಲ್ಲಾ ಮಟ್ಟದ ಜಂಟಿ ಸಮಾವೇಶಗಳು
- ಜನವರಿ ತಿಂಗಳ ಕೊನೆಯಲ್ಲಿ ಒಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಜಿಲ್ಲಾ ಮಟ್ಟದ ಸತ್ಯಾಗ್ರಹಗಳು. ದಿನಾಂಕವನ್ನು ರಾಜ್ಯಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಸಭೆಯಲ್ಲಿ ನಿರ್ಧರಿಸಲಾಗುವುದು.
- ಸರಕಾರ ಖಾಸಗೀಕರಣದ ನಿರ್ಣಯ ಕೈಗೊಂಡಾಗಲೆಲ್ಲ ಸಂಬಂಧಪಟ್ಟ ಕ್ಷೇತ್ರ/ಉದ್ದಿಮೆಯಲ್ಲಿ ಐಕ್ಯ ಮುಷ್ಕರ
- ಕೇಂದ್ರ ಬಜೆಟಿನಲ್ಲಿ ಕಾರ್ಮಿಕ-ವಿರೋಧಿ ಕ್ರಮಗಳಿದ್ದರೆ ಬಜೆಟ್ ಮಂಡಿಸಿದ ದಿನವೇ ಪ್ರತಿಭಟನಾ ಕಾರ್ಯಾಚರಣೆಗಳು
- ಕೇಂದ್ರ ಬಜೆಟ್ ಮಂಡಿಸಿದ ನಂತರ, ಕೂಡಲೇ ಮುಂದಿನ ಕಾರ್ಯಾಚರಣೆಗಳನ್ನು ನಿರ್ಧರಿಸಲು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಸಭೆ.

ಸಂಸತ್ತಿನ ಬಳಿ ಮೂರು ದಿನಗಳ ಚಾರಿತ್ರಿಕ 'ಮಹಾಪಡಾವ್"





ಪ್ರಧಾನಿಗಳ ಮಾದರಿ ರಾಜ್ಯ ಗುಜರಾತಿನ ಅಹಮದಾಬಾದಿನಿಂದ ಬಂದ ಅಂಗನವಾಡಿ ಕಾರ್ಯಕರ್ತೆಯರು. "ನಾವು ಹಸಿದುಕೊಂಡಿದ್ದು ಬೇರೆಯವರ ಮಕ್ಕಳ ಪಾಲನೆ ಮಾಡುತ್ತೇವೆ" ಎನ್ನುತ್ತಾರೆ. ಸೀನಿಯಾರಿಟಿ ಇಲ್ಲ, ಸಂಬಳ ಶ್ರೇಣಿ ಇಲ್ಲ, ಸಾಮಾಜಿಕ ಭದ್ರತೆ ಇಲ್ಲವೇ ಇಲ್ಲ. ಪೆನ್ಶನ್ ವಂಚಿಸುವ ಭ್ರಷ್ಟಾಚಾರ ಧಂಡಿಯಾಗಿ ಇದೆ ಎನ್ನುತ್ತಾರೆ.



ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ಬೇಯಿಸಿ ಕೊಡುವವರು. ಇಂತಹ ಮಹತ್ವದ ಕೆಲಸಕ್ಕೆ ತಿಂಗಳಿಗೆ 1000ರೂ. ಸಂಬಳ. ತಮ್ಮ ಪರಿಸ್ಥಿತಿಯತ್ತ ಮೋದಿ ಸರಕಾರದ ಗಮನ ಸೆಳೆಯಲು ಬಂದಿದ್ದರು.

ಉಂಟುಮಾಡುವ ಪ್ರಯತ್ನಗಳೂ ನಡೆದವು. ಸೆಪ್ಟಂಬರ್ 2, 2015ರ ಬಿಜೆಪಿ ನೇತೃತ್ವದ ಮೋದಿ ಸರಕಾರ ಬಂದ ನಂತರ ನಡೆದ ಮೊದಲ ಸಾರ್ವತ್ರಿಕ ಮುಷ್ಕರದ ವೇಳೆಗೆ, ಸರಕಾರ ಕಾರ್ಮಿಕರ ಬೇಡಿಕೆಗಳ ಬಗ್ಗೆ ಸಕಾರಾತ್ಮಕ ನಿಲುವು ಹೊಂದಿದೆ ಎಂದು ಸರ್ಟಿಫಿಕೇಟ್ ಕೊಡುತ್ತ ಜಂಟಿ ಕಾರ್ಮಿಕ ಆಂದೋಲನಕ್ಕೆ ಕೈಕೊಟ್ಟ ಬಿಎಂಎಸ್ ಕೂಡ ಈ ನವಂಬರ್ 17ರಂದು ದಿಲ್ಲಿಯಲ್ಲಿ ಒಂದು ರ್‍ಯಾಲಿಗೆ ಕರೆ ನೀಡಿತ್ತು. 'ಮಹಾಪಡಾವ್' ರದ್ದಾಗಿದೆ ಎಂಬ ಸುಳ್ಳು ಸುದ್ದಿಯನ್ನು ಹರಡಿಸಲಾಯಿತು.

ಕಳೆದ ಎರಡು ವರ್ಷಗಳಿಂದ ಕಾರ್ಮಿಕ ಸಂಘಗಳ 12 ಅಂಶಗಳ ಬೇಡಿಕೆಗಳನ್ನು ಉಪೇಕ್ಷಿಸುತ್ತಲೇ ಬಂದಿರುವ ಸರಕಾರ ನವಂಬರ್ 3ರಂದು ಸಭೆ ಕರೆಯಿತು. ಇದನ್ನು ಕರೆದದ್ದು 48 ಗಂಟೆಗಳ ನೋಟೀಸೂ ಇಲ್ಲದೆ. ಅದಕ್ಕೆ ಜಂಟಿ ಕಾರ್ಮಿಕ ಚಳುವಳಿಯ ಒಂದು ಪ್ರಮುಖ ಘಟಕವಾದ ಐಎನ್‌ಟಿಯುಸಿ ಯನ್ನು ಕರೆಯಲಿಲ್ಲ. ಕಾರ್ಮಿಕ ಸಂಘಗಳು ಇದನ್ನು ಪ್ರತಿಭಟಿಸಿ, ಐಎನ್‌ಟಿಯುಸಿಯನ್ನು ಆಹ್ವಾನಿಸದಿದ್ದರೆ ಸಭೆಗೆ ಹಾಜರಾಗುವುದಿಲ್ಲ ಎಂದು ಹೇಳಿದ ಮೇಲೆ ಸರಕಾರ ಇನ್ನೊಂದು ಸಭೆ ಕರೆಯಿತು. ಆದರೆ ಆಗಲೂ ಅದೇ ದಿನ ಇತರ ಮೂರು ಕೇಂದ್ರೀಯ ಕಾರ್ಮಿಕ ಸಂಘಟನೆಗಳನ್ನು ಮುಂಬೈಯಲ್ಲಿ ಸಂಸತ್ತಿನ ಕಾರ್ಮಿಕ ಸ್ಥಾಯೀ ಸಮಿತಿ ಎದುರು ತಮ್ಮ ನಿಲುವನ್ನು ಸಲ್ಲಿಸಲು ಹೇಳಲಾಗಿತ್ತು. ಕಾರ್ಮಿಕ ಸಂಘಟನೆಗಳು ಕಾರ್ಮಿಕ ಮಂತ್ರಾಲಯದ ಇಂತಹ ಅಸಡ್ಡೆಯ ನಿಲುವನ್ನು ಪ್ರತಿಭಟಿಸಿದ ನಂತರ ಕೊನೆಗೆ ನವಂಬರ್ 7ರ ಸಂಜೆ ಸಭೆಯನ್ನು ನಿಗದಿ ಮಾಡಿತು. ಆದರೆ ಆ ಸಭೆಯಲ್ಲೂ ಹೇಳಲು ಸರಕಾರದ ಬಳಿ ಏನೂ ಇರಲಿಲ್ಲ. ಕಾರ್ಮಿಕ ಸಂಘಟನೆಗಳು ತಮ್ಮ ಕಾರ್ಯಕ್ರಮದಂತೆ ಮುಂದುವರೆಯಲು ನಿರ್ಧರಿಸಿದವು.

ಕಾರ್ಮಿಕರು ಇಂತಹ ಗೊಂದಲ ಸೃಷ್ಟಿಸುವ, ವಿಭಜಿಸುವ, ಐಕ್ಯತೆಯನ್ನು ಮುರಿಯುವ ಎಲ್ಲ

ಪುಟ 10 ನೋಡಿ

ಸಂಪತ್ತು ಸೃಷ್ಟಿಸುವ ಕಾರ್ಮಿಕರ ಉಪೇಕ್ಷೆ, ದೊಡ್ಡ ಉದ್ಯಮಿಗಳು, ವಿದೇಶಿ ಬಂಡವಾಳಕ್ಕೆ ಬಕ್ಷೀಸು ಜನಾದೇಶಕ್ಕೆ ಬಗೆವ ವಿಶ್ವಾಸಘಾತ: ಪ್ರಧಾನಿಗಳಿಗೆ 50 ಪ್ರತಿಷ್ಠಿತರ ಬಹಿರಂಗ ಪತ್ರ

ಕಾರ್ಮಿಕ ಸಂಘಗಳ ಮಹಾಧರಣಿಯ ಕೊನೆಯ ದಿನವಾದ ನವಂಬರ್11ರಂದು ದೇಶದ ಐವತ್ತಕ್ಕೂ ಹೆಚ್ಚು ಪ್ರತಿಷ್ಠಿತ ನಾಗರಿಕರು–ಕಲಾವಿದರು, ಸಾಹಿತಿಗಳು, ಪ್ರಾಧ್ಯಾಪಕರುಗಳು ಮತ್ತು ಸಾಮಾಜಿಕ ವಲಯದಲ್ಲಿನ ಪ್ರತಿಷ್ಠಿತರು ಪ್ರಧಾನ ಮಂತ್ರಿಗಳಿಗೆ ಒಂದು ಬಹಿರಂಗ ಪತ್ರ ಬರೆದು ನಮ್ಮ ಆರ್ಥಿಕವ ವ್ಯವಸ್ಥೆಯ ಬೆನೆಲುಬಾದ ಮತ್ತು ಸಂಪತ್ತಿನ ಪ್ರಾಥಮಿಕ ಸೃಷ್ಟಿಕರ್ತರಾದ ಕಾರ್ಮಿಕರನ್ನು ಸತತವಾಗಿ ಉಪೇಕ್ಷಿಸಿ ಅಂಚಿಗೆ ತಳ್ಳುತ್ತಿರುವುದು ಸಾರ್ವಜನಿಕ ಜನಾದೇಶಕ್ಕೆ ಬಗೆವ ವಿಶ್ವಾಸಘಾತವಾಗುತ್ತದೆ, ಆದ್ದರಿಂದ ತಕ್ಷಣವೇ ಕಾರ್ಮಿಕರು ಎತ್ತಿರುವ ಪ್ರಶ್ನೆಗಳತ್ತ ಗಮನ ಹರಿಸಬೇಕು ಎಂದು ಆಗ್ರಹಿಸಿದ್ದಾರೆ. ಪತ್ರದ ಒಕ್ಕಣಿಕೆ ಹೀಗಿದೆ:

> "ಈ ಕೆಳಗೆ ಸಹಿ ಹಾಕಿರುವ ಕಾಳಜಿ ಹೊಂದಿರುವ ನಾಗರಿಕರು 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಕಾರ್ಮಿಕರ ಮತ್ತು ನೌಕರರ ವಿವಿಧ ಅಖಿಲ ಭಾರತ ಒಕ್ಕೂಟಗಳು ಎತ್ತಿರುವ ಕಾರ್ಮಿಕರ ಬೇಡಿಕೆಗಳ ಕಡೆಗೆ ತಕ್ಷಣವೇ ಗಮನ ನೀಡಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಆಗ್ರಹಿಸುತ್ತೇವೆ. ಕಾರ್ಮಿಕರು ಹಲವು ವರ್ಷಗಳಿಂದ ಉತ್ತಮ ಸಂಬಳಗಳು ಮತ್ತು ಸಾಮಾಜಿಕ ಭದ್ರತೆಗಳು, ಒಂದು ಸಾರ್ವತ್ರಿಕ ಪಡಿತರ ವ್ಯವಸ್ಥೆ, ಕಾಂಟ್ರಾಕ್ಟ್ ದುಡಿಮೆಯ ವ್ಯವಸ್ಥೆಯನ್ನು ಕೊನೆಗೊಳಿಸಬೇಕು, ಬೆಲೆಯೇರಿಕೆಯ ಮೇಲೆ ಹತೋಟಿ ಹಾಕಬೇಕು, ಖಾಸಗೀಕರಣ, ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವುದು ಮುಂತಾದ ಜನಗಳ ಹಿತಾಸಕ್ತಿಗಳಿಗೆ ಮಾರಕವಾದ ವಿವಿಧ ಧೋರಣೆಗಳನ್ನು ಕೊನೆಗೊಳಿಸಬೇಕು ಎಂಬ ಬೇಡಿಕೆಗಳನ್ನು ಎತ್ತಿಕೊಂಡು ಬಂದಿದ್ದಾರೆ. ಜೀವನ ಮಟ್ಟಗಳು ಪತನಗೊಂಡಿವೆ, ಉದ್ಯೋಗಹೀನತೆ ಮತ್ತು ಉದ್ಯೋಗದ ಅಭದ್ರತೆ ಹೆಚ್ಚಿದೆ, ಮತ್ತು ನಿಮ್ಮ ಸರಕಾರದ ಧೋರಣೆಗಳು ದೇಶದ ಸ್ವಾವಲಂಬನೆಗೆ ಬೆದರಿಕೆಯೊಡ್ಡಿವೆ.
>
> ಕಾರ್ಮಿಕರು ನಮ್ಮ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬು ಮತ್ತು ಸಂಪತ್ತಿನ ಪ್ರಾಥಮಿಕ ಸೃಷ್ಟಿಕರ್ತರು. ಅವರನ್ನು ಉಪೇಕ್ಷಿಸುತ್ತಲೇ ಇರುವುದು ಮತ್ತು ಅಂಚಿಗೆ ತಳ್ಳುತ್ತಲೇ ಇರುವುದು, ಹಾಗೂ ಅದೇ ವೇಳೆಯಲ್ಲಿ ತಮ್ಮ ಸರಕಾರದಿಂದ ದೊಡ್ಡ ಉದ್ಯಮಿಗಳು ಮತ್ತು ವಿದೇಶೀ ಬಂಡವಾಳ ಧಾರಾಳವಾಗಿ ಉಡುಗೊರೆಗಳನ್ನು ಪಡೆಯುತ್ತಿರುವುದು ತಮಗೆ ಕೊಟ್ಟಿರುವ ಸಾರ್ವಜನಿಕ ಜನಾದೇಶಕ್ಕೆ ಬಗೆವ ವಿಶ್ವಾಸಘಾತವಾಗುತ್ತದೆ,"

ಈ ಬಹಿರಂಗ ಪತ್ರಕ್ಕೆ ಈ ವರ್ಷದ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಕೃಷಾ ಸೋಬ್ತಿ, ಕೆ.ಸಚ್ಚಿದಾನಂದನ್, ಗೀತಾಹರಿಹರನ್ ಮುಂತಾದ ಸಾಹಿತಿಗಳು, ಮಲ್ಲಿಕಾ ಸಾರಾಭಾಯಿ ರವರಂತಹ ಕಲಾವಿದರು, ಸಫಾಯಿ ಕರ್ಮಚಾರಿ ಆಂದೋಲನದ ಪ್ರತಿಷ್ಠಿತ ಮುಖಂಡ ಬೆಜ್ವಾಡ ವಿಲ್ಸನ್, ನಿವೃತ್ತ ಹಣಕಾಸು ಕಾರ್ಯದರ್ಶಿ ಎಸ್ ಪಿ ಶುಕ್ಲ, ದಿಲ್ಲಿ ವಿವಿಯ ನಿವೃತ್ತ ಪ್ರಾಧ್ಯಾಪಕ ಅಚಿನ್ ವನೈಕ್, ಜವಹರಲಾಲ್ ನೆಹರು ವಿವಿಯ ಪ್ರಾಧ್ಯಾಪಕರುಗಳಾದ ಜಯತಿ ಘೋಷ್, ಸಿ ಪಿ ಚಂದ್ರಶೇಖರ್ ಮತ್ತು ಆಯೆಷಾ ಕಿಡ್ವಯ್, ಚಲನಚಿತ್ರ ನಿರ್ದೇಶಕ ಮುಕುಲ್ ರಾಯ್, ವಿಜ್ಞಾನಿ ಸತ್ಯಜಿತ್ ರಾಥ್ ಮತ್ತಿತರ 50 ಪ್ರತಿಷ್ಠಿತ ನಾಗರಿಕರು ಸಹಿ ಹಾಕಿದ್ದಾರೆ.



ತೆಲಂಗಾಣದ ಮಹಬೂಬ್‌ನಗರದಿಂದ ಬಂದ ಆಶಾ ಕಾರ್ಯಕರ್ತೆಯರು. ಇಡೀ ಹಳ್ಳಿಯ ಆರೋಗ್ಯ ವಿವರಗಳನ್ನು ಇಡುತ್ತವೆ, ದಿನವಿಡೀ ವರ್ಷವಿಡೀ ಕೆಲಸ ಮಾಡುತ್ತಿರುತ್ತೇವೆ, ಆದರೆ ಖಾಯಮಾತಿ ಏಕಿಲ್ಲ, ಕನಿಷ್ಟ ಸಂಬಳ ಏಕಿಲ್ಲ ಎಂದು ಪ್ರಶ್ನಿಸುತ್ತಾರೆ.



ಒಡಿಶಾದಿಂದ ಬಂದ ಕಾಂಟ್ರಾಕ್ಟ್ ಕಾರ್ಮಿಕರು–15ವರ್ಷಗಳ ಹಿಂದೆ ತಿಂಗಳಿಗೆ 300ರೂ. ಪಡೆಯುತ್ತಿದ್ದರು, ಇಗ 1000ರೂ.! ಮೋದಿಯವರ 10,000ರೂ. ಆಶ್ವಾಸನೆ ಏನಾಯ್ತು ಎಂದು ಕೇಳಲು ಬಂದಿದ್ದರು.



ಹರ್ಯಾಣದ ಹಿಸ್ಸಾರ್‌ನಿಂದ ಬಂದ ಸಫಾಯಿ ಕರ್ಮಚಾರಿಗಳು. ಪಡೆಯುವ ತಿಂಗಳ 10000ರೂ. ಗೆ ಮೇಲ್ಜಾತಿ ಪಂಚಾಯತ್ ಸದಸ್ಯರ ಮನೆಗಳ ಸ್ವಚ್ಛತೆಯ ಕೆಲಸವನ್ನೂ ಮಾಡಬೇಕು. ಕನಿಷ್ಟ ಕೂಲಿ 18,000 ರೂ. ಕೇಳುತ್ತಿದ್ದಾರೆ.



ದಿಲ್ಲಿಯ ಬಳಿಯ ನೋಯ್ಡದಲ್ಲಿ ಇಂಡಿಯನ್ ಆಯಿಲ್ ನಲ್ಲಿ ಕಾಂಟ್ರಾಕ್ಟ್ ಕಾರ್ಮಿಕರು. ಅವರಿಗೆ ಸಿಗುತ್ತಿರುವುದು 500ರೂ. ದಿನಗೂಲಿ. ಇವರೂ ಕನಿಷ್ಟ ಕೂಲಿ 18,000ರೂ. ಸಿಗಲೇಬೇಕು ಎನ್ನುತ್ತಾರೆ





ದಾಮೋದರ್ ವ್ಯಾಲಿ ಕಾರ್ಪೊರೇಶನ್‌ನ ಧೀರ ಕಾರ್ಮಿಕರು–ಝರ್ಖಂಡ್ ಮತ್ತು ಕೇಂದ್ರದ ಬಿಜೆಪಿ ಸರಕಾರಗಳಿಂದ ಕಲ್ಲಿದ್ದಲು ನಿರಾಕರಣೆಯಿಂದ ಸಂಕಷ್ಟಕ್ಕೀಡಾಗಿರುವ ಘಟಕವನ್ನು ಉಳಿಸಲು ಹೋರಾಡುತ್ತಿರುವವರು.



ಈ ಬೀಡಿ ಕಾರ್ಮಿಕರ ಬದುಕನ್ನು ಜಿಎಸ್‌ಟಿ ಧ್ವಂಸಗೊಳಿಸಿದೆ. ಮಹಾಪಡಾವ್‌ನಲ್ಲಿ ಇವರು ಮತ್ತು ಜಿಎಸ್‌ಟಿ ಮತ್ತು ನೋಟು ರದ್ದತಿ ಅಪಾರವಾಗಿ ತಟ್ಟಿದ ಇನ್ನೊಂದೆ ಉದ್ದಿಮೆಯಾದ ಜರಿ ವಲಯದ ಕೆಲಸಗಾರರು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು.

ಮೋದಿ ಸರಕಾರದ ರಾಷ್ಟ್ರ–ವಿರೋಧಿ ಧೋರಣೆಗಳನ್ನು ಹಿಮ್ಮೆಟ್ಟಿಸಲು ತೀವ್ರತರ ಹೋರಾಟಕ್ಕೆ ಸಿದ್ಧಗೊಳಿಸಿರುವ ಬೃಹತ್ ಕಾರ್ಮಿಕ ಕಾರ್ಯಾಚರಣೆ



ಪುಟ 9 ರಿಂದ

ಕುತಂತ್ರಗಳನ್ನು ವಿಫಲಗೊಳಿಸಿ ದೊಡ್ಡ ಸಂಖ್ಯೆಯಲ್ಲಿ ಮಹಾಧರಣಿಯಲ್ಲಿ ಭಾಗವಹಿಸಿದರು.

ಕಾರ್ಮಿಕರಿಂದ ಆದರ್ಶಪ್ರಾಯ ಶಿಸ್ತಿನ ಪ್ರದರ್ಶನ ಮತ್ತು ಕಾರ್ಪೊರೇಟ್ ಮಾಧ್ಯಮಗಳ 'ಬ್ಲಾಕೌಟ್' ತಂತ್ರದ ಪ್ರದರ್ಶನ

ಈ ಮೂರೂ ದಿನಗಳಲ್ಲಿ ವಿವಿಧ ಸಂಘಟನೆಗಳಿಗೆ, ವಿವಿಧ ರಾಜ್ಯಗಳಿಗೆ ಸೇರಿರುವ ಕಾರ್ಮಿಕರು ಪ್ರದರ್ಶಿಸಿದ ಶಿಸ್ತು ಅತ್ಯಂತ ಆದರ್ಶಪ್ರಾಯವಾಗಿತ್ತು. ಪ್ರತಿದಿನ ಮೂರು ಅಧಿವೇಶನಗಳಲ್ಲಿ 30ಕ್ಕೂ ಹೆಚ್ಚು ಭಾಷಣಕಾರರ ಭಾಷಣಗಳು ನಡೆದವು. ಹೆಚ್ಚಿನ ಕಾರ್ಮಿಕರು ತಪ್ಪದೇ ಕುಳಿತು ಅತ್ಯಂತ ಆಸಕ್ತಿಯಿಂದ ಅವನ್ನೆಲ್ಲ ಕೇಳಿದರು. ಹೋರಾಟವನ್ನು ತೀವ್ರಗೊಳಿಸಬೇಕೆಂಬ ಕರೆ ನೀಡಿದಾಗಲೆಲ್ಲ ಅತ್ಯಂತ ಉತ್ಸಾಹದಿಂದ ದನಿಗೂಡಿಸಿದರು.

ಆದರೆ ಇವು ಯಾವವೂ ಕಾರ್ಪೊರೇಟ್ ಮಾಧ್ಯಮಗಳಿಗೆ ಗಮನಾರ್ಹ ಎಂದನಿಸಲೇ ಇಲ್ಲ. ಕಾರ್ಪೊರೇಟ್ ನಿಯಂತ್ರಣದ ಮುದ್ರಣ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳು ಈ ಮಹಾಧರಣಿಯನ್ನು, ನಮ್ಮ ದೇಶದ ಆರ್ಥಿಕದ ಬೆನ್ನೆಲುಬಾದ ಕಾರ್ಮಿಕರ ಬೇಡಿಕೆಗಳನ್ನು 'ಬ್ಲಾಕ್ಔಟ್' ಮಾಡಿದವು. ಅವು ತೋರಿಸಿದ್ದು ಬಡ ಬೀದಿ ಮಾರಾಟಗಾರರಿಗೆ ಒಳ್ಳೆ ವ್ಯಾಪಾರ ಆಯ್ತು, ಸಾರ್ವಜನಿಕ ಶೌಚಾಲಯಗಳ ಮುಂದೆ ಕಾರ್ಮಿಕರು ಸಾಲುಗಟ್ಟಿ ನಿಲ್ಲಬೇಕಾಯಿತು ಎಂಬುದನ್ನು ಮಾತ್ರ.

ಆದರೆ ಸಾಮಾಜಿಕ ಮಾಧ್ಯಮಗಳಲ್ಲಿ, ಕೆಲವು ಜನಪರ ವಾಹಿನಿಗಳಲ್ಲಿ 'ಮಹಾಪಡಾವ್' ಮತ್ತು ಕಾರ್ಮಿಕರ ಬೇಡಿಕೆಗಳು ಪ್ರಚಾರ ಪಡೆದವು. ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವ ಹಲವು ತಂಡಗಳು ಕಾರ್ಮಿಕರನ್ನು, ಕಾರ್ಮಿಕ ಮುಖಂಡರನ್ನು ಸಂದರ್ಶಿಸಿ ಅವನ್ನು ಪ್ರಸಾರ ಮಾಡಿದವು.

ರಾಷ್ಟ್ರೀಯ–ಅಂತರ್ರಾಷ್ಟ್ರೀಯ ಸೌಹಾರ್ದ

ಕಾರ್ಮಿಕರ ಈ ಹೋರಾಟ ಮತ್ತು ಬೇಡಿಕೆಗಳು ದೇಶದ ಒಳಗೂ, ಮತ್ತು ಹೊರಗೂ ವಿವಿಧ ಸಂಘಟನೆಗಳ ಭಾರೀ ಬೆಂಬಲವನ್ನು ಕೂಡ ಗಳಿಸಿದವು. ಕಾರ್ಮಿಕರ ಎರಡು ಪ್ರಮುಖ ಅಂತರ್ರಾಷ್ಟ್ರೀಯ ಸಂಘಟನೆಗಳಾದ ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ(ಡಬ್ಲ್ಯು ಎಫ್‌ಟಿಯು) ಮತ್ತು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಗಳ ಮಹಾ ಒಕ್ಕೂಟ(ಐಟಿಯುಸಿ) ಸೌಹಾರ್ದ ಸಂದೇಶಗಳನ್ನು ಕಳಿಸಿದವು. ಗ್ರೀಸ್, ನೇಪಾಳ ಮುಂತಾದ ದೇಶಗಳ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳೂ ಸೌಹಾರ್ದ ವ್ಯಕ್ತಪಡಿಸಿದವು. 100ಕ್ಕೂ ಹೆಚ್ಚು ರೈತ ಸಂಘಟನೆಗಳನ್ನು ಒಳಗೊಂಡ ಜಂಟಿ ವೇದಿಕೆ, ಹಲವು ಮಹಿಳಾ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದವು. 50 ಪ್ರತಿಷ್ಠಿತ ವ್ಯಕ್ತಿಗಳು– ಲೇಖಕರು, ವಿವಿ ಪ್ರಾಧ್ಯಾಪಕರು, ವಿಜ್ಞಾನಿಗಳು, ಸಂಶೋಧಕರು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು – ಕಾರ್ಮಿಕರು ಎತ್ತಿರುವ ಪ್ರಶ್ನೆಗಳನ್ನು ತಕ್ಷಣವೇ ಪರಿಶೀಲಿಸಬೇಕೆಂದು ಪ್ರಧಾನ ಮಂತ್ರಿಗಳನ್ನು ಆಗ್ರಹಿಸುವ ಪತ್ರಕ್ಕೆ ಸಹಿ ಹಾಕಿದರು. ಇನ್ನೂ ಇಂತಹ ಹಲವಾರು ರೀತಿಯ ಬೆಂಬಲ ಕಾರ್ಮಿಕರ ಹೋರಾಟಕ್ಕೆ ವ್ಯಕ್ತವಾದವು.

ಸಮಾರೋಪ ಅಧಿವೇಶನದಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿದಂತೆ, ದೊಡ್ಡ ದೇಶಿ ಮತ್ತು ವಿದೇಶಿ ಕಾರ್ಪೊರೇಟ್‌ಗಳಿಗೆ ಪ್ರಯೋಜನಕಾರಿಯಾದಂತ, ಅವರ ಮರ್ಜಿಯಂತೆಯೇ ಜಾರಿಗೊಳಿಸುತ್ತಿರುವ ನವ–ಉದಾರವಾದಿ ಧೋರಣೆಗಳ ವಿರುದ್ಧ ಹೋರಾಟವನ್ನು ಕಾರ್ಪೊರೇಟ್ ಮಾಧ್ಯಮಗಳು ಬೆಂಬಲಿಸುತ್ತವೆ ಎಂದೇನೂ ಕಾರ್ಮಿಕ ವರ್ಗ ನಿರೀಕ್ಷಿಸಲು ಸಾಧ್ಯವಿಲ್ಲ. ದೇಶದ ನಗರಗಳಿಂದ, ಪಟ್ಟಣಗಳಿಂದ ಮಾತ್ರವಲ್ಲ, ಮೂಲೆ–ಮೂಲೆಗಳಿಂದ ಬಂದ ಲಕ್ಷಾಂತರ ಕಾರ್ಮಿಕರು 'ಮಹಾಪಡಾವ್'ನ ಸಂದೇಶವನ್ನು ಎಲ್ಲ ಕಾರ್ಮಿಕರಿಗೆ ಮತ್ತು ಎಲ್ಲ ಶ್ರಮಜೀವಿ ವಿಭಾಗಗಳಿಗೆ ಒಯ್ಯಬೇಕು.

ಈ 'ಮಹಾಪಡಾವ್'ನಲ್ಲಿ ಸಿಐಟಿಯುನ ಉಪಸ್ಥಿತಿ ಬಹಳಷ್ಟು ಎದ್ದು ಕಾಣುತ್ತಿತ್ತು. ಸಿಐಟಿಯು ಕೇಂದ್ರ ಮತ್ತು ರಾಜ್ಯಸಮಿತಿಗಳು ಹಾಗೂ ಕೈಗಾರಿಕಾ ಒಕ್ಕೂಟಗಳು ಪರಿಣಾಮಕಾರಿಯಾಗಿ ಸಿದ್ಧತೆಗಳನ್ನು ನಡೆಸಿದವು. ಆಗಸ್ಟ್ 8ರ ಜಂಟಿ ರಾಷ್ಟ್ರೀಯ ಸಮಾವೇಶದ ನಂತರದ ಮೂರು ತಿಂಗಳುಗಳಲ್ಲಿ ಅದರ ನಿರ್ಣಯಗಳನ್ನು ಕಾರ್ಮಿಕರ ನಡುವೆ "ತಲುಪದಿದ್ದವರನ್ನು ತಲುಪುವ' ಗುರಿಯೊಂದಿಗೆ ಪಸರಿಸಲು ತೀವ್ರ ಪ್ರಚಾರ ನಡೆಸಲು ಬಳಸಿಕೊಳ್ಳಲಾಯಿತು. ಜಂಟಿ ಕರಪತ್ರಗಳು, ಪೋಸ್ಟರುಗಳಲ್ಲದೆ, ಸಿಐಟಿಯು ಸಮಿತಿಗಳು ಲಕ್ಷಾಂತರ ಕಿರು ಪುಸ್ತಕಗಳು, ಕರಪತ್ರಗಳು ಮುಂತಾದವುಗಳನ್ನು ಸ್ಥಳೀಯ ಭಾಷೆಗಳಲ್ಲಿ ಪ್ರಕಟಿಸಿದವು. ಇವಲ್ಲದೆ ವಿವಿಧ ವಲಯಗಳ ಸಿಐಟಿಯು ಸಂಘಟನೆಗಳು ತಮ್ಮ ವಲಯದಲ್ಲಿನ ನಿರ್ದಿಷ್ಟ ಪ್ರಶ್ನೆಗಳು ಮತ್ತು ಕೇಂದ್ರದಲ್ಲಿನ ಬಿಜೆಪಿ ಸರಕಾರವಾಗಲೀ, ಕಾಂಗ್ರೆಸ್ ಸರಕಾರವಾಗಲಿ ಅನುಸರಿಸಿಕೊಂಡು ಬರುತ್ತಿರುವ ನವ–ಉದಾರವಾದಿ ಧೋರಣೆಗಳ ನಡುವಿನ ನೇರ ಕೊಂಡಿಯನ್ನು ವಿವರಿಸುವ ಕಿರುಪುಸ್ತಕಗಳು, ಕರಪತ್ರಗಳನ್ನು ಪ್ರಕಟಿಸಿದವು. ದೇಶಾದ್ಯಂತ ನಡೆಸಿದ ಜಾತಾಗಳು, ಸಾರ್ವಜನಿಕ ಸಭೆಗಳು, ಗೇಟ್ ಮೀಟಿಂಗ್‌ಗಳು, ರಸ್ತೆ ಮೂಲೆ ಸಭೆಗಳು, ಮೊಹಲ್ಲಾ ಸಭೆಗಳು ಮುಂತಾದವುಗಳಲ್ಲಿ ಲಕ್ಷಾಂತರ ಕಾರ್ಮಿಕರು ಭಾಗವಹಿಸಿದರು.

ತೀವ್ರ ಹೋರಾಟಕ್ಕೆ ಕಾರ್ಮಿಕರು ಸಿದ್ಧ

ಮೂರು ದಿನಗಳ 'ಮಹಾಪಡಾವ್' ಒಂದು ವಿಷಯವನ್ನು ದೃಢಪಡಿಸಿತು. ಅದೇಂದರೆ, ಸರಕಾರ ಅನುಸರಿಸುತ್ತಿರುವ ಧೋರಣೆಗಳ ವಿರುದ್ಧ ಅಸಂತೃಪ್ತಿ ಕಾರ್ಮಿಕ ವರ್ಗದ ಎಲ್ಲ ವಿಭಾಗಗಳಲ್ಲಿ–ಅಸಂಘಟಿತ, ಸಂಘಟಿತ, ಸಾರ್ವಜನಿಕ ವಲಯ, ಖಾಸಗೀ ವಲಯದ ಕಾರ್ಮಿಕರು, ಸ್ಕೀಮ್ ಕಾರ್ಮಿಕರು, ಕಾಂಟ್ರಾಕ್ಟ್ ಕಾರ್ಮಿಕರು ಮತ್ತೆಲ್ಲ ವಿಭಾಗಗಳಲ್ಲಿ ಹೆಚ್ಚುತ್ತಿದೆ. ಬಿಜೆಪಿಗೆ ಮತನೀಡಿದ ಮಧ್ಯಮ ವರ್ಗದ ನೌಕರರಲ್ಲಿಯೂ ಸರಕಾರದ ಧೋರಣೆಗಳಿಂದ ಭ್ರಮನಿರಸನವಾಗುತ್ತಿದೆ. ಕಾರ್ಮಿಕರು ಹೋರಾಟ ನಡೆಸಲು ಸಿದ್ಧವಾಗಿದ್ದಾರೆ ಎಂಬುದು ಕಂಡು ಬರುತ್ತಿದೆ. ಈಗ ಅವರಲ್ಲಿ ವಿನಾಶಕಾರಿ ನವ–ಉದಾರವಾದಿ ಧೋರಣೆಗಳಿಗೆ ಪರ್ಯಾಯ ಇದೆ ಎಂಬುದರ ಅರಿವನ್ನು ಮೂಡಿಸಬೇಕಾಗಿದೆಯಷ್ಟೇ. ಇಂತಹ ಒಂದು ಪರ್ಯಾಯಕ್ಕೆ ಹೋರಾಟದ ನೇತೃತ್ವವನ್ನು ವಹಿಸಬೇಕಾದ್ದು ಕಾರ್ಮಿಕ ವರ್ಗ ಎಂಬ ಜಾಗೃತಿಯನ್ನು ಮೂಡಿಸಬೇಕಾಗಿದೆ; ಅವರಲ್ಲಿ ತಾವು ಇದನ್ನು ತಮ್ಮ ಸಂಘಟಿತ ಶಕ್ತಿಯ ಮೂಲಕ, ಮತ್ತು ರೈತರು, ಕೃಷಿಕೂಲಿಕಾರರು ಮುಮತಾದ ಇತರ ಶ್ರಮಜೀವಿ ವಿಭಾಗಗಳೊಂದಿಗೆ ಒಂದುಗೂಡುವ ಮೂಲಕ ಸಾಧಿಸಬಲ್ಲೆವು ಎಂಬ ವಿಶ್ವಾಸವನ್ನು ಮೂಡಿಸಬೇಕಾಗಿದೆ.

ಇದೀಗ ಸಿಐಟಿಯು ನಂತಹ ವರ್ಗ–ಆಧಾರಿತ ಕಾರ್ಮಿಕ ಸಂಘದ ಮುಂದಿರುವ ಕಾರ್ಯಭಾರ. 'ಮಹಾಪಡಾವ್'ನ ಭವ್ಯ ಯಶಸ್ಸು ಮತ್ತು ಅದರಲ್ಲಿ ಸಿಐಟಿಯುನ ಪಾತ್ರ ಈ ಕಾರ್ಯಭಾರವನ್ನು ಈಡೇರಿಸುವಲ್ಲಿ ಅದರ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ●

ಕಾರ್ಪೊರೇಟ್ ಮಾಧ್ಯಮಗಳ 'ಬ್ಲಾಕೌಟ್' ಏಕೆ?

ದೇಶದ ಮೂಲೆ–ಮೂಲೆಗಳಿಂದ ಸಾವಿರ–ಸಾವಿರ ಸಂಖ್ಯೆಗಳಲ್ಲಿ ದಿಲ್ಲಿಗೆ ಬಂದು ಮೂರು ದಿನಗಳ ಕಾಲ ದೇಶದ ಪ್ರಜಾಪ್ರಭುತ್ವದ ಸಂಕೇತವಾದ ಸಂಸತ್ತಿನ ಬಳಿಯೇ ತಮ್ಮ ಹಕ್ಕುಗಳಿಗಾಗಿ ದನಿ ಎತ್ತಿರುವುದು ದೇಶದ ಮುಖ್ಯಧಾರೆಯ ಟಿವಿ ಚಾನೆಲ್‌ಗಳಿಗೆ, ಪತ್ರಿಕೆಗಳಿಗೂ ಕೇಳಲಿಲ್ಲವೇಕೆ? ಲಕ್ಷಾಂತರ ಕಾರ್ಮಿಕರ ಆಕ್ರೋಶ ಕಾಣಲಿಲ್ಲವೇಕೆ?

ವೆಬ್ ಪತ್ರಿಕೆ ನ್ಯೂಸ್‌ಕ್ಲಿಕ್.ಇನ್ ಮೂರು ದಿನಗಳ ಕಾಲ ಪ್ರಸಾರ ಮಾಡಿದ ವೀಡಿಯೋಗಳನ್ನು ನೋಡಿದವರಿಗೆ ಇದಕ್ಕೆ ಮೂರು ಕಾರಣಗಳು ಕಾಣುತ್ತವೆ ಎಂದು ಇನ್ನೊಂದು ವೆಬ್ ಪತ್ರಿಕೆ ದಿಸಿಟಿಝನ್.ಇನ್ ನ ಸಂಪಾದಕೀಯ ಬ್ಯುರೊ ಅಭಿಪ್ರಾಯ ಪಟ್ಟಿದೆ.

ಮೊದಲನೆಯದಾಗಿ, ಕಾರ್ಪೊರೇಟ್–ರಾಜಕಾರಣಿಗಳ ನಂಟಿಗೆ ಕಾರ್ಮಿಕರು ತಡೆಯಾಗಿದ್ದಾರೆ. ಸಂಘಟಿತ ಕಾರ್ಮಿಕ ಆಂದೋಲನದ ಬಗ್ಗೆ ಸದಾ ಸಂದೇಹ ಮತ್ತು ಭೀತಿ ಹೊಂದಿರುವ ಈ ಮಂದಿಗೆ ಇದರಲ್ಲಿ ಎಡಪಕ್ಷಗಳ ಪಾತ್ರ ಇನ್ನಷ್ಟು ಭೀತಿ ಉಂಟು ಮಾಡಿದೆ.


ಎರಡನೆಯದಾಗಿ, ಅವರ ಮಟ್ಟಿಗೆ ಕಾರ್ಮಿಕರು ಮಾಲಕ–ವಿರೋಧಿಗಳಷ್ಟೇ. ಅವರ ಬೇಡಿಕೆಗಳು ಉದ್ಯೋಗಪತಿಗಳ ಮೇಲೆ, ಸರಕಾರದ ಮೇಲೆ ಭಾರತದ ಬಡವರಿಗೆ ಅತಿ ಅಗತ್ಯವಾದದ್ದನ್ನು ಕೊಡುವಂತಹ ಒತ್ತಡವನ್ನು ಉಂಟು ಮಾಡುತ್ತವೆ. ಮಾಲಕರಿಗೆ, ಅವರಿಗೆ ಬೇಕಾದಂತೆ ನಡೆಯುವ ಸರಕಾರಕ್ಕೆ ಅಸಮಾಧಾನ ತರುವಂತಹ ಇಂತಹ ಸಂಗತಿಗಳು ಕಸಿವಿಸಿ ಉಂಟು ಮಾಡದಂತೆ ನೋಡಿಕೊಳ್ಳುವುದು ಅವರ ಕರ್ತವ್ಯ ತಾನೇ?

ಮೂರನೆಯದಾಗಿ, ದಿಲ್ಲಿಯಲ್ಲಿ ಮೂರು ದಿನಗಳ ಕಾಲ ಧರಣಿ ನಡೆಸಿದ ಲಕ್ಷಾಂತರ ಕಾರ್ಮಿಕರು, ಅಲ್ಪ ಸಂಬಳಕ್ಕೆ ದುಡಿಯಬೇಕಾದವರು ಅವರ ಟಿಆರ್‌ಪಿಗಳನ್ನು ಹೆಚ್ಚಿಸಬಲ್ಲವರಲ್ಲ, ಅವರ ಜಾಹೀರಾತು ಆದಾಯಗಳನ್ನು ಹೆಚ್ಚಿಸಬಹುದಾದ ಖರೀದಿದಾರರಲ್ಲ.

ಆದರೆ ಇದರಿಂದ ಕಾರ್ಮಿಕರಿಗೇನೂ ಆಶ್ಚರ್ಯವಾಗಿಲ್ಲ. ಕಾರ್ಮಿಕರಿಗೆ ಈಗಂತೂ ಈ ಮಾಧ್ಯಮಗಳಲ್ಲಿ ಅರಚುವವರ ಮೇಲೆ ಎಳ್ಳಷ್ಟೂ ಗೌರವ ಉಳಿದಿಲ್ಲ. "ಅವರು ವರದಿ ಮಾಡುತ್ತಾರೋ ಇಲ್ಲವೋ, ಯಾರಿಗೆ ಬೇಕಾಗಿದೆ, ನಿಮ್ಮ ವರದಿಗಾರರನ್ನು ದೊಡ್ಡವರ ಹಣ ಖರೀದಿ ಮಾಡಿದೆ ತಾನೇ?" ಎಂದೊಬ್ಬ ಆಶಾ ಕಾರ್ಯಕರ್ತೆ ತಿರಸ್ಕಾರದ ನಗೆಯೊಂದಿಗೆ ಹೇಳಿದರಂತೆ.

ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) **ನವಂಬರ್ 11ರಂದು ನೀಡಿದ ಹೇಳಿಕೆಯಲ್ಲಿ ದೇಶದ ರಾಜಧಾನಿಯಲ್ಲಿ ನಡೆದ ಚಾರಿತ್ರಿಕ ಕಾರ್ಮಿಕರ ರ್‍ಯಾಲಿಯನ್ನು ಸುಮಾರಾಗಿ ಮುಚ್ಚಿಯೇ ಹಾಕಿದೆ ಎಂದು ಖಂಡಿಸಿದೆ. ಇದು ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು, ಪತ್ರಿಕಾ ಸೆನ್ಸಾರ್‌ಶಿಪ್‌ಅನ್ನು ನೆನಪಿಸುವಂತದ್ದು ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.**

ಬೀದರ ಜಿಲ್ಲೆಯ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕ ಮುಸ್ತಾಫಾ ಮಹಾಪಡಾವ್ ಹೋರಾಟದಲ್ಲಿ ಪಾಲ್ಗೊಂಡು ಹಿಂದಿರುಗುವಾಗ ಹೃದಯಾಘಾತದಿಂದ ನಿಧನರಾದರು. ಅವರ ಮೃತದೇಹವನ್ನುಲ್ನವಂಬರ್ 15ರಂದು ಬೀದರ ಜಿಲ್ಲೆಯ ಬಾಲ್ಕಿ ತಾಲೂಕಿನ ಡಾಣಪೂರ ಗ್ರಾಮದಲ್ಲಿ ನೂರಾರು ಸಂಬಂಧಿಗಳು,ಗೆಳೆಯರು ಹಾಗೂ ಸಿಐಟಿಯು, ಜನವಾದಿ ಮಹಿಳಾ ಸಂಘಟನೆ, ಸಿಪಿಐ(ಎಂ) ಹಾಗೂ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಒಕ್ಕೂಟ ಮತ್ತು ಬಿಎಸ್‌ಎನ್‌ಎಲ್ ನೌಕರರ ಸಂಘದ 'ನಾಯಕರು ಹಾಗೂ ಕಾರ್ಯಕರ್ತರ ಭಾಷ್ಪಾಂಜಲಿಯೊಂದಿಗೆ ಅಂತ್ಯಕ್ರಿಯೆ ನಡೆಸಲಾಯಿತು. ನಂತರ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್.ವರಲಕ್ಷ್ಮಿ, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಒಕ್ಕೂಟ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ, ಜನವಾದಿ ಮಹಿಳಾ ಸಂಘದ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ, ಬಿಎಸ್‌ಎನ್‌ಎಲ್ ಗುತ್ತಿಗೆ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಶಂಬು ಸಾಗರ್ ಮಾತನಾಡಿ ತಮ್ಮ ಭಾವಪೂರ್ಣ ನಮನ ಸಲ್ಲಿಸಿದರು ಮತ್ತು ಮೃತ ಮುಸ್ತಾಫಾನ ಕುಟುಂಬದ ಜೊತೆಯಲ್ಲಿ ನಾವಿದ್ದೇವೆ ಎಂಬ ಭರವಸೆಯನ್ನು ನೀಡಿದರು. ಅಂತ್ಯಕ್ರಿಯೆ ಯಲ್ಲಿ ಬಿಎಸ್‌ಎನ್‌ಎಲ್ ನೌಕರರ ಸಂಘದ ಜಿಲ್ಲಾಧ್ಯಕ್ಷ ಭೀಮಣ್ಣ ಕಾಂಬ್ಳೆ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಭು ಸಂತೋಷಕರ್,ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಮೀನಾ ಹಾಗೂ ಅಂಬುಜಾಕ್ಷಿ, ರೇಷ್ಮಾ, ಕಟ್ಟಡ ಕಾರ್ಮಿಕ ಸಂಘದ ಕಾರ್ಯದರ್ಶಿ ಬಸವರಾಜ ಮಾಳಗಿ, ಸಿಪಿಐಎಂ ಮುಖಂಡ ಆರ್.ಪಿ.ರಾಜು, ಅಂಗನವಾಡಿ ನೌಕರರ ಸಂಘದ ಮುಖಂಡರಾದ ಆಶಾ ಹಾಗೂ Bsnl ಖಾಯಂ ಖಾಯಂ ಹಾಗೂ ಗುತ್ತಿಗೆ ನೌಕರರು ಭಾಗವಹಿಸಿದ್ದರು. ನಂತರ ಮುಸ್ತಾಫಾ ಮನೆಗೆ ತೆರಳಿ ಅವರ ಪತ್ನಿ, ಮಕ್ಕಳು ಹಾಗೂ ತಂದೆ ತಾಯಿ, ಸಹೋದರರಿಗೆ ಸಾಂತ್ವನ ಹೇಳಲಾಯಿತು.





ಬಿಬಿಎಂಪಿ ಮಳಿಗೆ ಬಾಡಿಗೆ ಒಮ್ಮೆಯೂ ಕಟ್ಟಿಲ್ಲ!

ಲಿಂಗರಾಜು

ಅಗೆದಷ್ಟು ಆಳವಿದೆ ಬಿಬಿಎಂಪಿ ದಗಲುಬಾಜಿತನ. ಕ್ಯಾಂಡಿ ಕ್ರಷ್ ಆಟದಂತೆ ಇದರ ಕೊನೆ ಎಲ್ಲೆಂದು ಹುಡುಕುವುದು ಬಹಳ ಕಷ್ಟ. ಬಿಬಿಎಂಪಿಯಲ್ಲಿ ಹಣ ನಿತ್ಯವೂ ನೀರಿನಂತೆ ಹರಿದಾಡುತ್ತದೆ. ಹೀಗಾಗಿ ಬಿಬಿಎಂಪಿ ಪೋಸ್ಟಿಂಗ್‌ಗಾಗಿ ಅಧಿಕಾರಿಗಳು ಹಪಹಪಿಸುತ್ತಾರೆ. ಇಲ್ಲಿ ಪ್ರತಿದಿನವೂ ಸಂಬಳ! ಗರಿಗರಿ ಗಾಂಧಿ ನೋಟು! ಸಾಮಾನ್ಯವಾಗಿ ಸರ್ಕಾರಿ ನೌಕರರು ರಜಾದಿನಕ್ಕಾಗಿ ಹಾತೊರೆಯುತ್ತಾರೆ ಎಂದು ಕೇಳಿದ್ದೇವೆ. ಆದರೆ ಇಲ್ಲಿ ಮಾತ್ರ ಅದು ಸುಳ್ಳು! ಇಲ್ಲಿನವರು ತಿಂಗಳ 30 ದಿನವೂ ಪೂರ್ಣ ಹಾಜರಾತಿ. ಬಿಬಿಎಂಪಿಯಲ್ಲಿ ಕೆಲಸ ಮಾಡುವವರೊಬ್ಬರು ನನ್ನ ಬಳಿ 'ರಜೆ ಅಂದ್ರೆ ಬೇಜಾರಾಗುತ್ತೆ' ಎಂದಿದ್ದರು! ಬೇಜಾರಾಗುವುದು ಸಿಗುವ ಮಾಮೂಲಿಗೆ ಕಲ್ಲು ಬಿತ್ತಲ್ಲ ಎಂದು! ಕೋಟಿ ಕೊಟ್ಟಾದರೂ ಸೀಟಲ್ಲಿ ಕೂರಬೇಕೆಂದು ಬೆಳ್ಳಂಬೆಳಗ್ಗೆ ಮಂತ್ರಿಗಳ ಮನೆ ಬಾಗಿಲು ಕಾಯುವ ಅಧಿಕಾರಿಗಳಿಗೇನು ಕಮ್ಮಿಯಿಲ್ಲ! ಹಾಗೆಯೇ ರಾಜಕಾರಣಿಗಳು ತಮಗೆ ಬೇಕಾದ, ತಮ್ಮೆಲ್ಲಾ ದಗಲುಬಾಜಿತನಕ್ಕೆ ಜೀ ಹುಜೂರ್ ಎನ್ನುವ ಅಧಿಕಾರಿಗಳನ್ನೇ ಹುಡುಕಿ ಸೀಟಲ್ಲಿ ಕೂರಿಸುವುದು ಇಲ್ಲಿ ರೂಢಿಗತ. ಈ ಪೀಠಿಕೆ ಯಾಕಾಗಿ ಎಂದರೆ, ಕನ್ನಡ ಧಾರಾವಾಹಿಯಂತಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಕ್ರಮಗಳ ಸರಮಾಲೆಯ ಮತ್ತೊಂದು ಅಂಕ ನಿಮಗಾಗಿ ಇಲ್ಲಿದೆ.



ಪ್ರಕರಣವೊಂದರ ಲೆಕ್ಕಾಚಾರ ಹೀಗಿದೆ!

ಬೆಂಗಳೂರು ನಗರದ ಬೊಮ್ಮನಹಳ್ಳಿ ವಲಯ ಬಿಬಿಎಂಪಿ ವಾಣಿಜ್ಯ ಸಂಕೀರ್ಣ (ಕಾಂಪ್ಲೆಕ್ಸ್) 1998ರಲ್ಲಿ ಉದ್ಘಾಟನೆಗೊಂಡು, ತನ್ನ ಆದಾಯಕ್ಕಾಗಿ ಸಂಕೀರ್ಣದಲ್ಲಿ 33 ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡಿತ್ತು. ಇದೇ ವ್ಯಾಪ್ತಿಗೆ ಒಳಪಡುವ ಇಗ್ಗಲೂರಿನಲ್ಲಿ 4 ಮಳಿಗೆ ನಿರ್ಮಾಣ ಮಾಡಲಾಗಿತ್ತು. ಅದರಂತೆ ಒಟ್ಟು 37 ವಾಣಿಜ್ಯ ಮಳಿಗೆಗಳನ್ನು ಖಾಸಗಿಯವರಿಗೆ 20 ವರ್ಷಗಳ ಹಿಂದೆ ಬಾಡಿಗೆ ನೀಡಲಾಗಿತ್ತು. ಅಂದು 1998ರಲ್ಲಿ ಪಿಡಬ್ಲ್ಯುಡಿ ದರದಂತೆ ನಿಗದಿಪಡಿಸಿದ ಬಾಡಿಗೆ ದರ ಚದರ ಅಡಿಗೆ ತಿಂಗಳಿಗೆ 17 ರೂಪಾಯಿನಂತೆ ನಿಗದಿಪಡಿಸಿತ್ತು. ಅಂದರೆ ಸರಾಸರಿ ತಿಂಗಳಿಗೆ 1700 ರೂಪಾಯಿ. ಈ ಪ್ರದೇಶದಲ್ಲಿ ಖಾಸಗಿ ವಾಣಿಜ್ಯ ಮಳಿಗೆ ದರ ಚದರ ತಿಂಗಳ ಬಾಡಿಗೆ ಹೊರಗಡೆ 20 ಸಾವಿರ ರೂಪಾಯಿ ಇದೆ! ಪ್ರತಿ ಐದು ವರ್ಷಕ್ಕೊಮ್ಮೆ ಬಾಡಿಗೆ ದರ ಪರಿಷ್ಕರಿಸಬೇಕೆಂಬ ನಿಯಮವಂತೂ ಇದೆ. ಆದರೆ ಪಾಲನೆ ಮಾಡುವುದು ಸುಲಭವೇ? ಬಿಬಿಎಂಪಿಯಲ್ಲಿ ವರ್ಷಕ್ಕೊಮ್ಮೆ ಮೇಯರ್ ಬದಲಾಗುತ್ತಾರಾದರೂ ಇಲ್ಲಿನ ಬಾಡಿಗೆ ದರ ಬದಲಾಗಲೇ ಇಲ್ಲ. 2017ರಲ್ಲೂ ಇದೇ ದರ ಇದೆ.

ಆಶ್ಚರ್ಯವೆಂದರೆ ಈ 37 ಮಳಿಗೆಗಳನ್ನು ಬಾಡಿಗೆ ಪಡೆದವರು ಇಲ್ಲಿಯವರೆಗೂ ಬಾಡಿಗೆ ಪಾವತಿಸಿಲ್ಲ. ಇದರ ಒಟ್ಟು ಮೊತ್ತ ಸುಮಾರು 1 ಕೋಟಿ. ಆಶ್ಚರ್ಯವೆಂದರೆ ಜಂಟಿ ಆಯುಕ್ತರ ಕಛೇರಿಯೂ ಇಲ್ಲಿಯೇ ಇದೆ. ಇಲ್ಲಿವರೆಗೆ 12 ಜನ ಜಂಟಿ ಆಯುಕ್ತರು ಬಂದು ಹೋಗಿದ್ದಾರೆ. ಆದರೆ ಯಾರೊಬ್ಬರೂ ಬಾಡಿಗೆ ಸಂಗ್ರಹಿಸಲು ಮುಂದಾಗಿಲ್ಲ. ಈಗ್ಗೆ ನಾಲ್ಕು ತಿಂಗಳ ಹಿಂದೆ ಬಾಡಿಗೆ ಪಾವತಿಸದ ಹಿನ್ನೆಲೆಯಲ್ಲಿ ಇತಿಹಾಸದಲ್ಲಿ ಮೊದಲ ಬಾರಿಗೆ ಜಂಟಿ ಆಯುಕ್ತರು ಮಳಿಗೆಗಳಿಗೆ ಬೀಗ ಜಡಿಯುವ ಸಾಹಸ ಮಾಡಿದ್ದರು. ಕಾಲಾವಕಾಶ ಕೋರಿದ್ದರಿಂದ ವ್ಯಾಪಾರಕ್ಕೆ ಅನುವು ಮಾಡಿಕೊಟ್ಟು 3 ತಿಂಗಳ ಒಳಗಾಗಿ ಪಾವತಿಸುವಂತೆ ಷರತ್ತು ವಿಧಿಸಲಾಗಿತ್ತು. ಆದರೆ ಫಲಿತಾಂಶ ಸೊನ್ನೆ. ಐದು ತಿಂಗಳು ಕಳೆದರೂ ಬಾಡಿಗೆ ವಸೂಲಾಗಿಲ್ಲ.

ಬಾಡಿಗೆ ಪಡೆದವ ಇಲ್ಲಿ ಮಾಲೀಕ!

1998ರಲ್ಲಿ ಟೆಂಡರ್ ಮುಖೇನ ಬಾಡಿಗೆ ಪಡೆದವರು ಇಂದಿಗೂ ಸ್ವಾಧೀನದಲ್ಲಿದ್ದಾರೆ. ಕಾರಣ ಹೊಸದಾಗಿ ಟೆಂಡರ್ ಕರೆಯುವ ಕೆಲಸ ನಡೆದಿಲ್ಲ. ಇದರ ಅನುಕೂಲ ಪಡೆದ ಬಾಡಿಗೆದಾರರು ಇಂದಿನ



ಕಮರ್ಷಿಯಲ್ ದರಕ್ಕೆ ಮತ್ತೊಬ್ಬರಿಗೆ ಮಳಿಗೆಯನ್ನು ಬಾಡಿಗೆ ನೀಡಿರುವುದು ಬೆಳಕಿಗೆ ಬಂದಿದೆ. ಇವರು ಪ್ರತಿ ತಿಂಗಳು ಮಾಲೀಕರಂತೆ ಬಾಡಿಗೆ ವಸೂಲಿ ಮಾಡುತ್ತಿದ್ದಾರೆ. ಇದು ಅಧಿಕಾರಿಗಳಿಗೆ ಗೊತ್ತಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ.

ಮಳಿಗೆ ವಿದ್ಯುತ್ ಬಿಲ್ ಪಾಲಿಕೆ ಪಾವತಿ!

ಇಡೀ ಸಂಕೀರ್ಣಕ್ಕೆ ಈಗಲೂ ಇರುವುದು ಒಂದೇ ಮೀಟರ್. ಮಳಿಗೆಗಳನ್ನು ಬಾಡಿಗೆ ನೀಡಿದ ಮೇಲೆ ಪ್ರತ್ಯೇಕ ವಿದ್ಯುತ್ ಮೀಟರ್ ಅಳವಡಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ಈ ಮಳಿಗೆಗಳ ವಿದ್ಯುತ್ ಬಿಲ್ಲನ್ನು ಪಾಲಿಕೆಯೇ ಪಾವತಿಸುತ್ತಿದೆ. ತಿಂಗಳ ವಿದ್ಯುತ್ ಬಿಲ್ ಒಂದೂವರೆ ಲಕ್ಷ ರೂಪಾಯಿ. ಸಾಧಾರಣ ಕಮರ್ಷಿಯಲ್ ದರದಲ್ಲಿ ಸರಾಸರಿ 1500 ರೂಪಾಯಿ ಇದೆ ಎಂದಾದಲ್ಲಿ ಸುಮಾರು ತಿಂಗಳಿಗೆ 50 ಸಾವಿರ ರೂಪಾಯಿಯನ್ನು ಪಾಲಿಕೆಯೇ ನೀಡುತ್ತಿದೆ! ಬೊಮ್ಮನಹಳ್ಳಿಯದು ಒಂದು ಉದಾಹರಣೆಯಷ್ಟೆ. ಬೆಂಗಳೂರು ನಗರದಲ್ಲಿನ ಎಲ್ಲ ಬಿಬಿಎಂಪಿ ಸಂಕೀರ್ಣಗಳ ಕಥೆ ಒಂದೇ ಆಗಿದೆ.

ಬಿಬಿಎಂಪಿ ಸ್ವಂತ ಕಛೇರಿ ಹೊಂದುವ ಜತೆಗೆ, ಪಾಲಿಕೆಯ ಆಡಳಿತಾತ್ಮಕ ವೆಚ್ಚಗಳನ್ನು ಸರಿದೂಗಿಸಿಕೊಳ್ಳಲು ಪಾಲಿಕೆ ಆದಾಯ ಮೂಲಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಬಹುತೇಕ ಎಲ್ಲ ಕಡೆ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದೆ. ಅದರಂತೆ ಖಾಸಗಿಯವರಿಗೆ ನಿಯಮಾನುಸಾರ ಟೆಂಡರ್ ಕರೆದು ಬಾಡಿಗೆ ನೀಡಿದೆ ನಿಜ. ಆದರೆ ಇದರಿಂದ ಒಂದು ಬಿಡಿಗಾಸೂ ಪಾಲಿಕೆ ಖಜಾನೆ ಸೇರುತ್ತಿಲ್ಲ. ಬದಲಾಗಿ ಅಧಿಕಾರಿಗಳ ಜೇಬು ಸೇರುತ್ತಿದೆ. ಹಣ ಕೊರತೆ ಎದುರಿಸಿ ತನ್ನ ಆಸ್ತಿಗಳನ್ನು ಲಜ್ಜೆಗೆಟ್ಟು ಅಡಮಾನ ಇಡುವ ಬಿಬಿಎಂಪಿ, ತನ್ನಲ್ಲೇ ಇರುವ ಆದಾಯದ ಮೂಲಗಳನ್ನು ಪ್ರಜ್ಞಾಪೂರ್ವಕವಾಗಿ ಮರೆಯುತ್ತಿದೆ. ತನ್ನ ಆದಾಯ ಸೋರಿಕೆ ಆಗದಂತೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದಲ್ಲಿ ಖಂಡಿತವಾಗಿಯೂ ತನ್ನ ಆಡಳಿತಾತ್ಮಕ ವೆಚ್ಚಗಳಿಗೆ ತೆರಿಗೆ ಹಣವನ್ನು ಬಳಸುವ ಅಗತ್ಯ ಬೀಳದು. ಆದರೆ ಆಗಬೇಕಲ್ಲವೇ? ಇಡೀ ಬಿಬಿಎಂಪಿ ಭ್ರಷ್ಟತೆ ಕೊಳಕಿನಲ್ಲಿ ತೊಯ್ಯುತ್ತಿರುವಾಗ ಪ್ರಾಮಾಣಿಕತೆಯನ್ನು ನಿರೀಕ್ಷಿಸುವುದು ಮೂರ್ಖತನವಾದೀತು! ●

ಬಡ್ತಿ ಮೀಸಲು: "ಅಹಿಂಸಾ" ಎಂಬ ಬಹಿರಂಗ ಅಸ್ಪೃಶ್ಯತಾಚರಣೆ?

ಕೇಳಿಸಿದ್ದು

.. .. ..ಎಸ್ಸಿ/ಎಸ್ಟಿಗಳು ಅದು ಭಾರತ ಸಂವಿಧಾನವೇ ಸೃಷ್ಟಿಸಿರುವ ಅಸ್ಪೃಶ್ಯತೆ ಅನುಭವಿಸುತ್ತಿರುವ ಶೋಷಣೆ ಅನುಭವಿಸುತ್ತಿರುವ ನಿರ್ದಿಷ್ಟ ಜನಸಂಖ್ಯೆಯ ಗುಂಪಾಗಿದೆ ಮತ್ತು ಸಂವಿಧಾನದ ಆಧಾರದಲ್ಲಿಯೇ ಆ ಗುಂಪಿಗೆ(ಎಸ್ಸಿ/ಎಸ್ಟಿಗಳಿಗೆ) ಉದ್ಯೋಗ ಮೀಸಲಾತಿ ನೀಡಲಾಗಿದೆ. ಹಾಗೆಯೇ ಅನುಚ್ಛೇದ16(4)(ಎ) ಆಧಾರದಲ್ಲಿ ಬಡ್ತಿಯಲ್ಲೂ ಸಂವಿಧಾನದ ಪ್ರಕಾರವೇ ಮೀಸಲಾತಿ ನೀಡಲಾಗಿದೆ. ಈ ನಿಟ್ಟಿನಲ್ಲಿ ಸಂವಿಧಾನದ ಅನುಚ್ಛೇದದ ಪ್ರಕಾರ ತೀರ್ಪಿನ ಪುನರ್ಪರಿಶೀಲನೆಗೆ ಮನವಿ ಸಲ್ಲಿಸಿರುವ ಅಥವಾ ಮತ್ತೊಂದು ಮಸೂದೆ ರಚಿಸಿ ನಮ್ಮ ಬಡ್ತಿ ಮೀಸಲಾತಿ ರಕ್ಷಿಸಿ ಎಂದು ಕೇಳುತ್ತಿರುವ ಎಸ್ಸಿ/ಎಸ್ಟಿಗಳ ಹಕ್ಕು ಮಂಡನೆ ಸಂಪೂರ್ಣ ನ್ಯಾಯಬದ್ಧ. ಪ್ರಶ್ನೆ ಏನೆಂದರೆ ಇವರ ವಿರುದ್ಧ ಅಂದರೆ ಎಸ್ಸಿ/ಎಸ್ಟಿಗಳ ವಿರುದ್ಧ "ಅಹಿಂಸಾ" ಸಂಘಟನೆ ಕಟ್ಟಿರುವುದು? ಇದು ಹೇಗೆ ನ್ಯಾಯಬದ್ಧ? ಸಂವಿಧಾನಬದ್ಧ? ಎಂಬುದು. ಖಂಡಿತ, ಸಮಾಜದಲ್ಲಿ ಹೀಗೆ ಇತರರು ಒಗ್ಗಟ್ಟಾಗಿ ಶತಶತಮಾನಗಳಿಂದ ಒಂದು ವರ್ಗವನ್ನು ದೂರ ಇಟ್ಟಿದ್ದಕ್ಕೇ, ಅಸ್ಪೃಶ್ಯತೆ ಆಚರಿಸುತ್ತಿರುವುದಕ್ಕೇ ತಾನೆ ಎಸ್ಸಿ/ಎಸ್ಟಿಗಳು ಸೃಷ್ಟಿಯಾದದ್ದು ಮತ್ತು ಅವರಿಗಾಗಿ ಪ್ರತ್ಯೇಕ ಮೀಸಲಾತಿ, ದೌರ್ಜನ್ಯ ತಡೆ ಕಾಯಿದೆ, ಶೋಷಣೆಯ ವಿರುದ್ಧ ರಕ್ಷಣೆ... ಇತ್ಯಾದಿ ಇತ್ಯಾದಿ ಸಂವಿಧಾನ ನೀಡಿದ್ದು. ಪ್ರಶ್ನೆ ಏನೆಂದರೆ ಇವರ ವಿರುದ್ಧ ಮತ್ತೆ ಹೀಗೆ ಇತರರು ಒಗ್ಗೂಡುವುದು, ಅವರ ಸಂವಿಧಾನಬದ್ಧ ಹಕ್ಕುಗಳ ವಿರುದ್ಧ ಹೋರಾಟಕ್ಕಿಳಿಯುವುದು, ಅದು ಕೂಡ ಏನಾಗುತ್ತದೆ?. ಖಂಡಿತ, ಅದು ಕೂಡ ಅಸ್ಪೃಶ್ಯತಾಚರಣೆಯಾಗುತ್ತದೆ ಮತ್ತು ಇತರರಿಂದ ಅಸ್ಪೃಶ್ಯರನ್ನು, ಎಸ್ಸಿ/ಎಸ್ಟಿಗಳನ್ನು ಬೇರ್ಪಡಿಸುವ ಅದು ಅಂತಹವರು ಅಂದರೆ "ಅಹಿಂಸಾ"ದವರು ಎಸ್ಸಿ/ಎಸ್ಟಿಗಳ ವಿರುದ್ಧ ಎಸಗುವ ಸಾಮಾಜಿಕ ಬಹಿಷ್ಕಾರವಾಗುತ್ತದೆ.

ಸಾಮಾಜಿಕ ಬಹಿಷ್ಕಾರ; ಯಾಕೆಂದರೆ ಸರ್ಕಾರಿ ಕಛೇರಿ ಎನ್ನುವುದು ಕೂಡ ಒಂದು ಸಾಮಾಜಿಕ ವ್ಯವಸ್ಥೆ. ವಿವಿಧ ಜಾತಿಗಳವರು, ಧರ್ಮ, ಸಮುದಾಯಗಳವರು ಎಲ್ಲರೂ ಅಲ್ಲಿರುತ್ತಾರೆ. ಎಲ್ಲರೂ ಒಗ್ಗೂಡುವುದು, ಕಛೇರಿ ಕೆಲಸ ನಿರ್ವಹಿಸುವುದು, ಕಾರ್ಯಾಂಗವಾಗಿ ಅವರ ಸಂವಿಧಾನಬದ್ಧ ಜವಾಬ್ದಾರಿಯಾಗಿರುತ್ತದೆ ಮತ್ತು ಅಂತಹ ವಾತಾವರಣದಲ್ಲಿ ಇತರರು ಎಸ್ಸಿ/ಎಸ್ಟಿ ನೌಕರರ ವಿರುದ್ಧ ಕಛೇರಿಯಲ್ಲಿ ಹೊರಗಡೆ ಸಮಾಜದಲ್ಲಿ ಇರುವಂತೆ ಒಗ್ಗೂಡುವುದು ಅಥವಾ ಸಂಘಟನೆ ಕಟ್ಟುವುದು, ಹೋರಾಟ ರೂಪಿಸುವುದು ಕೂಡ ಮತ್ತದೇ ಅಸ್ಪೃಶ್ಯತಾಚರಣೆಯೇ ಆಗುತ್ತದೆ.

ಹಾಗಿದ್ದರೆ ಇತರೆ ನೌಕರರು ಬಡ್ತಿ ಮೀಸಲಾತಿ ಬಗ್ಗೆ ಹೋರಾಟ ಮಾಡುವುದು ಬೇಡವೆ? ಖಂಡಿತ ಮಾಡಲಿ. ಹಾಗೆ ಅವರು ಮಾಡಲು ಕೂಡ ಅರ್ಹರು, ಹಕ್ಕುದಾರರು. ಆದರೆ ಅವರು ಇಟ್ಟುಕೊಳ್ಳಬೇಕಾದ ಹೆಸರು? ಉದಾಹರಣೆಗೆ ಅವರು "ಬಡ್ತಿ ಮೀಸಲಾತಿ ಸುಪ್ರೀಂಕೋರ್ಟ್ ತೀರ್ಪು ಜಾರಿ ಸಮಿತಿ" ಎಂದು ಹೆಸರಿಟ್ಟುಕೊಂಡಿದ್ದರೆ ಮತ್ತು ಅಲ್ಲಿ ಅವರು ಎಸ್ಸಿ/ಎಸ್ಟಿ ಸೇರಿದಂತೆ ಯಾರನ್ನಾದರೂ ಸರಿ ಒಳಗೊಂಡಿದ್ದರೆ (ಯಾಕೆಂದರೆ ಎಸ್ಸಿ/ಎಸ್ಟಿಗಳಲ್ಲೂ ಕೆಲವರು ಇತರೆ ವರ್ಗಗಳವರಿಗೂ ಬಡ್ತಿ ಮೀಸಲು ಸೌಕರ್ಯ ದೊರೆಯಲಿ ಎಂಬ ಮನಸ್ಥಿತಿ ಯವರಿರಬಹುದು) ಅದನ್ನು ಯಾರೂ ಆಕ್ಷೇಪಿಸುತ್ತಿರಲಿಲ್ಲ. ಆದರೆ ಬದಲಿಗೆ ಎಸ್ಸಿ/ಎಸ್ಟಿಗಳನ್ನು ಹೊರತುಪಡಿಸಿ ಇತರೆ ವರ್ಗಗಳನ್ನು ಒಗ್ಗೂಡಿಸಿ ಆ ಇತರರ ಹೆಸರಿನಲ್ಲಿಯೇ "ಅಹಿಂಸಾ= ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ" ಎಂಬ ಸಂಘ ಕಟ್ಟಿದರೆ ಆ ಸಂಘಟನೆ ಬಿಂಬಿಸುವುದಾದರೂ ಏನನ್ನು? ನೌಕರಶಾಹಿಯ ಬಹುಸಂಖ್ಯೆಯ ನೌಕರರು ಎಸ್ಸಿ/ಎಸ್ಟಿ ನೌಕರರ ವಿರುದ್ಧ ಎಂಬುದಾಗಿ ತಾನೇ? ಎಸ್ಸಿ/ಎಸ್ಟಿಗಳ ವಿರುದ್ಧ ಎಂದಾದರೆ ಅದು ಕಾನೂನು ಪ್ರಕಾರ ಏನಾಗುತ್ತದೆ? ಎಸ್ಸಿ/ಎಸ್ಟಿಗಳ ವಿರುದ್ಧದ ತಾರತಮ್ಯದ ಹಾಗೆ ತಾನೆ? ಅಥವಾ ಒಟ್ಟು ನೌಕರ ವೃಂದದಿಂದ ಎಸ್ಸಿ/ಎಸ್ಟಿ ನೌಕರರನ್ನು ದೂರ ಇಟ್ಟ ಸಾಮಾಜಿಕ ಬಹಿಷ್ಕಾರದ ಹಾಗೆ ತಾನೆ? ಆಶ್ಚರ್ಯವೆಂದರೆ ಸಣ್ಣಪುಟ್ಟ ಸಾಮಾಜಿಕ ಬಹಿಷ್ಕಾರಗಳಿಗೆ ವ್ಯವಸ್ಥೆ ತಲೆಕೆಡಿಸಿಕೊಳ್ಳುತ್ತದೆ. ಆದರೆ ಲಕ್ಷಾಂತರ ಎಸ್ಸಿ/ಎಸ್ಟಿ ನೌಕರರ ವಿರುದ್ಧ ಈ "ಅಹಿಂಸಾ" ಸಂಘಟನೆ ಕಟ್ಟಿರುವ ಬಗ್ಗೆ, ಮತ್ತದರ ಪ್ರಕ್ರಿಯೆಯ ಬಗ್ಗೆ, ಯಾರೂ ಚಕಾರ ಎತ್ತುತ್ತಿಲ್ಲ!

"ಅಹಿಂಸಾ" ಸಂಘಟನೆಯ concept "82 v/s 18" ಎಂಬುದಾಗಿದೆ ಮತ್ತು ಇದು ಸಂಘಪರಿವಾರದ ಚಿಂತನಾ ಕೊಠಡಿಯಲ್ಲಿ ಮೂಡಿಬಂದ ಚಿಂತನೆಯೇ ಆಗಿದೆ. 82 v/s 18 ಅಂದರೆ ಶೇ.18 ಮೀಸಲಾತಿ ಪಡೆಯುವ ಎಸ್ಸಿ/ಎಸ್ಟಿಗಳ ವಿರುದ್ಧ ಉಳಿದ ಶೇ.82ರಷ್ಟು ಜನ ವರ್ಗದವರು ಎಂದರ್ಥ! ..

– ರಘೋತ್ತಮ ಹೊ.ಬ.

ಬ್ಯಾಂಕ್‌ಹಣ ಕದ್ದವರಿಂದ ವಸೂಲಿ ಬದಲು ಮರುಬಂಡವಾಳೀಕರಣದ ಸರ್ಕಸ್

ಕಳೆದ ತಿಂಗಳ ಕೊನೆಯಲ್ಲಿ ದೊಡ್ಡ ಕಾರ್ಪೊರೇಟ್‌ಗಳು ಸಾಲ ಮರುಪಾವತಿ ಮಾಡದೆ ಬ್ಯಾಂಕುಗಳ ಮೇಲೆ, ಅದರಲ್ಲೂ ಮುಖ್ಯವಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳ ಮೇಲೆ ಅಗಾಧ ಪ್ರಮಾಣದಲ್ಲಿ ಬಿದ್ದಿರುವ ಸುಸ್ತಿ ಸಾಲಗಳ ಹೊರೆಯನ್ನು ನಿವಾರಿಸಲು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ 2.11ಲಕ್ಷ ಕೋಟಿ ರೂ.ಗಳ ಮರುಬಂಡವಾಳೀಕರಣದ ಪ್ರಕಟಣೆಯನ್ನು ಸರಕಾರ ಮಾಡಿತ್ತು. ಅಂದಿನಿಂದ ಈ ಮರುಬಂಡವಾಳೀಕರಣವನ್ನು ಹೇಗೆ ಮಾಡುವುದು ಎಂಬುದಕ್ಕೆ ಪ್ರತಿದಿನ ಎಂಬಂತೆ 'ಹೊಸ–ಹೊಸ' ಐಡಿಯಾಗಳನ್ನು ತೇಲಿ ಬಿಡಲಾಗುತ್ತಿದೆ– ಇವೆಲ್ಲ ಮತ್ತೊಮ್ಮೆ ಅದರ 'ಉತ್ತಮ ಆಳ್ವಿಕೆ' ಕೇವಲ ಲೊಳಲೊಟ್ಟೆ ಎಂದು ಸಾಬೀತು ಮಾಡುತ್ತಿರುವಂತಿದೆ.

ಈ ಹಿಂದೆ 2016–17ರ ಆರ್ಥಿಕ 'ಸರ್ವೆಯಲ್ಲಿ ರಿಝರ್ವ್ ಬ್ಯಾಂಕಿನ ಬಂಡವಾಳವನ್ನೇ ಬಳಸಿ ಇದನ್ನು ಮಾಡಬಹುದು ಎಂದು ಸೂಚಿಸಲಾಗಿತ್ತು.

ನೋಟುರದ್ಧತಿ ಕ್ರಮ ತಂದಾಗ ಬಯಲಿಗೆ ಬರುತ್ತದೆಂದು ನಿರೀಕ್ಷಿಸಿದ್ದ 3.5ಲಕ್ಷ ಕೋಟಿ ರೂ. ಕಪ್ಪು ಹಣದಿಂದ ಇದನ್ನು ಮಾಡಬಹುದು ಎಂದೂ ಸೂಚಿಸಲಾಯಿತು. ಆದರೆ ಈಗ ಆ 3.5ಲಕ್ಷ ಕೋಟಿಯ ಬಗ್ಗೆ ಸರಕಾರದ ಯಾವ ವಕ್ತಾರರೂ ಮಾತಾಡುತ್ತಿಲ್ಲ.

ಆದ್ದರಿಂದ ಈ 2.11ಲಕ್ಷ ಕೋಟಿಯ ಪ್ರಕಟಣೆಯ ನಂತರ, ಮೊದಲಿಗೆ ವಿಶೇಷ ಉದ್ದೇಶದ ವಾಹಕ(ಎಸ್‌ಪಿವಿ) ರಚಿಸಿ ಈ ಹೊರೆ ಸರಕಾರದ ಬಜೆಟ್‌ನಲ್ಲಿ ಬಿಂಬಿತವಾಗದಂತೆ ಮಾಡುವ ಯೋಚನೆ ಇದೆಯೆಂದು ಹೇಳಲಾಯಿತು.

ನಂತರ ಸಾರ್ವಜನಿಕ ವಲಯದ ಕಂಪನಿಗಳು ಮರುಬಂಡವಾಳೀಕರಣ ಬಾಂಡುಗಳನ್ನು ಖರೀದಿಸುವಂತೆ ಮಾಡುವ ಯೋಚನೆ ಬಂತು.

ನಂತರ ಸಾಲಬಾಕಿಯಿಂದ ನರಳುತ್ತಿರುವ ಬ್ಯಾಂಕುಗಳೇ ಈ ಮರುಬಂಡವಾಳೀಕರಣ ಬಾಂಡ್‌ಗಳನ್ನು ಖರೀದಿಸಲು ಹೇಳಬಹುದು ಎಂಬ ವಿಚಾರ ಯಾರಿಗೋ ಗಕ್ಕನೇ ಹೊಳೆಯಿತು.

ಕಳೆದ ವಾರ ಸರಕಾರದ ಮಂದಿಗೆ ಇನ್ನೊಂದು ಅಮೋಘ ವಿಚಾರ ಹೊಳೆದಿದೆಯಂತೆ 2.11ಲಕ್ಷ ಕೋಟಿ ರೂ. ಅಂದರೆ ಸುಮಾರು 32 ಬಿಲಿಯ ಡಾಲರ್. ರಿಝರ್ವ್ ಬ್ಯಾಂಕ್ ಬಳಿ ಈಗ 400ಬಿಲಿಯ ಡಾಲರ್ ವಿದೇಶಿ ವಿನಿಮಯ ಮೀಸಲು ಇದೆ. ಅದರಲ್ಲಿ ಈ ಜುಜುಬಿ 32 ಬಿಲಿಯಗಳನ್ನೇಕೆ ಬಳಸಬಾರದು. ರೀಝರ್ವ್ ಬ್ಯಾಂಕ್ ಅಷ್ಟರ ಮಟ್ಟಿಗೆ ಬ್ಯಾಂಕುಗಳ ಒಡೆತನ ಪಡೆಯುತ್ತದೆ. ಅದರಿಂದೇನು ತೊಂದರೆ ಇಲ್ಲವಲ್ಲ!

ಆದರೆ ಇದು ವಿದೇಶಿ ವಿನಿಮಯ ದರದ ಮೇಲೆ ಪರಿಣಾಮ ಬೀರದಂತಿರಬೇಕಾದರೆ, ಅಷ್ಟೇ ಮೊತ್ತದ ವಿದೇಶಿ ವಿನಿಮಯವನ್ನು ರಿಝರ್ವ್ ಬ್ಯಾಂಕ್ ಮಾರುಕಟ್ಟೆಯಿಂದ ಖರಿದಿಸಬೇಕು, ಅಥವ ಆ ಬ್ಯಾಂಕುಗಳಿಂದಲೇ ಖರೀದಿಸಬೇಕು. ಇದರ ಒಟ್ಟು ಅರ್ಥವೆಂದರೆ 2.11 ಲಕ್ಷ ಕೋಟಿ ರೂ.ಗಳು ಚಲಾವಣೆಗೆ ಬರುತ್ತವೆ. ಅಂದರೆ ರಿಝರ್ವ್ ಬ್ಯಾಂಕ್ ಅಷ್ಟು ಮೊತ್ತದ ನೋಟುಗಳನ್ನು ಮುದ್ರಿಸಿ ಸಾರ್ವಜನಿಕ ವಲಯದ ಶೇರುಗಳನ್ನು ಖರೀದಿಸಿದಂತಾಗುತ್ತದೆ ಎನ್ನುತ್ತಾರೆ ಆರ್ಥಿಕ ತಜ್ಞರಾದ ಬಿ.ಸೃಜನಾ(ನ್ಯೂಸ್‌ಕ್ಲಿಕ್, ನವಂಬರ್10).

ಆದರೆ ಇದೂ ಹಲವು ಕ್ಲಿಷ್ಟತೆಗಳನ್ನು ಉಂಟು ಮಾಡುತ್ತದೆ. ಅಲ್ಲದೆ ವಿದೇಶಿ ವಿನಿಮಯದ ಭಂಡಾರ ಇರುವುದು ಅಂತರ್ರಾಷ್ಟ್ರೀಯ ರಂಗದಲ್ಲಿನ ಏರು ಪೇರುಗಳಿಂದ ದೇಶದ ಆರ್ಥಿಕ ಡೋಲಾಯಮಾನವಾಗದಂತೆ, ಅಥವ ಮತ್ತೆ ಐಎಂಎಫ್ ಮುಂದೆ ಕೈಚಾಚುವ ಪರಿಸ್ತಿತಿ ಉಂಟಾಗದಂತೆ ನೋಡಿಕೊಳ್ಳಲು ಅದಕ್ಕೇ ಕೈ ಹಾಕುವುದು ಎಷ್ಟರ ಮಟ್ಟಿಗೆ ಬುದ್ಧಿವಂತಿಕೆಯಾಗುತ್ತದೆ, ಅಥವ 'ಉತ್ತಮ ಆಳ್ವಿಕೆ'ಯಾಗುತ್ತದೆ ಎಂಬ ಪ್ರಶ್ನೆಯೂ ಏಳುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ಸರಕಾರ ಇಂತಹದ್ದೆಲ್ಲ ಸರ್ಕಸ್ ಏಕೆ ಮಾಡುತ್ತಿದೆ ಎಂಬ ಮೂಲಭೂತ ಪ್ರಶ್ನೆ ಸಹಜವಾಗಿ ಏಳುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ನಿಜವಾಗಿ ಒಂದು ಸಮಸ್ಯೆಯೇ ಅಲ್ಲದ ಮರುಬಂಡವಾಳೀಕರಣದ ಪ್ರಶ್ನೆಗೆ ಇಷ್ಟೊಂದು ಸಮಯ ಮತ್ತು ಪ್ರಚಾರ ಏಕೆ ಕೊಡುತ್ತದೆ ಎಂದು ಸೃಜನಾ ಅವರು ಕೇಳುತ್ತಾರೆ. ಅದಕ್ಕೆ ಉತ್ತರವನ್ನೂ ಅವರೇ ತಮ್ಮ ಮೇಲೆ ಹೇಳಿದ ಲೇಖನದಲ್ಲಿ ಕೊಡುತ್ತಾರೆ.

ಅಂತರ್ರಾಷ್ಟ್ರೀಯ ಹಣಕಾಸು ವ್ಯವಹಾರಗಳ ಬೆಸೆಲ್–3 ನಿಯಮಗಳನ್ನು ಪಾಲಿಸಲು ಇಷ್ಟೆಲ್ಲ ಸರ್ಕಸ್ ಬೇಕಾಗುತ್ತದೆ ಎಂಬುದು ಕೆಲವರ ವಾದ. ಬ್ಯಾಂಕುಗಳು ಹಣಕಾಸು ಮುಗ್ಗಟ್ಟಿಗೆ ಒಳಗಾಗದಂತೆ ಮಾಡಲು 1988ರಲ್ಲಿ ಬೆಸೆಲ್–1, 2004ರಲ್ಲಿ ಬೆಸೆಲ್–2 ಮತ್ತು ಈಗ ಬೆಸೆಲ್–3 ಬಂದಿದೆ. 2004ರಲ್ಲಿ ಬೆಸೆಲ್–2 ಇದ್ದರೂ 2008ರ ಬಿಕ್ಕಟ್ಟನ್ನು ತಡೆಯಲಾಗಲಿಲ್ಲ. ಭಾರತದ ಸಂದರ್ಭದಲ್ಲಂತೂ ಈ ಎಲ್ಲ ಬ್ಯಾಂಕುಗಳು ಸಾರ್ವಜನಿಕ ಒಡೆತನದಲ್ಲಿರುವುದೇ ಅವುಗಳ ವಿಶ್ವಾಸಾರ್ಹತೆಗೆ ಸಾಕಷ್ಟಾಗುತ್ತದೆ. ಹಾಗಿರುವಾಗ ಬೆಸೆಲ್–3ನಿಯಮಗಳಿಗೆ ಅಷ್ಟೊಂದು ತಲೆಕೆಡಿಸಿಕೊಳ್ಳಬೇಕೇ ಎಂದು ಕೆಲವರು ಕೇಳುತ್ತಾರೆ. ಅದು ಒತ್ತಟ್ಟಿಗಿರಲಿ.


ವಾಸ್ತವವಾಗಿ ಈ ಸರಕಾರ ಈ ಮರುಬಂಡವಾಳಿಕರಣದ ಮಾತಾಡುವ, ಅದಕ್ಕೆ ಭಾರೀ ಪ್ರಚಾರ ಕೊಡುವ ಮೂಲಕ ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದೆ ಎನ್ನುತ್ತಾರೆ ಸೃಜನಾ ಅವರು. ವಿಫಲತೆಯೆಂದರೆ ಭಾರತದ ದೊಡ್ಡ ಬಂಡವಾಳಗಾರರಿಂದ ಅವರು ಮರುಪಾವತಿ ಮಾಡಲು ನಿರಾಕರಿಸುತ್ತಿರುವ ಅಗಾಧ ಪ್ರಮಾಣದ ಸಾಲಗಳನ್ನು ವಸೂಲಿ ಮಾಡಲು ಹಿಂದೇಟು ಹಾಕುತ್ತಿರುವುದು.

ಇದೊಂದು ಮೂರು ರಿಂಗ್‌ಗಳ ಸರ್ಕಸ್. ಇಂತಹ ಸರ್ಕಸನ್ನು ಕಳೆದ ವರ್ಷವಷ್ಟೇ ನೋಟುರದ್ಧತಿಯಲ್ಲಿ ಮಾಡಿರುವುದನ್ನು ನೆನಪಿಸಿಕೊಳ್ಳಬೇಕು ಎನ್ನುತ್ತಾರೆ ಅವರು. ಕಪ್ಪು ಹಣವನ್ನು ನಗದುಗಳಲ್ಲಿ ಪೇರಿಸಿಟ್ಟಿಲ್ಲ, ಅದು ವಿದೇಶಗಳಲ್ಲಿ, ತೆರಿಗೆಮುಕ್ತ ಧಾಮಗಳಲ್ಲಿ ರಾಶಿ ಬಿದ್ದಿದೆ ಎಂದು ಸ್ವಿಸ್ ಮಾಹಿತಿ ಸೋರಿಕೆಗಳು, ಪನಾಮ ಪೇಪರ್‌ಗಳು ಇತ್ಯಾದಿಗಳು ದೃಢಪಡಿಸಿದ್ದರೂ, ತನ್ನ ಅಧಿಕಾರದ ಎರಡು ವರ್ಷಗಳಲ್ಲಿ ಈ ಕುರಿತು ಏನೂ ಮಾಡದ ಸರಕಾರ ಆ ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ನೋಟುರದ್ಧತಿಯ ಸರ್ಕಸ್‌ಗೆ ಇಳಿಯಿತು. ಅದು ಕೇವಲ ಸರ್ಕಸ್ ಎಂದು ಈಗ 'ಭಕ್ತ'ರಿಗೆ ಬಿಟ್ಟು ಬೇರೆಲ್ಲರಿಗೂ ಸ್ಪಷ್ಟವಾಗಿ ಕಾಣಲಾರಂಭಿಸಿದೆ.

ಈಗ ಬ್ಯಾಂಕ್‌ಗಳ ವಾಪಾಸು ಬಾರದ ಸಾಲಗಳ ವಿಷಯದಲ್ಲೂ ಅದೇ ಸರ್ಕಸಿಗೆ ಈ ಸರಕಾರ ಇಳಿದಿದೆ. ಹಣಕಾಸು ಮಂತ್ರಿಗಳು ಸಾರ್ವಜನಿಕ ಚರ್ಚೆಯನ್ನು ಭಾರತದ ದೊಡ್ಡ ಬಂಡವಾಳಿಗರು ಬ್ಯಾಂಕುಗಳಿಂದ ಕದ್ದಿದ್ದಾರೆ,ಅವರಿಂದ ಅದನನು ವಸೂಲಿ ಮಾಡುತ್ತಿಲ್ಲವೇಕೆ ಎಂಬ ಸಂಗತಿಯಿಂದ ಬೇರೆಡೆಗೆ ತಿರುಗಿಸಲು ಈ ಮರುಬಂಡವಾಳಿಕರಣದ ಪ್ರಶ್ನೆಯೇ ಅಲ್ಲದ ಪ್ರಶ್ನೆಯತ್ತ ತಿರುಗಿಸಲು ಕುಟಿಲ ಪ್ರಯತ್ನ ನಡೆಸಿದ್ದಾರೆ ಎನ್ನುತ್ತಾರೆ ಸೃಜನಾ ಅವರು.

ಈ ಅಭಿಪ್ರಾಯವನ್ನು ಒಪ್ಪದಿರಲು ಸಾಧ್ಯವಿಲ್ಲ. ದೇಶದ ಕೋಟ್ಯಂತರ ಜನಗಳ ಉಳಿತಾಯದ ಹಣವನ್ನು ಕದ್ದು ಆರಾಮವಾಗಿ ಓಡಾಡಿಕೊಂಡಿರುವ ಈ ದೊಡ್ಡ ಬಂಡವಳಿಗರ ಕೊರಳ ಪಟ್ಟಿ ಹಿಡಿದು ಅದನ್ನು ವಸೂಲಿ ಮಾಡುವುದು, ಈ ಅಪರಾಧಕ್ಕೆ ಅವರನ್ನು ಶಿಕ್ಷಿಸುವುದು ಈ 'ಅಚ್ಚೇದಿನ್' ವಾಲಾಗಳ 56 ಅಂಗುಲದ ಅಜೆಂಡಾದಲ್ಲೇ ಇಲ್ಲ ಎಂಬುದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಈ ವೇಳೆಗೆ ಆರಂಭವಾಗಬೇಕಿದ್ದ ಈ ವರ್ಷದ ಸಂಸತ್ತಿನ ಚಳಿಗಾಲದ ಅಧಿವೇಶನ ಗುಜರಾತಿನ ಚುನಾವಣೆಯಿಂದಾಗಿ ಇನ್ನೂ ವಿಳಂಬಗೊಳ್ಳಬಹುದು ಎಂಬ ವರದಿಗಳಿವೆ. ಬಹುಶಃ ನಡೆಯದೇನೇ ಇರಬಹದು ಎಂದೂ ಹೇಳಲಾಗುತ್ತಿದೆ. ರಾಜಖಿಯ ಪಕ್ಷಗಳ ಮುಖಂಡರೆಲ್ಲ ಚುನಾವಣಾ ಪ್ರಚಾರದಲ್ಲಿರುವುದರಿಂದ ಅಧಿವೇಶನ ನಡೆಸುವುದು ಕಷ್ಟ ಎಂದು ಕಾರಣ ಕೊಡಲಾಗುತ್ತಿದೆ. ಆದರೆ ಅಧಿವೇಶನದಲ್ಲಿ ನೋಡುರದ್ಧತಿ ಮತ್ತು ಜಿಎಸ್‌ಟಿ ಚರ್ಚೆ ಮುಜುಗರ ಉಂಟುಮಾಡಬಹದು ಎಂಬ ಕಾರಣಕ್ಕೆ ವಿಳಂಬ ಮಾಡಲಾಗುತ್ತಿದೆ ಎಂದೂ ಹೇಳಲಾಗುತ್ತಿದೆ. –ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಜಿಎಸ್‌ಟಿ–ಎರಡು ತಿಂಗಳಲ್ಲಿ ಎರಡು ಬದಲಾವಣೆ, 200 ಸರಕುಗಳ ದರ ಬದಲಾವಣೆ, ಇನ್ನಷ್ಟು ನಿರೀಕ್ಷೆ

ನೋಟುರದ್ಧತಿ ಪ್ರಕಟಿಸಿದ ಮೊದಲ 50ದಿನಗಳಲ್ಲಿ 74 ನೋಟಿಫಿಕೇಶನ್(ಅಧಿಸೂಚನೆ)ಗಳನ್ನು ಹೊರಡಿಸಲಾಯಿತು. ಇವುಗಳಲ್ಲಿ ಬಹಳಷ್ಟು ಹಿಂದಿನ ನೋಟಿಫಿಕೇಶನ್‌ಗಳ ಪರಿಷ್ಕರಣೆಗಳಾಗಿದ್ದವು.

ಇದಕ್ಕೆ ಹೋಲಿಸಿದರೆ ಜಿಎಸ್‌ಟಿ ಅಷ್ಟೊಂದು ಪರಿಷ್ಕರಣೆಗೆ ಒಳಗಾಗಿಲ್ಲ ಎಂದು ಸಮಾಧಾನ ಪಡಬಹುದೇನೋ. ಆದರೆ ಅದೂ ಎರಡು ತಿಂಗಳಲ್ಲಿ ಎರಡು ಬಾರಿ ಬದಲಾಗಿದೆ. ಮತ್ತು ಇದರ ಪರಿಣಾಮ ಬಹಳ ವ್ಯಾಪಕ.

ಹಣಕಾಸು ಮಂತ್ರಿಗಳು ಮತ್ತು ಆಳುವ ಪಕ್ಷದ ಮುಖಂಡರು ಇದು ತಮ್ಮ ಸರಕಾರ ಜನಗಳ ಕಷ್ಟಗಳಿಗೆ ಸ್ಪಂದಿಸುತ್ತದೆ ಎಂಬುದರ ಸಂಕೇತ ಎಂದು ಬೆನ್ನು ತಟ್ಟಿಕೊಂಡರೆ, ಪ್ರಮುಖ ಪ್ರತಿಪಕ್ಷದ ಮುಖಂಡರು ಇದು ತಮ್ಮ ಹಿರಿಯ ಮುಖಂಡರ ಒತ್ತಡಗಳಿಂದಾಗಿ ಆಯ್ತು ಎಂದಿದ್ದಾರೆ.

ಆದರೆ ವಾಸ್ತವ ಸಂಗತಿ ಇವೆರಡೂ ಅಲ್ಲ, ಜಿಎಸ್‌ಟಿಗೆ ಭಾರೀ ಪ್ರತಿಭಟನೆ ವ್ಯಕ್ತವಾದ ಗುಜರಾತಿನ ವಿಧಾನ ಸಭಾ ಚುನಾವಣೆಗಳು ಕಾರಣ ಎಂಬುದು ಬಹಳಷ್ಟು ಜನರ ಬಲವಾದ ನಂಬಿಕೆ. ಹಿಮಾಚಲ ಪ್ರದೇಶದ ಚುನಾವಣೆಗಳ ದಿನಾಂಕ ಪ್ರಕಟಣೆಯ ನಂತರ ಗುಜರಾತಿಗೆ ಹೆಚ್ಚು ಸಂಬಂಧಪಟ್ಟ ಕೆಲವು ಸರಕುಗಳ ಜಿಎಸ್‌ಟಿ ದರಗಳನ್ನು ಬದಲಿಸಲಾಯಿತು. ಗುಜರಾತ್ ಚುನಾವಣೆಯ ಪ್ರಕಟಣೆಯ ನಂತರ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ 200ಕ್ಕೂ ಹೆಚ್ಚು ಸರಕುಗಳ ಮೇಲಿನ ತೆರಿಗೆಗಳನ್ನು ಇಳಿಸಿರುವುದರಿಂದ, ಇನ್ನಷ್ಟು ಬದಲಾವಣೆಗಳು ಬರುತ್ತವೆ ಎಂಬ ನಿರೀಕ್ಷೆ ಹಲವರಿಗೆ.

ವ್ಯಂಗ್ಯಚಿತ್ರ: ಅಲೋಕ್ ನಿರಂತರ್



"ನೋಟುರದ್ಧತಿ ಭ್ರಷ್ಟಾಚಾರವನ್ನು ಪ್ರೋತ್ಸಾಹಿಸಿತು"

ಇದು ಇತ್ತೀಚೆಗೆ ಪ್ರಕಟವಾದ ಒಂದು ಸರ್ವೆಯಲ್ಲಿ ಕಂಡು ಬಂದ ಸಂಗತಿ. ಈ ಸರ್ವೆ ನಡೆದದ್ದು ಜನವರಿ–ಫೆಬ್ರುವರಿ 2017ರಲ್ಲಿ. ಇದರ ಪ್ರಕಾರ ರದ್ದಾದ 500 ರೂ. ನೋಟುಗಳಿಗೆ ಪ್ರತಿಯಾಗಿ ಪೂರ್ಣ 500 ರೂ. ಪಡೆದವರ ಪ್ರಮಾಣ 24.3% ಮಾತ್ರ. 75% ಮಂದಿಗೆ ದಕ್ಕಿದ್ದು 400ರೂ. ಅಥವ ಅದಕ್ಕೂ ಕಡಿಮೆ. 51.3% ಮಂದಿಗೆ 400ರೂ, 12% ಮಂದಿಗೆ 300, 3.3% ಮಂದಿಗೆ 200ರೂ.ನಷ್ಟು ಕಮ್ಮಿ ಸಿಕ್ಕಿತ್ತು.

1000 ರೂ. ನೋಟಿನ ಕತೆ ಬಹಳ ಭಿನ್ನವೇನೂ ಅಲ್ಲ. ಪೂರ್ಣ 1000 ರೂ. ಪಡೆದವರು 17.4%, 82% ದಷ್ಟು ಮಂದಿ 900ರೂ. ಅಥವ ಅದಕ್ಕಿಂತ ಕಮ್ಮಿ ಪಡೆದರು. ಇವರಲ್ಲಿ 800ರೂ. ಪಡೆದವರ ಪ್ರಮಾಣ 40.7%.

'ಅನ್ಹದ್'(ಆಕ್ಟ್ ನೌ ಫಾರ್ ಹಾರ್ಮನಿ ಅಂಡ್ ಡೆಮಾಕ್ರಸಿ) ಎಂಬ ಸಂಘಟನೆ 32 ಜನಪರ ಸಂಘಟನೆಗಳ ಸಹಕಾರದೊಂದಿಗೆ 21 ರಾಜ್ಯಗಳಲ್ಲಿ 3647 ಮಂದಿಯನ್ನು ಒಳಗೊಂಡಿರುವ ಸರ್ವೆ ಇದು(ಸಬ್‌ರಂಗ್ ಇಂಡಿಯ, ನವಂಬರ್ 11).

ನೋಟುರದ್ಧತಿ ಪ್ರಧಾನಿಗಳು ಈಗಲೂ ಹೇಳುವಂತೆ ಭಾರತದ ಆರ್ಥಿಕವನ್ನು ಸ್ವಚ್ಛಗೊಳಿಸಿಲ್ಲ, ಬದಲಾಗಿ ಕೊಳಕು ಮಾಡಲು ಮತ್ತೊಂದು ದಾರಿಯನ್ನು ತೆರೆದುಕೊಟ್ಟಿತು ಎಂಬುದು ಈ ಸರ್ವೆ ನಡೆಸಿದವರ ತೀರ್ಮಾನ.

ನಯಾಭಾರತ್‌ನತ್ತ 'ಮುಕ್ತ' ಮಾಧ್ಯಮದೊಂದಿಗೆ

ಮುಕ್ತ ಮಾಧ್ಯಮ ಒಂದು ಚೈತನ್ಯಶೀಲ ಪ್ರಜಾಪ್ರಭುತ್ವದ ಮೂಲೆಗಲ್ಲು, ಮತ್ತು ದನಿಯಿಲ್ಲದವರಿಗೆ ದನಿ ನೀಡುವಲ್ಲಿ ಅದರ ಕೊಡುಗೆ ಅಪಾರ– ಇದು ಪ್ರಧಾನಿಗಳು ರಾಷ್ಟ್ರೀಯ ಪತ್ರಿಕಾ ದಿನದಂದು ನೀಡಿದ ಶುಭಾಶಯ ಸಂದೇಶ.

ಮಾಧ್ಯಮಗಳಲ್ಲಿ ವಿಶ್ವಾಸಾರ್ಹತೆ ಅಪರೂಪದ ಸರಕಾಗುತ್ತಿದೆ– ಇದು ಅದೇ ದಿನ ಉಪರಾಷ್ಟ್ರಪತಿಗಳ ಟಿಪ್ಪಣಿ.

ಅದೇ ದಿನ 'ರಾಜಸ್ತಾನ ಪತ್ರಿಕಾ' ತನ್ನ ರಾಜ್ಯದ ಬಿಜೆಪಿ ಸರಕಾರದ ಕರಾಳ ಸುಗ್ರೀವಾಜ್ಞೆ ಪತ್ರಿಕಾ ಸ್ವಾತಂತ್ರ್ಯದ ಹರಣ ಮಾಡಿದೆ ಎಂದು ಪ್ರತಿಭಟಿಸಿ ತನ್ನ ಸಂಪಾದಕೀಯ ಪುಟವನ್ನು ದಪ್ಪ ಕರಿ ಪಟ್ಟಿಯೊಂದಿಗೆ ಖಾಲಿ ಬಿಟ್ಟು ಪ್ರಕಟಿಸಿದೆ.

ನವಂಬರ್ 11ರಂದು ದಿಲ್ಲಿ ಪತ್ರಕರ್ತರ ಸಂಘ ನೀಡಿದ ಹೇಳಿಕೆಯಲ್ಲಿ ಡಿಸೆಂಬರ್ 9ರಿಂದ 11 ರ ವರೆಗೆ ದಿಲ್ಲಿಯಲ್ಲಿ ಲಕ್ಷಾಂತರ ಕಾರ್ಮಿಕರು ಭಾಗವಹಿಸಿದ 'ಮಹಾಪಡಾವ್' ಬಗ್ಗೆ ದೊಡ್ಡ ಪತ್ರಿಕೆಗಳು ಏನೇನೂ ಕವರೇಜ್ ನೀಡದೆ ಸಂಪೂರ್ಣ ಉಪೇಕ್ಷಿಸಿರುವುದನ್ನು ಖಂಡಿಸುತ್ತ ಇದು ತುರ್ತು ಪರಿಸ್ಥಿತಿಯ ಕರಾಳ ದಿನಗಳನ್ನು ನೆನಪಿಸಿದೆ ಎಂದಿದೆ.



‘ಕಪ್ಪು ಹಣದ ಮೇಲೆ ಧರ್ಮಯುದ್ಧ’ ಎಂಬ ಮಹಾ ಭಾರತೀಯ ನಾಟಕ



ಆದಾಯಗಳು ಮತ್ತು ಸಂಪತ್ತಿನ ಮೇಲೆ ತೆರಿಗೆ ತಪ್ಪಿಸುವ ಮೂಲಕ ಸಂಪಾದಿಸಿದ ಕಪ್ಪು ಹಣ ನಗದು ರೂಪದಲ್ಲಿ ಅಡಗಿರುವುದಕ್ಕಿಂತ ಎಷ್ಟೋ ಹೆಚ್ಚು ಪ್ರಮಾಣದಲ್ಲಿ ರಹಸ್ಯ ವ್ಯವಹಾರಗಳ ಜಾಲಗಳಲ್ಲೇ ಅಡಗಿದೆ ಎಂಬುದನ್ನು ಪ್ಯಾರಡೈಸ್ ಪೇಪರ್ಸ್ ಸಾಬೀತು ಮಾಡಿದೆ. ಹಾಗಾಗಿ ಭಾರತದ ಹಣಕಾಸು ನಿಯಂತ್ರಣ ಪ್ರಾಧಿಕಾರಗಳಿಗೆ ಮಾಹಿತಿ ಸಿಗದಂತೆ ಮಾಡಿರುವ ಲೋಪಗಳನ್ನು ಸರಿಪಡಿಸಲು ಮುತುವರ್ಜಿ ವಹಿಸದ ಸರಕಾರ ಮಾಡಿರುವ ನೋಟು ರದ್ಧತಿ ಅದು ಕಪ್ಪು ಹಣದ ವಿರುದ್ಧ ಒಂದು ಗಂಭೀರ ಯುದ್ಧ ನಡೆಸುತ್ತಿದೆ ಎಂಬ ಭಾವನೆ ಮೂಡಿಸಿ ಜನಗಳ ದಾರಿ ತಪ್ಪಿಸುವ ಒಂದು ಕಸರತ್ತು ಎಂಬುದೀಗ ಹಿಂದೆಂದಿಗಿಂತಲೂ ಸ್ಪಷ್ಟ.

–ನೀಲೋತ್ಪಲ ಬಸು

ಸಂಗ್ರಹಾನುವಾದ” ಕೆ.ಎಂ, ನಾಗರಾಜ್

ಬಹಳ ಸಮಯದಿಂದಲೂ ಭ್ರಷ್ಟಾಚಾರ ಮತ್ತು ಕಪ್ಪು ಹಣ ಈ ದೇಶದ ನಾಗರಿಕರನ್ನು ಬಾಧಿಸುತ್ತಿವೆ. ಅಣ್ಣಾ ಹಜಾರೆಯ ನೇತೃತ್ವದಲ್ಲಿ ಭ್ರಷ್ಟಾಚಾರ ಮತ್ತು ಕಪ್ಪು ಹಣದ ಬಗ್ಗೆ ನಡೆದ ಪ್ರಚಾರದ ನಂತರ ಅವು 2014 ರ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿದವು. ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುವ ಉನ್ನತ ಅಧಿಕಾರದಲ್ಲಿರುವ ವ್ಯಕ್ತಿಗಳನ್ನು ಶಿಕ್ಷಿಸುವ ಅಧಿಕಾರವುಳ್ಳ ‘ಲೋಕಪಾಲ’ ನೇಮಕ ಮಾಡುವಂತೆ ಒತ್ತಾಯವು ಅಣ್ಣಾ ಹಜಾರೆ ಅಭಿಯಾನದ ಕೇಂದ್ರ ಬೇಡಿಕೆಯಾಗಿತ್ತು. ಅಣ್ಣಾ ಹಜಾರೆಯವರ ಪ್ರಚಾರವು ನರೇಂದ್ರ ಮೋದಿಯ ಚುನಾವಣಾ ಪ್ರಚಾರಕ್ಕೆ ಒಂದು ಮೊನಚನ್ನು ಸೇರಿಸಿತು. ಮೋದಿ ಅದಕ್ಕೆ ಒಂದಿಷ್ಟು ಮಸಾಲೆ ಸೇರಿಸಿದರು. ಅಧಿಕಾರ ಸ್ವೀಕರಿಸಿದ ನೂರು ದಿನಗಳಲ್ಲಿ ವಿದೇಶದಲ್ಲಿರುವ ಎಲ್ಲ ಕಪ್ಪು ಹಣವನ್ನು ವಾಪಸ್ ತಂದು ಪ್ರತಿ ಭಾರತೀಯ ನಾಗರಿಕರಿಗೆ 15 ಲಕ್ಷ ರೂ. ಮೊತ್ತವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜವಾ ಮಾಡಲಾಗುವುದು ಎಂದು ಹೇಳಿದ್ದರು.


ಈಗ ಅದು ಇತಿಹಾಸ. ವಾಸ್ತವವಾಗಿ ಅದೊಂದು ‘ಕೆಟ್ಟ ಜೋಕ್’! ಇದು ಕೇವಲ ಚುನಾವಣಾ ವಾಕ್ಚಾತುರ್ಯವೆಂದು ಮೋದಿಯವರ ಪರಮಾಪ್ತ ಬಿಜೆಪಿ ಅಧ್ಯಕ್ಷ ಅಮಿತ್ ಷಾ ಸಾರ್ವಜನಿಕವಾಗಿ ಒಪ್ಪಿಕೊಂಡಿದ್ದಾರೆ. ಅದೇನೇ ಇರಲಿ, ಮೋದಿ ಪ್ರಧಾನ ಮಂತ್ರಿಯಾದ ಮೂರುವರೆ ವರ್ಷಗಳ ನಂತರವೂ ಲೋಕಪಾಲರ ನೇಮಕದ ಬಗ್ಗೆ ಯಾರೂ ಮಾತಾಡುತ್ತಿಲ್ಲ. ಲೋಕಪಾಲರ ನೇಮಕವನ್ನು ಭಾರತ ನಿರೀಕ್ಷಿಸುತ್ತಿದೆ.

ಕಪ್ಪು ಹಣದ ವಿರುದ್ಧ ಧರ್ಮಯುದ್ಧ

ಹೊಡೆದು ಓಡುವುದು ಮೋದಿ ತಂಡದ ವಿತಪರಿಚಿತ ಕಾರ್ಯವಿಧಾನ. ಕಣ್ಣಿಗೆ ಎದ್ದು ಕಾಣುವ ಕೊರತೆಗಳನ್ನು ಮರೆಮಾಚಲು ಭ್ರಷಾಚಾರ–ವಿರೋಧದ, ಕಪ್ಪು–ಹಣ ವಿರೋಧದ ಕಥನಗಳು ಅದರ ಮುಖ್ಯ ಗೂಟ. ಪ್ರಮುಖ ಪತ್ರಿಪಕ್ಷ ನಿಷ್ಕ್ರಿಯಗೊಂಡದ್ದು ಅದಕ್ಕೆ ಬಹಳ ನೆರವಾಯಿತು.

ರಹಸ್ಯ ವಿದೇಶಿ ಬ್ಯಾಂಕ್ ಖಾತೆಗಳಲ್ಲಿರುವ ಕಪ್ಪು ಹಣದ ಬಗ್ಗೆ ಮೇಲೆ ಮೋದಿ ಸರಕಾರ ಮತ್ತೆ–ಮತ್ತೆ ತನಿಖೆಗಳು ನಡೆಯುತ್ತಿವೆ– ಎಷ್ಟು ಪ್ರಕರಣಗಳಿರಬಹುದು, ಎಷು ವ್ಯಕ್ತಿಗಳಿರಬಹುದು ಇತ್ಯಾದಿಗಳನ್ನು ಪುನರುಚ್ಚರಿಸುತ್ತಲೇ ಬಂತೇ ಹೊರತು ಸೂಕ್ತ ಕ್ರಮ ಕೈಗೊಳ್ಳಲಿಲ್ಲ. ಅಪೂರ್ಣ ವಿವರಗಳನ್ನು ಕೊಡುತ್ತಿದೆ. ಸುಪ್ರೀಂ ಕೋರ್ಟ್ ಆಜ್ಞೆಯ ಮೇರೆಗೆ ನೇಮಕಗೊಂಡ ವಿಶೇಷ ತನಿಖಾ ತಂಡವು ತನ್ನ ಅಧ್ಯಯನವನ್ನು ಪೂರ್ಣಗೊಳಿಸಿದೆ ಮತ್ತು ಅದರ ಶಿಫಾರಸುಗಳನ್ನು ಸರ್ಕಾರಕ್ಕೆ ನೀಡಿದೆ ಎಂದು ಹೇಳಲಾಗಿದೆ. ಅದೇನೇ ಇರಲಿ, ಅಪಾರದರ್ಶಕವಾಗಿ ಕಾರ್ಯನಿರ್ವಹಿಸುವ ಈ ಸರ್ಕಾರವು ಈ ಶಿಫಾರಸುಗಳನ್ನು ಸಾರ್ವಜನಿಕರೊಂದಿಗೆ ಹಂಚಿಕೊಂಡಿಲ್ಲ.

ಪ್ರಪಂಚದ ಇತರ ಭಾಗಗಳಲ್ಲಿರುವ ತೀವ್ರ ಬಲಪಂಥೀಯ ಆಡಳಿತಗಳಂತೆಯೇ, ಮೋದಿ ಸರಕಾರವು ರಾಷ್ಟ್ರೀಯ ಭದ್ರತಾ ಪ್ರಭುತ್ವದ ಸೃಷ್ಟಿಯಲ್ಲಿ ತೊಡಗಿದೆ. ನಮ್ಮ ಕಾನೂನು ಚೌಕಟ್ಟು ವಿದೇಶದಲ್ಲಿ ಕಪ್ಪು ಹಣ ಇಡಲು ಅನುವು ಮಾಡಿಕೊಡುವ ಅಂತರ್ರಾಷ್ಟ್ರೀಯ ಹಣಕಾಸು ಹರಿವನ್ನು ನಿಭಾಯಿಸುವಷ್ಟು ಸಮರ್ಥವಾಗಿಲ್ಲ ಎಂಬುದು ಮತ್ತು ಅದೇ ಕಪ್ಪು ಹಣವು ವಿದೇಶಿ ಹೂಡಿಕೆಯಾಗಿ ಅಪಾರ ಲಾಭ ಗಳಿಕೆಗಾಗಿ ಒಳಬರುತ್ತಿದೆ ಎಂಬುದೂ ಮೋದಿ ಸರ್ಕಾರಕ್ಕೆ ಗೊತ್ತಿದೆ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ

ಇದು ಎಲ್ಲರಿಗೂ ಚೆನ್ನಾಗಿಯೇ ತಿಳಿದಿದೆ. 1992 ರಲ್ಲಿ ನಡೆದ ಹರ್ಷದ್ ಮೆಹ್ತಾ ಷೇರು ಮಾರುಕಟ್ಟೆ ಹಗರಣದ ಬಗ್ಗೆ ನಡೆದ ಜೆಪಿಸಿ ತನಿಖೆಯು “ಪಾರ್ಟಿಸಿಪೇಟರಿ ನೋಟ್ಸ್” ನಂತಹ ಹೊಸ ಹಣಕಾಸು ಸಾಧನಗಳು ಮತ್ತು “ಸಾಗರೋತ್ತರ ಕಾರ್ಪೊರೇಟ್ ವ್ಯವಸ್ಥೆ”ಗಳ ಚಟುವಟಿಕೆಗಳು ನಮ್ಮ ನಿಯಂತ್ರಕರ ಹಿಡಿತಕ್ಕೆ ಮೀರಿವೆ ಎಂದು ತಿಳಿಸಿತ್ತು. ಆರ್ಥಿಕ ಜಾಗತೀಕರಣದ ಈ ಹಣಕಾಸು ಸಾಧನಗಳ ಮೂಲಕವಾಗಿಯೇ ಹಣವು ದೇಶದಿಂದ ಹೊರಕ್ಕೂ ಮತ್ತು ದೇಶದ ಒಳಕ್ಕೂ ಹರಿದಾಡುತ್ತದೆ. ಈ ಹಣಕಾಸು ಸಾಧನಗಳು ತೆರಿಗೆ ವಂಚಿಸಲು ಮತ್ತು ಶ್ರೀಮಂತರ ಸಂಪತ್ತು ಹೆಚ್ಚಿಸಲು ಅನುಕೂಲವಾಗಿವೆ. ಆದ್ದರಿಂದ, ವಿದೇಶಿ ಮಾರ್ಗದ ಬಳಕೆಯ ಮೂಲಕ ಕಪ್ಪು ಹಣ ನಿಲ್ಲಿಸುವ ಪ್ರಯತ್ನವು ಅಂತರರಾಷ್ಟ್ರೀಯ ಅನುಭವವನ್ನು ಗಣನೆಗೆ ತೆಗೆದುಕೊಳ್ಳಬೇಕು ಮತ್ತು ಹೊಸ ವಿಧದ ಹಣಕಾಸಿನ ಅಪರಾಧಗಳನ್ನು ವ್ಯಾಖ್ಯಾನಿಸುವ ಅಂಶಗಳನನು ಒಳಗೊಳ್ಳುವ ಅಗತ್ಯವಿದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಭ್ರಷ್ಟಾಚಾರದ ಮೇಲಿನ ವಿಶ್ವಸಂಸ್ಥೆಯ ಸಮಾವೇಶದ ಶಿಫಾರಸುಗಳ ಅನುಸರಣೆಯು ಒಂದು ಉತ್ತಮ ಆರಂಭವಾಗುತ್ತದೆ. ಆದರೇನು ಮಾಡುವುದ, ಅದನ್ನು ಆರಂಭಿಸಿಯೇ ಇಲ್ಲವಲ್ಲ!

ನೋಟು ರದ್ಧತಿ: ‘ಕಪ್ಪು ಹಣವನ್ನು ಕಿತ್ತು ಎಸೆಯುವ ಭರ್ಜಿ’ಯಾಗಲಿಲ್ಲ

ಭಾರತದಲ್ಲಿರುವ ಕಪ್ಪು ಹಣದಲ್ಲಿ ಕೇವಲ ಶೇಕಡ 6 ರಷ್ಟು ಭಾಗ ಮಾತ್ರ ನಗದು ರೂಪದಲ್ಲಿರಬಹುದು ಎಂದು ಗೊತ್ತಿದ್ದರೂ ನಗದು ಚಲಾವಣೆಯಲ್ಲಿದ್ದ 86 ಪ್ರತಿಶತದಷ್ಟು ಭಾಗದ ರೂ. 500 ಮತ್ತು 1000 ರೂಪಾಯಿಗಳ ರದ್ಧತಿಯನ್ನು 2016 ರ ನವೆಂಬರ್ 8 ರಂದು ಪ್ರಧಾನಮಂತ್ರಿಯವರು ಘೋಷಿಸಿದರು. ಈ ಕ್ರಮವು ಕಪ್ಪು ಹಣದ ವಿರುದ್ಧ ಯುದ್ಧವೆಂದು ಒಂದು ಅಭೂತಪೂರ್ವವಾದ ಪ್ರಚಾರ ಹಬ್ಬಿಸಲಾಯಿತು. ಸಾಮಾನ್ಯವಾಗಿ, ಕಪ್ಪು ಹಣವನ್ನು ರಿಯಲ್ ಎಸ್ಟೇಟ್, ಚಿನ್ನ ಮತ್ತು ತೆರಿಗೆದಾಣಗಳಲ್ಲಿರುವ ತೋರಿಕೆ’(ಶೆಲ್)ಯ ಕಂಪೆನಿಗಳಲ್ಲಿ ತೊಡಗಿಸುವುದರಿಂದ ನೋಟು ರದ್ಧತಿ ವಿಫಲಗೊಳ್ಳುತ್ತದೆ ಎಂಬುದು ಮೊದಲೇ ಸ್ಪಷ್ಟವಾಗಿತ್ತು.

ನಿಷೇದಿತ ನೋಟುಗಳು ಬಹುತೇಕ ಹಿಂದಕ್ಕೆ ಬಂದವು. ಸುಮಾರು 5 ಲಕ್ಷ ಕೋಟಿ ರೂಪಾಯಿಗಳವರೆಗೆ ನಿಷೇದಿತ ನೋಟುಗಳು ಹಿಂತಿರುಗುವುದಿಲ್ಲ ಎಂದು ಸರ್ವೋಚ್ಛ ನ್ಯಾಯಾಲಯದಲ್ಲಿ ಸರ್ಕಾರದ ಹೇಳಿಕೆ ಹುಸಿಯಾಯ್ತು. ನೋಟು ರದ್ಧತಿಯಿಂದಾಗಿ ಜನಸಾಮಾನ್ಯರಿಗೆ ಹೇಳಲಾಗದ ತೊಂದರೆಗಳಾದವು. ಅಸಂಘಟಿತ ವಲಯಕ್ಕೆ ಬಿದ್ದ ಹೊಡೆತ ಬಹಳ ಕೆಟ್ಟದಾಗಿತ್ತು.

ಅಷ್ಟಾಗಿಯೂ, ತಪ್ಪನ್ನು ಒಪ್ಪಿಕೊಳ್ಳದ ಸರ್ಕಾರವು ಕಪ್ಪು ಹಣದ ವಿರುದ್ಧ ಹೋರಾಟ ನಡೆಯುತ್ತಿದೆ ಎಂಬ ಕಥನವನ್ನೇ ಮುಂದುವರೆಸುತ್ತಿದೆ. ದುರಂತಮಯವಾಗಿ ಪರಿಣಮಿಸಿದ ನೋಟು ರದ್ಧತಿಯ ವಾರ್ಷಿಕವನ್ನು ನವೆಂಬರ್ 8 ರಂದು ‘ಕಪ್ಪು ದಿನ’ ಆಚರಿಸಬೇಕೆಂಬ ವಿರೋಧ ಪಕ್ಷಗಳ ಕರೆಗೆ ಪ್ರತಿಕ್ರಿಯೆಯಾಗಿ, ಸರ್ಕಾರವು ನವೆಂಬರ್ 8 ರಂದು ಕಪ್ಪು ಹಣದ ವಿರುದ್ಧ ಹೋರಾಟದ ದಿನವೆಂದು ಆಚರಿಸಿತು. ಇದಕ್ಕಿಂತ ದುಷ್ಟವಾದ ವಂಚನೆ ಬೇರಿಲಾರದು.

ಪ್ಯಾರಡೈಸ್ ಪೇಪರ್ಸ್ : ಒಂದು ವಿಚಿತ್ರ ವಿಡಂಬನೆ

ಪ್ಯಾರಡೈಸ್ ಪೇಪರ್ಸ್ ಜಾಗತಿಕ ಮಟ್ಟದಲ್ಲಿ ಈಗ ಹರಿದಾಡುತ್ತಿರುವ ಭೂಕಂಪನ ಉಂಟುಮಾಡುವಂತಹ ರೀತಿಯ ಸುದ್ದಿ. ಇದು ಆರ್ಥಿಕ ಜಾಗತೀಕರಣವು ಕಾರ್ಯನಿರ್ವಹಿಸುವ ವಿಧಾನವನ್ನು ಬಯಲು ಮಾಡಿದೆ. ರಹಸ್ಯವಾಗಿ ಕಾರ್ಯ ನಿರ್ವಹಿಸುವ ಬರ್ಮುಡಾ ಮೂಲಕ ‘ಅಪ್ಲೆಬೈ’ ಮತ್ತು ಸಿಂಗಾಪುರ್ ಮೂಲದ ‘ಅಸಿಯಾಸಿಟಿ ಟ್ರಸ್ಟ್’ ಸಂಸ್ಥೆಗಳ ಬಳಿ ಇದ್ದ 1.34 ಕೋಟಿ ಕಾರ್ಪೊರೇಟ್ ದಾಖಲೆಗಳಿಗೆ ಪ್ಯಾರಡೈಸ್ ಪೇಪರ್ಸ್ ಸಂಬಂಧಿಸಿವೆ ಈ ಕಾರ್ಪೊರೇಟ್ ದಾಖಲೆಗಳನ್ನು ಒಂದು ಜರ್ಮನ್ ಪತ್ರಿಕೆಯು ಪಡೆದುಕೊಂಡಿತ್ತು. ಈ ಬೃಹತ್ ಮಾಹಿತಿಯ ಸಾರಾಂಶವನ್ನು ‘ದಿ ಇಂಡಿಯನ್ ಎಕ್ಸ್‌ಪ್ರೆಸ್’ ಪ್ರಕಟಿಸಿದೆ.

ಆಫ್‌ಶೋರ್ ಲೀಕ್ಸ್ (2013), ಸ್ವಿಸ್ ಲೀಕ್ಸ್ (2015) ಮತ್ತು ಪನಾಮ ಪೇಪರ್ಸ್ (2016) ಸಹ ಇದೇ ರೀತಿಯ ಮಾಹಿತಿಗಳನ್ನು ಹಿಂದೆ ಬಹಿರಂಗಪಡಿಸಿವೆ. ಆದರೆ, ಪ್ಯಾರಡೈಸ್ ಪೇಪರ್ಸ್‌ನ ವಿಶೇಷತೆ ಎಂದರೆ, ಅದು ವ್ಯಕ್ತಿಗಳಿಗಿಂತ ಮುಖ್ಯವಾಗಿ ಕಾರ್ಪೊರೇಟ್ ದೈತ್ಯರ ಕಡಲಾಚೆಯ ರಹಸ್ಯ ಹಣಕಾಸು ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲಿದೆ.

ಆಪಲ್ಬೈ ಸಂಸ್ಥೆಯ ಕಾರ್ಯಾಚರಣೆಯ ವಿಧಾನವು ಪನಾಮ ಪೇಪರ್ಸ್‌ನಲ್ಲಿದ್ದ ಮೊಸಾಕ್ ಫೋನ್ಸೆಕಾವನ್ನು ಹೋಲುತ್ತದೆ. 119 ವರ್ಷಗಳ ಅನುಭವದ ಈ ಸಂಸ್ಥೆಯು ಸೃಷ್ಟಿಸಿರುವ ಜಾಗತಿಕ ಜಾಲದಲ್ಲಿ ವಕೀಲರು, ಅಕೌಂಟೆಂಟ್‌ಗಳು, ಬ್ಯಾಂಕರ್ಸ್ ಇತ್ಯಾದಿಗಳು ಪ್ರಮುಖ ಸದಸ್ಯರು. ಇದು ತೆರಿಗೆಗಳನ್ನು ತಪ್ಪಿಸಿಕೊಳ್ಳುವ ಗ್ರಾಹಕರ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುವುದು, ಅವರ ರಿಯಲ್ ಎಸ್ಟೇಟ್ ಆಸ್ತಿಗಳನ್ನು ನಿರ್ವಹಿಸುವುದು, ಅವರ ಎಸ್ಕ್ರೊ ಖಾತೆಗಳನ್ನು ತೆರೆಯುವುದು, ಅವರಿಗಾಗಿ ಖಾಸಗಿ ವಿಮಾನಗಳು ಮತ್ತು ಐಷಾರಾಮಿ ವಿಹಾರ ನೌಕೆಗಳನ್ನು ಕಡಿಮೆ ತೆರಿಗೆ ದರಗಳು ಪಾವತಿಸಿಕೊಳ್ಳುವುದು ಮತ್ತು ಅವರಿಗಾಗಿ ಪ್ರಪಂಚದಾದ್ಯಂತ ಲಕ್ಷಾಂತರ ಡಾಲರ್‌ಗಳನ್ನು ಹರಿದಾಡಿಸುವ ಕೆಲಸ ಮಾಡುತ್ತದೆ. ನಿಜವಾದ ಅರ್ಥದಲ್ಲಿ, ಪ್ಯಾರಡೈಸ್ ಪೇಪರ್ಸ್ ಅಂತರರಾಷ್ಟ್ರೀಯ ಹಣಕಾಸಿನ ಬಂಡವಾಳದ ದಗಾಕೋರರ ದುರ್ಬಲ ಅಂಶಗಳ ಸಂಕೇತ. ಅವಕ್ಕೆ ಅದು ‘ಗೌಪ್ಯತೆಯ ಮುಸುಕನ್ನು’ ಹೊದಿಸುತ್ತದೆ.

ವೇಗವಾಗಿ ಜಾಗತೀಕರಣಗೊಳ್ಳುವ ಜಗತ್ತಿನಲ್ಲಿ ಕಾರ್ಪೊರೇಟ್‌ಗಳ ಅನುಕೂಲಕ್ಕಾಗಿ ಕಡಲಾಚೆಯ ಹಣಕಾಸು ಸೌಲಭ್ಯಗಳನ್ನು ಒದಗಿಸುವುದನ್ನು ಮೇಲ್ನೋಟಕ್ಕೆ ಅಕ್ರಮ ಎನ್ನಲಾಗದು. ಆದರೆ, ಅಸಮಾನತೆ ಹೆಚ್ಚುತ್ತಿರುವ ಜಗತ್ತಿನಲ್ಲಿ ಆಪಲ್ಬೈನಂತಹ ಸಂಸ್ಥೆಗಳು ದೇಶೀಯ ಕಾನೂನಿನಲ್ಲಿನ ಲೋಪದೋಷಗಳನ್ನು ಬಳಸಿಕೊಳ್ಳುವ ಮೂಲಕ ತೆರಿಗೆಗಳನ್ನು ಪಾವತಿಸುವುದನ್ನು ತಪ್ಪಿಸಲು MNC ಗಳಿಗೆ ಸಹಾಯ ಮಾಡುತ್ತಿವೆ. ಇದು ಅಸಮಾನತೆ ಹೆಚ್ಚಾಗುವಂತೆ ಮಾಡುತ್ತದೆ ಮತ್ತು ಅಂತಿಮವಾಗಿ ಅರ್ಥವ್ಯವಸ್ಥೆಯೇ ಮುಗ್ಗರಿಸುವಂತೆ ಮಾಡುತ್ತದೆ.

ಪ್ಯಾರಡೈಸ್ ಪೇಪರ್ಸ್ ಬಹಿರಂಗವಾದ ಹಿನ್ನೆಲೆಯಲ್ಲಿ, ಬರ್ನೀ ಸ್ಯಾಂಡರ್ಸ್ (ಅಮೆರಿಕ ಸಂಯುಕ್ತ ಸಂಸ್ಥಾನಗಳ ಸೆನೇಟ್ ಸದಸ್ಯ) ಈ ಪ್ರಶ್ನೆಯನ್ನು ಸರಿಯಾಗಿಯೇ ಎತ್ತಿದ್ದಾರೆ – “ನಮ್ಮ ಕಾಲದ ಪ್ರಮುಖ ಸಮಸ್ಯೆ ಎಂದರೆ, ಅಂತರಾಷ್ಟ್ರೀಯ ಹಣಕಾಸು ಬಲಾಢ್ಯರ ಒಕ್ಕೂಟದತ್ತ ನಾವು ಶೀಘ್ರವಾಗಿ ಚಲಿಸುತ್ತಿದ್ದೇವೆ, ಅದರಲ್ಲಿ ಕೆಲವೇ ಮಂದಿ ಶತಕೋಟ್ಯಾಧಿಪತಿಗಳು ಜಾಗತಿಕ ಅರ್ಥವ್ಯವಸ್ಥೆಯ ಗಮನಾರ್ಹವಾದ ಭಾಗವನ್ನು ನಿಯಂತ್ರಿಸುತ್ತಾರೆ. ಈ ಶತಕೋಟ್ಯಾಧಿಪತಿಗಳು ಮತ್ತು MNC ಗಳು ಹೇಗೆ ತೆರಿಗೆ ಕೊಡುವುದನ್ನು ತಪ್ಪಿಸಿಕೊಳ್ಳುತ್ತಾರೆ ಮತ್ತು ತಮ್ಮ ಸಂಪತ್ತು ಹಾಗೂ ಲಾಭವನ್ನು ಹೇಗೆ ಅಡಗಿಸಿಕೊಳ್ಳುತ್ತಾರೆ ಎಂಬುದನ್ನು ಪ್ಯಾರಡೈಸ್ ಪೇಪರ್ಸ್ ತೋರಿಸುತ್ತದೆ”.

ಭಾರತದ ಕಥೆ

ಪ್ಯಾರಡೈಸ್ ಪೇಪರ್ಸ್ 714 ಭಾರತೀಯ ಹೆಸರುಗಳನ್ನು ಒಳಗೊಂಡಿದೆ. ಸನ್ ಗ್ರೂಪ್, ಅದಾನಿಗಳು, ಅಂಬಾನಿಗಳು ಹಾಗೂ ಮಂತ್ರಿಗಳೂ ಸೇರಿದಂತೆ ಇತರರೂ ಈ ಪಟ್ಟಿಯಲ್ಲಿದ್ದಾರೆ. ಕೆಲವು ಪ್ರಮುಖ ಭಾರತೀಯ ಕಂಪೆನಿಗಳು ಹೊರದೇಶಗಳಲ್ಲಿ ಶೆಲ್ ಅಂದರೆ ಹುಸಿ ಕಂಪೆನಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಿವೆ ಮತ್ತು ಅವುಗಳು ಭಾರತದಿಂದ ನಿಯಂತ್ರಿಸಲ್ಪಡುತ್ತವೆ ಎಂಬುದನ್ನು ಪ್ಯಾರಡೈಸ್ ಪೇಪರ್ಸ್ ಬಹಿರಂಗಪಡಿಸಿದೆ. ಭಾರತೀಯ ಕಂಪೆನಿಗಳ ಸ್ವತ್ತುಗಳನ್ನು ಅವರ ಕಡಲಾಚೆಯ ಕಂಪನಿಗಳು ಪಡೆದುಕೊಂಡ ಸಾಲಗಳಿಗೆ ಅಡ ಇಟ್ಟ ಮಾಹಿತಿಯನ್ನು ಭಾರತೀಯ ನಿಯಂತ್ರಕರಿಗೆ ತಿಳಿಸಿಲ್ಲ. ದುಪ್ಪಟ್ಟು ತೆರಿಗೆ ಹಾಕದಂತೆ ಮಾಡುವ ದ್ವಿಪಕ್ಷೀಯ ಒಪ್ಪಂದಗಳಲ್ಲಿ ಈ ಕುರಿತ ಅಂಶಗಳು ಇಲ್ಲದಿರುವುದರಿಂದ ಇದು ಸಾಧ್ಯವಾಗಿದೆ.

ಭಾರತದ ನಿಯಂತ್ರಣ ಪ್ರಾಧಿಕಾರಗಳಿಗೆ ತೆರಿಗೆ ಸೋರಿಕೆ ನಿಲ್ಲಿಸಲು ಅಗತ್ಯ ಮಾಹಿತಿಗಳನ್ನು ಪಡೆಯಲು ಮತ್ತು ಕ್ರಿಮಿನಲ್ ಕ್ರಮ ತೆಗೆದುಕೊಳ್ಳಲು ಈ ಪ್ಯಾರಡೈಸ್ ಪೇಪರ್‌ಗಳು ನೆರವಾಗಬಲ್ಲವು.

ಮೋದಿ ಸರ್ಕಾರದ ಕಪಟ ನಾಟಕ

ಆದಾಯಗಳು ಮತ್ತು ಸಂಪತ್ತಿನ ಮೇಲೆ ತೆರಿಗೆ ತಪ್ಪಿಸುವ ಮೂಲಕ ಸಂಪಾದಿಸಿದ ಕಪ್ಪು ಹಣ ನಗದು ರೂಪದಲ್ಲಿ ಅಡಗಿರುವುದಕ್ಕಿಂತ ಎಷ್ಟೋ ಹೆಚ್ಚು ಪ್ರಮಾಣದಲ್ಲಿ ರಹಸ್ಯ ವ್ಯವಹಾರಗಳ ಜಾಲಗಳಲ್ಲೇ ಅಡಗಿದೆ ಎಂಬುದನ್ನು ಪ್ಯಾರಡೈಸ್ ಪೇಪರ್ಸ್ ಸಾಬೀತು ಮಾಡಿದೆ. ಆದ್ದರಿಂದ, ಸರ್ಕಾರವು ಭಾರತದ ಹಣಕಾಸು ನಿಯಂತ್ರಕರಿಗೆ ಮಾಹಿತಿ ಸಿಗದಂತೆ ಮಾಡಿರುವ ಲೋಪಗಳನ್ನು ಸರಿಪಡಿಸಲು ಮುತುವರ್ಜಿ ವಹಿಸಬೇಕು ಎಂಬುದು ಸ್ಪಷ್ಟ. ಆರ್ಥಿಕತೆಯ ಮೇಲೆ ಮತ್ತು ನಿರ್ದಿಷ್ಟವಾಗಿ ಬಡವರ ಮೇಲೆ ಹಾನಿಕಾರಕ ಪರಿಣಾಮ ಬೀರಿರುವ ನೋಟು ರದ್ಧತಿ ಸರಕಾರವನ್ನು ಬೆಂಬಲಿಸುವ ಶ್ರೀಮಂತರ ಮತ್ತು ಬಲಿಷ್ಟ ಕಾರ್ಪೊರೇಟ್‌ಗಳ ಕಳ್ಳತನಗಳನ್ನು ಮರೆಮಾಚುವ ಕಪಟ ನಾಟಕವೇ ಆಗಿದೆ.

2016 ಮತ್ತು 2017ರ ಹಣಕಾಸು ಕಾಯ್ದೆಗಳು ವಿದೇಶಿ ವಂತಿಗೆಗಳು ನಿಯಂತ್ರಣ ಕಾಯ್ದೆ ಮತ್ತು ಕಂಪನಿ ಕಾಯ್ದೆಗಳಲ್ಲಿ ಬದಲಾವಣೆ ತಂದು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳ ಮೇಲಿನ ಮಿತಿಯನ್ನು ತೆಗೆದಿವೆ, ವಿದೇಶಿ ಮತ್ತು ಕಾರ್ಪೊರೇಟ್ ನಿಧಿಗಳು ಈ ರಾಜಕೀಯ ಪಕ್ಷಗಳ ತಿಜೋರಿಗಳನ್ನು ತುಂಬಲು ಹರಿದು ಬರಲು ಅವಕಾಶ ಮಾಡಿಕೊಟ್ಟಿವೆ, ಹಾಗೂ ಇಂತಹ ದೇಣಿಗೆ ಪಡೆಯುವವರ ಹೆಸರುಗಳನ್ನು ತಿಳಿಸಬೇಕಾಗಿಲ್ಲ ಎಂಬ ಅವಕಾಶವನ್ನೂ ಕಲ್ಪಿಸಿವೆ.

‘ಜಾಗತಿಕ ಹಣಕಾಸಿನ ಧೀರ ಹೊಸ ಪ್ರಪಂಚವು’ ಸಾರ್ವಜನಿಕ ಬೊಕ್ಕಸದ ಮೇಲೆ ವಿಧ್ವಂಸಕ ಪ್ರಭಾವ ಬೀರಿದೆ, ಕಾರ್ಪೊರೇಟ್‌ಗಳಿಗೆ ರಾಜಕೀಯ ಪ್ರಕ್ರಿಯೆಯ ಮತ್ತು ಸರ್ಕಾರ ರಚನೆಯ ಮೇಲೆ ಬಲವಾದ ಹತೋಟಿ ಹೊಂದಲು ಸೌಕರ್ಯ ಮಾಡಿಕೊಟ್ಟಿದೆ ಎಂಬುದನ್ನು ಪ್ಯಾರಡೈಸ್ ಪೇಪರ್ಸ್ ಪ್ರಕಟಗೊಳಿಸಿವೆ.

ಹಾಗಾಗಿ, ನೋಟು ರದ್ಧತಿ ಕಪ್ಪು ಹಣದ ವಿರುದ್ಧ ಸರ್ಕಾರವು ಒಂದು ಗಂಭೀರ ಯುದ್ಧ ನಡೆಸುತ್ತಿದೆ ಎಂಬ ಭಾವನೆ ಮೂಡಿಸಿ ಜನಗಳ ದಾರಿ ತಪ್ಪಿಸುವ ಒಂದು ಕಸರತ್ತು. ಪ್ರತಿಯೊಂದು ರೀತಿಯಲ್ಲೂ ಶ್ರೀಮಂತರು ಮತ್ತು ಬಲಾಢ್ಯರು ಅದರ ಲಾಭ ಪಡೆದರು ಮತ್ತು ಬಡವರು ಅದರ ಬಲಿಪಶುಗಳಾದರು ಸರ್ಕಾರದ ಆಷಾಢಭೂತಿತನ ಈ ಅನುಭವಗಳಿಂದ ತುಂಬಾ ಸ್ಪಷ್ಟವಾಗಿ ಕಾಣುತ್ತಿದೆ. ●

ಕೇರಳದಾದ್ಯಂತ ವರ್ಣರಂಜಿತ 'ವಿಜ್ಞಾನಕ್ಕಾಗಿ ರ್‍ಯಾಲಿ'



ನವಂಬರ್ 14 ರಂದು ಕೇರಳದ 14 ಜಿಲ್ಲಾ ಮುಖ್ಯಾಲಯಗಳಲ್ಲಿ ವರ್ಣರಂಜಿತ ಮೆರವಣಿಗೆಗಳು ಮತ್ತು ಸಾರ್ವಜನಿಕ ಸಭೆಗಳೊಂದಿಗೆ 'ವಿಜ್ಞಾನಕ್ಕಾಗಿ ಕೇರಳ ರ್‍ಯಾಲಿ' ಎಂಬ ಒಂದು ವಾರದ ಕಾರ್ಯಕ್ರಮ ಸಮಾರೋಪಗೊಂಡಿತು. ನವಂಬರ್ 7ರಂದು 'ರಾಷ್ಟ್ರೀಯ ವಿಜ್ಞಾನ ದಿನ'ವೆಂದು ಆಚರಿಸಲಾಗುವ ಸಿವಿ ರಾಮನ್ ಜನ್ಮದಿನದಂದು ಇದು ಆರಂಭವಾಗಿತ್ತು.

ಕೇರಳ ರಾಜ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಮಂಡಳಿ, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್(ಕೆಎಸ್‌ಎಸ್‌ಪಿ) ಮತ್ತು ರಾಜ್ಯ ಗ್ರಂಥಾಲಯ ಮಂಡಳಿ 'ವೈಜ್ಞಾನಿಕ ಮನೋಭಾವ ವಾರ'ದಲ್ಲಿ ಜಂಟಿಯಾಗಿ ಈ ಒಂದು ವಾರದ ಕಾರ್ಯಕ್ರಮವನ್ನು ಸಂಘಟಿಸಿದ್ದವು. ಇದರಲ್ಲಿ ರಾಜ್ಯಾದ್ಯಂತ ಸಾವಿರಾರು ಜನರು ಭಾಗವಹಿಸಿದರು.

ಆರೆಸ್ಸೆಸ್–ಬಿಜೆಪಿಯೊಂದಿಗೆ ಸಂಬದ್ಧವಾದ ಸಂಘಟನೆಗಳು ಮತ್ತು ರಾಜಕೀಯ ಮುಖಂಡರು ಮತ್ತು ಭಾರತದ ವಿವಿಧೆಡೆಗಳಲ್ಲಿ ಸರಕಾರೀ ಸಂಸ್ಥೆಗಳೂ ಕಂದಾಚಾರ, ಖೋಟಾ ವಿಜ್ಞಾನ ಮತ್ತು ಮೂಢನಂಬಿಕೆಗಳನ್ನು ಪ್ರೋತ್ಸಾಹಿಸುತ್ತಿರುವ ಸಂದರ್ಭದಲ್ಲಿ ಈ ವಾರಾಚರಣೆ ಮತ್ತು ರ್‍ಯಾಲಿ ನಡೆದಿದೆ.

ರಾಜ್ಯ ಮಟ್ಟದ ಸಮಾರೋಪ ಸಮಾರಂಭವನ್ನು ಕೊಹಿಕ್ಕೋಡ್‌ನಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಉದ್ಘಾಟಿಸುತ್ತ "ವೈಜ್ಞಾನಿಕ ಮನೋಭಾವ ಸಮಾಜದಲ್ಲಿ ಸಾಮಾನ್ಯ ಪ್ರಜ್ಞೆಯಾಗಬೇಕು, ಪ್ರತಿಯೊಂದನ್ನೂ ಪ್ರಶ್ನಿಸ ಬಯಸುವುದು ಅದರ ಆಧಾರ" ಎಂದರು.

ಈ ಸಂದರ್ಭದಲ್ಲಿ ರಾಜ್ಯಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಬಹಳಷ್ಟು ಕಾಲೇಜುಗಳಲ್ಲಿ "ವಿಶ್ವ, ಜೀವನ ಮತ್ತು ಹವಾಮಾನ ಬದಲಾವಣೆ", "ವಿಜ್ಞಾನದಲ್ಲಿ ಮಹಿಳೆಯರು", ಈ ವಿಷಯಗಳ ಮೇಲೆ ತರಗತಿಗಳು ಮತ್ತು ವಿಚಾರಸಂಕಿರಣಗಳು ನಡೆದವು. ಅಗಸ್ತಾ ಅದಾ ಕಿಂಗ್–ನೋಯೆಲ್, ಅಗ್ನಸ್ ಪೊಕೆಲ್ಸ್, ಅನ್ನಾ ಮನಿ, ಅಸೀಮಾ ಚಟರ್ಜಿ, ಗೆರ್ಟಿ ಥೆರೆಸಾ ಕೋರಿ, ಹೆರಿಯಟ್ ಬ್ರುಕ್ಸ್, ಐರಿನ್ ಜೋಲಿಯೆತ್ ಕ್ಯೂರಿ, ಜೊಸೆಲಿನ್ ಬೆಲ್ ಬರ್ನೆಲ್, ರಿಟಾ ಲೆವಿ–ಮೋತಾಲ್ಸಿನಿ, ವೆರ ರುಬಿನ್, ಬಿ.ವಿಜಯಲಕ್ಷ್ಮಿ, ಕಮಲ ರಣದಿವೆ ಈ ಮಹಿಳಾ ವಿಜ್ಞಾನಿಗಳ ಕೃತಿ ಮತ್ತು ಸಾಧನೆಗಳನ್ನು ನೆನಪಿಸಿಕೊಳ್ಳಲಾಯಿತು.

'ವಿಜ್ಞಾನ ಕಿಂಡಿ' ಕಾರ್ಯಕ್ರಮದ ಭಾಗವಾಗಿ ಹಲವು ಸಂಶೋಧನಾ ಸಂಸ್ಥೆಗಳು, ಪ್ರಯೋಗಾಲಯಗಳು ಮತ್ತು ಕಾಲೇಜುಗಳನ್ನು ಜನಸಾಮಾನ್ಯರಿಗೆ ತೆರೆದಿಡಲಾಯಿತು. ಶಾಲಾ ಮಕ್ಕಳನ್ನು 'ವಿಜ್ಞಾನ ಪ್ರವಾಸ'ದ ಭಾಗವಾಗಿ ತಾರಾಲಯ ಮತ್ತು ವೈಜ್ಞಾನಿಕ ಸಂಸ್ಥೆಗಳಿಗೆ ಕರೆದುಕೊಂಡು ಹೋಗಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಜನಗಳ ವಿಜ್ಞಾನ ಬೆಂಬಲಾರ್ಥ ಸಮಾವೇಶಗಳನ್ನು "ವಿಜ್ಞಾನಕ್ಕೆ ಬೆಂಬಲವಾಗಿ ಕಲಾವಿದರು', 'ವಿಜ್ಞಾನಕ್ಕೆ ಬೆಂಬಲವಾಗಿ ದಾದಿಯರು" ,'ವಿಜ್ಞಾನಕ್ಕೆ ಬೆಂಬಲವಾಗಿ ಹಾಡುಗಾರರು" ಇತ್ಯಾದಿ ಗಳನ್ನು ನಡೆಸಲಾಯಿತು.

ಚುಚ್ಚುಮದ್ದುಗಳನ್ನು ಹಾಕಿಸಿಕೊಳ್ಳುವುದರ ಮಹತ್ವ, ವಿಜ್ಞಾನಿಗಳೊಡನೆ ಸಂದರ್ಶನ ಮುಂತಾದವುಗಳ ಆನ್‌ಲೈನ್ ವೀಡಿಯೊಗಳು ಪ್ರಸಾರವಾದವು. ಖೋಟಾವಿಜ್ಞಾನವನ್ನು, ಮೂಢ ದಾವೆಗಳನ್ನು ವಿಮರ್ಶಿಸುವ ಹಾಸ್ಯ ಪೋಸ್ಟರುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

ಕ್ಯಾಂಪಸ್ ವಿಜ್ಞಾನ ಉತ್ಸವ ಮುಂತಾದ ಕಾರ್ಯಕ್ರಮಗಳು ವರ್ಷವಿಡೀ ನಡೆಯುತ್ತವೆ ಎಂದು ಹೇಳಲಾಗಿದೆ.



ರಾಜ್ಯಗಳ ಸುತ್ತ

ತ್ರಿಪುರಾದಲ್ಲಿ ಬಂಡುಕೋರ ಗುಂಪಿನೊಂದಿಗೆ ಮಾತುಕತೆ: ಕೇಂದ್ರ ಸರಕಾರದ ಅಸಡ್ಡೆ

ನ್ಯಾಶನಲ್ ಲಿಬರೇಶನ್ ಫ್ರಂಟ್ ಆಫ್ ತ್ರಿಪುರ(ಎನ್‌ಎಲ್‌ಎಫ್‌ಟಿ) ಯೊಂದಿಗೆ ಶಾಂತಿ ಮಾತುಕತೆಯೆಂಬುದು ಕೇಂದ್ರ ಸರಕಾರದ ಮುತುವರ್ಜಿಯ ಅಭಾವದಿಂದಾಗಿ ಸಾಧ್ಯವಾಗಿಲ್ಲ ಎಂದು ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಹೇಳಿದ್ದಾರೆ. ಅವರು ವಿಧಾನಸಭೆಯಲ್ಲಿ ಎತ್ತಿದ ಪ್ರಶ್ನೆಗೆ ಉತ್ತರಿಸುತ್ತ ಈ ವಿಷಯ ತಿಳಿಸಿದರು.

ಎನ್‌ಎಲ್‌ಎಫ್‌ಟಿ 1989ರಲ್ಲಿ ರಚನೆಗೊಂಡ ಗುಂಪು. ಈಗ ಅದು ಈ ರಾಜ್ಯದಲ್ಲಿ ಸಕ್ರಿಯವಾಗಿರುವ ಏಕೈಕ ಬಂಡುಕೋರ ಗುಂಪು. ಅದರ ಅಡಗುತಾಣ ಪಕ್ಕದ ಬಾಂಗ್ಲಾದೇಶ್‌ನ ಚಿತ್ರಗಾಂಗ್ ಪರ್ವತ ಪ್ರದೇಶದಲ್ಲಿದೆ ಎನ್ನಲಾಗಿದೆ.

ಎನ್‌ಎಲ್‌ಎಫ್‌ಟಿಯ ಬಿಸ್ವಮೋಹನ್ ಗುಂಪು ಶಾಂತಿ ಮಾತುಕತೆ ಆರಂಭಸಲು ಕೇಳಿತ್ತು. ಈ ಬಗ್ಗೆ ಕೇಂದ್ರ ಸರಕಾರಕ್ಕೆ ತಿಳಿಸಲಾಯಿತು. ಕೇಂದ್ರ ಸರಕಾರ ತ್ರಿಪಕ್ಷೀಯ ಮಾತುಕತೆಗಳಲ್ಲಿ ರಾಜ್ಯ ಸರಕಾರವೂ ಭಾಗಿಯಾಗಬೇಕು ಎಂದಿತು. ರಾಜ್ಯ ಸರಕಾರ ಒಪ್ಪಿತು. ತನ್ನ ಪೊಲಿಸ್ ಮಹಾನಿರ್ದೇಶಕ(ಡಿಜಿಪಿ)ರನ್ನು ಮತ್ತು ಬುಡಕಟ್ಟು ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳನ್ನು ರಾಜ್ಯ ಸರಕಾರ ದಿಲ್ಲಿಗೆ ಮಾತುಕತೆಗೆ ಕಳಿಸಿತು. ಆದರೆ ಈ ಸಭೆಗಳಲ್ಲಿ ಬಿಎಸ್‌ಎಫ್ ಮಹಾನಿರ್ದೇಶಕರು ಬಿಟ್ಟರೆ ಬೇರಾವ ಕೇಂದ್ರ ಸರಕಾರದ ಉನ್ನತ ಅಧಿಕಾರಿಗಳು ಭಾಗವಹಿಸಿಲ್ಲ.. ಎನ್‌ಎಲ್‌ಎಫ್‌ಟಿ ಈ ವರ್ಷ ಮೀತಿಂಗಳಲ್ಲಿ ಹೊಸ ಮುಖಂಡರನ್ನು ಹೆಸರಿಸಿತು. ಅವರು ಐಪಿಎಫ್‌ಟಿ ಯಂತೆ ಮೂಲನಿವಾಸಿ ಸಮುದಾಯಗಳಿಗೆ ಪ್ರತ್ಯೇಕ ರಾಜ್ಯ ಬೇಕೆಂದು ಹೇಳುತ್ತಿದ್ದಾರೆ. ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಕೇಂದ್ರ ಸರಕಾರಕ್ಕೆ ಪತ್ರ ಬರೆದರು. ಆದರೆ ಅಲ್ಲಿಂದ ಏನೂ ಉತ್ತರ ಬಂದಿಲ್ಲ ಎಂದು ಮುಖ್ಯಮಂತ್ರಿಗಳು ವಿಧಾನಸಭೆಗೆ ತಿಳಿಸಿದ್ದಾರೆ.

ಎಟಿಟಿಎಫ್‌ನ ಬಂಧಿತ ಮುಖ್ಯಸ್ಥ ರಂಜಿತ್ ದೇಬಬರ್ಮರವರ ಪತ್ನಿ ಮತ್ತು ಮಗಳ ಶರಣಾಗತಿಯ ಕೋರಿಕೆಯ ಬಗ್ಗೆ ಉತ್ತರಿಸುತ್ತ, ಇವರಿಬ್ಬರೂ ಈಗ ಬಾಂಗ್ಲಾದೇಶದಲ್ಲಿದ್ದಾರೆ, ಇದು ಎರಡು ದೇಶಗಳ ನಡುವಿನ ಪ್ರಶ್ನೆಯಾದ್ದರಿಂದ ಕೇಂದ್ರ ಸರಕಾರ ಮುತುವರ್ಜಿ ವಹಿಸದೆ ರಾಜ್ಯ ಸರಕಾರ ಏನೂ ಮಾಡುವಂತಿಲ್ಲ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕಾಶ್ಮೀರ:ರಾಜಕೀಯ ಮಾತುಗಳ ಅಬ್ಬರದಲ್ಲಿ ದೈನಂದಿನ ಪ್ರಶ್ನೆಗಳ ಉಪೇಕ್ಷೆ–ತರಿಗಾಮಿ

ಜಮ್ಮು ಮತ್ತು ಕಾಶ್ಮೀರದ, ಅದರಲ್ಲೂ ಕಾಶ್ಮೀರ ಕಣಿವೆಯ ಜನಗಳು ವಿದ್ಯುಚ್ಛಕ್ತಿ ನೀರು ಪೂರೈಕೆ, ಆರೋಗ್ಯ ಸೇವೆಗಳ ಅಭಾವದಿಮದ ನರಳುತ್ತಿರುವಾಗ ಆಳುವ ಪಕ್ಷಗಳು ಅಬ್ಬರದ ರಾಜಕೀಯ ಮಾತುಗಳ ಹಿಂದೆ ಈ ಮೂಲ ಪ್ರಶ್ನೆಗಳನ್ನು ಮರೆಮಾಚುತ್ತಿದ್ದಾರೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿ ಆಪಾದಿಸಿದ್ದಾರೆ.

ಇದು ದಶಕಗಳಿಂದ ನಡೆಯುತ್ತಿದೆ. ಇಲ್ಲಿ ಬಂದ ಸರಕಾರಗಳೆಲ್ಲ ರಾಜಕೀಯ ಅಬ್ಬರವನ್ನು ಬಡಿದೆಬ್ಬಿಸುತ್ತಾರೆ. ಅದರಲ್ಲಿ ಈ ಸರಕಾರಗಳ ಅಕ್ರಮಗಳು, ವಿಫಲತೆಗಳು ಮುಚ್ಚಿ ಹೋಗುತ್ತಿವೆ. ಹಿಂದಿನ ಬಜೆಟಿನಲ್ಲಿ ನೀಡಿದ ಹಣಗಳಲ್ಲಿ ಬಹುಪಾಲು ಇನ್ನೂ ಬಳಕೆಯಾಗಿಲ್ಲ. ಇದರಿಂದಾಗಿ ಚಾಲ್ತಿಯಲ್ಲಿರುವ ಕಾರ್ಯಕ್ರಮಗಳು, ಯೋಜನೆಗಳು ಒಂದೋ ನಿಂತು ಹೋಗುತ್ತಿವೆ ಅಥವ ಆಮೆಗತಿಯಲ್ಲಿ ಸಾಗುತ್ತಿವೆ ಎಂದು ಅವರು ಹೇಳುತ್ತಾರೆ.

ವಿದ್ಯುತ್ ಉತ್ಪಾದನೆ, ನೀರು ಪೂರೈಕೆ, ಮತ್ತು ಆರೋಗ್ಯ ವಲಯದಲ್ಲಿನ ಪ್ರಮುಖ ಯೋಜನೆಗಳು ನೆನಗುದಿಗೆ ಬಿದ್ದಿವೆ, ರಾಜ್ಯ ಸರಕಾರ ಅವನ್ನು ಉಪೇಕ್ಷಿಸಿದೆ. 'ಪುನರ್‌ರಚಿತ ವೇಗವರ್ಧಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ ಕಾರ್ಯಕ್ರಮ' (ಆರ್–ಎಪಿಡಿಆರ್‌ಪಿ) ಎಂಬ ಯೋಜನೆಯಲ್ಲಿ ಕೆಲಸ ಪುನರಾರಂಭವಗುವಂತೆ ಮಾಡುವಲ್ಲಿ ರಾಜ್ಯ ಸರಕಾರ ವಿಫಲವಾಗಿದ್ದು ಅದು ಮುರಿದು ಬಿದ್ದಿದೆ. ಇದರಿಂದಾಗಿ ಬರುವ ಚಳಿಗಾಲದಲ್ಲಿ ಜನಗಳು ಭಾರೀ ತೊದರೆಗಳನ್ನು ಅನುಭವಿಸಬೇಕಾಗುತ್ತದೆ.


ಕೇಂದ್ರ ಸರಕಾರ ರಾಷ್ಟ್ರೀಯ ಕುಡಿಯುವ ನೀರಿನ ಕಾರ್ಯಕ್ರಮ(ಎನ್‌ಆರ್‌ಡಿಡಬ್ಲ್ಯುಪಿ)ನಲ್ಲಿ ಭಾರೀ ಕಡಿತ ಮಾಡಿರುವುದರಿಂದ ಹಲವು ನೀರು ಪೂರೈಕೆ ಯೋಜನೆಗಳು ಅರ್ಧಕ್ಕೇ ನಿಲ್ಲುವಂತಾಗಿದೆ. 1638 ನೀರು ಪೂರೈಕೆ ಯೋಜನೆಗಳು ಈ ವಿಪರೀತ ಹಣ ಕಡಿತದಿಂದ ತೊಂದರೆಗೊಳಗಾಗಿವೆ.


ಗ್ರಾಮೀಣ ಅಭಿವೃದ್ಧಿ ಯೋಜನೆ, ಸ್ವಚ್ಛ ಭಾರತ್ ಮಿಶನ್, ಮನರೇಗ ಮತ್ತು 14ನೇ ಹಣಕಾಸು ಇವೆಲ್ಲ ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ಹಲವು ಕ್ಷೇತ್ರಗಳಲ್ಲಿ ಮಾಡಿರುವ ವೆಚ್ಚ ಬಹಳ ಕಡಿಮೆ. ಅದೇ ರಿತಿ ನಗರಾಭಿವೃದ್ಧಿ ಇಲಾಖೆ ಕುಸಿದು ಬಿದ್ದಿದೆ. 'ಸ್ಮಾರ್ಟ್ ಸಿಟಿ'ಗಳ ಘೋಷಣೆ ಕಾಗದದ ಮೇಲಷ್ಟೇ ಇದೆ, ಜಮ್ಮು ಮತ್ತು ಶ್ರೀನಗರದಲ್ಲಿ ಚರಂಡಿ ವ್ಯವಸ್ಥೆ ತುಂಬಾ ಕೆಟ್ಟದಾಗಿದೆ ಎನ್ನುತ್ತಾರೆ ತರಿಗಾಮಿ.

ಕೆಟ್ಟ ನಿರ್ವಹಣೆ ಮತ್ತು ಕೆಟ್ಟ ಆಡಳಿತದಿಂದಾಗಿ ಅಭಿವೃದ್ಧಿಗೆ ಕೊಟ್ಟಿರುವ ಅಲ್ಪಸ್ವಲ್ಪ ಹಣವೂ ವ್ಯರ್ಥವಾಗುತ್ತಿದೆ ಅಥವ ದುರ್ಬಳಕೆಯಾಗುತ್ತಿದೆ. ಸರಕಾರೀ ಸಂಘಟನೆಗಳು ಅವನ್ನು ಹಿಂದಕ್ಕೆ ಕೊಡುತ್ತಿವೆ. ರಾಜ್ಯದಲ್ಲಿನ ರಾಜಕೀಯ ಅಸ್ಥಿರತೆಗೆ ಅಭಿವೃದ್ಧಿ ಚಟುವಟಿಕೆಗಳು ಬಲಿಯಾಗಿವೆ.

ಸರಕಾರ ಈ ರೀತಿ ನೀಡಿದ ಹಣಗಳು ಏಕೆ ಲೋಪಗೊಳ್ಳುತ್ತಿವೆ, ಅವನ್ನು ಏಕೆ ಹಿಂದೆ ಕೊಡಲಾಗುತ್ತಿದೆ ಎಂದು ತನಿಖೆ ನಡೆಸಲು ಒಂದು ಸಮಿತಿಯನ್ನು ನೇಮಿಸಬೇಕು, ಯಾವುದೇ ನೈಜ ಕಾರಣಗಳಿಲ್ಲದೆ ಹಣವನ್ನು ಉದ್ದೇಶಪೂರ್ವಕವಾಗಿ ಹಿಂದೆ ಕೊಟ್ಟಿರುವ ಅಧಿಕಾರಿಗಳನ್ನು ನಿಷ್ಪ್ರಯೋಜಕರೆಂದು ಸೇವೆಯಿಂದ ವಜಾ ಮಾಡಬೇಕು ಎಂದು ತರಿಗಾಮಿ ಆಗ್ರಹಿಸಿದ್ದಾರೆ.

ನವಂಬರ್ 12ರಂದು ಅಸ್ಸಾಂ ರಾಜಧಾನಿ ಗುವಾಹಾಟಿಯಲ್ಲಿ ಒಂದು ಬೃಹತ್ ರೈತ ರ್‍ಯಾಲಿ ನಡೆಯಿತು. ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ(ಎಐಕೆಎಸ್‌ಸಿಸಿ) ಬಾವುಟದಡಿಯಲ್ಲಿ ನಡೆದ ಈ ರ್‍ಯಾಲಿಯನ್ನುದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಎನ್‌ಎಪಿಎಂ ಮುಖಂಡ ಡಾ.ಸುನೀಲಂ, ಸ್ವಾಭಿಮಾನ್ ಶೇತಕರಿ ಸಂಘಟನ್‌ನ ರಾಜು ಶೆಟ್ಟಿ, ಅಸ್ಸಾಂ ಕಿಸಾನ್ ಸಭಾದ ಕಾರ್ಯದರ್ಶಿ ಟಿಕೆನ್ ದಾಸ್ ಮತ್ತಿತರರು ಮಾತನಾಡಿದರು. ನವಂಬರ್ 20ರಂದು ದಿಲ್ಲಿಯಲ್ಲಿ ನಡೆಯಲಿರುವ ಕಿಸಾನ್ ಸಂಸದ್‌ನಲ್ಲಿ ರಾಜ್ಯದಿಂದ ರೈತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು.







ಸೋವಿಯೆಟ್ ಒಕ್ಕೂಟದ 10 ಅದ್ಭುತ ಸಾಧನೆಗಳು

ಅದ್ಭುತ –3 ಎಲ್ಲರಿಗೂ ಆರೋಗ್ಯದ ಮೂಲಭೂತ ಹಕ್ಕು

(ಸಾರ್ವತ್ರಿಕ ಸಮಗ್ರ ಉಚಿತ ಆರೋಗ್ಯ ಸೇವೆ ಜಾರಿ)

ಇದು ರಶ್ಯನ್ ಕ್ರಾಂತಿಯ ಶತಮಾನೋತ್ಸವ ವರ್ಷ. ನೂರು ವರ್ಷಗಳ ಹಿಂದೆ ನಡೆದ ಮೊದಲ ಸಮಾಜವಾದಿ ಕ್ರಾಂತಿ ನೆನಪು ಮಾಡಿಕೊಳ್ಳುವ ಸಮಯ. ಈ ದಿನ ನೆನಪಿಸಿಕೊಳ್ಳುವುದು ಅದರ ಚಾರಿತ್ರಿಕ ಮಹತ್ವಕ್ಕೆ ಮಾತ್ರವಲ್ಲ. 1917ರ ಕ್ರಾಂತಿಯ ನಂತರ ಸ್ಥಾಪಿತವಾದ ಸೋವಿಯೆಟ್ ಒಕ್ಕೂಟದ ಸಾಧನೆಗಳಿಗಾಗಿ, ಅವು ಜಗತ್ತಿನ ದುಡಿಯುವ ಜನತೆಯ ಜೀವನದ ಮೇಲೆ ಬೀರಿದ ಇನ್ನೂ ಬೀರುತ್ತಿರುವ ಪರಿಣಾಮಗಳಿಗಾಗಿ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗೆ ಸೆಡ್ಡು ಹೊಡೆದು ಅವುಗಳ ಸತತ ದಾಳಿಗಳ ನಡುವೆ 74 ವರ್ಷಗಳ ಕಾಲ ಬೆಳೆದು ತೋರಿಸಿದ 10 ಪ್ರಮುಖ ಅದ್ಭುತ ಸಾಧನೆಗಳಿಗಾಗಿ, ಜಗತ್ತಿನ ಜನತೆಗೆ ಕೊಟ್ಟ ಕೊಡುಗೆಗಳಿಗಾಗಿ ನಾವು ನೆನಪಿಸಿಕೊಳ್ಳಬೇಕು. ಹಿಂದೆ ಮೊದಲ 2 ಅದ್ಭುತಗಳ ಬಗ್ಗೆ ನೋಡಿದ್ದೇವೆ. ಈ ವಾರ ಅದ್ಭುತ–3 ರ ಬಗ್ಗೆ ನೋಡೋಣ. ಈ ವಾರ ಬಹುಚರ್ಚಿತವಾಗಿರುವ ಕೆ.ಪಿ.ಎಂ.ಇ. ಕಾಯಿದೆಯ ಬಗ್ಗೆ ವಿವಾದದ ಸಂದರ್ಭದಲ್ಲಿ, ಹಲವು ದೇಶಗಳ ಹಿಂದೆನೇ ಸೋವಿಯೆಟ್ ಒಕ್ಕೂಟದಲ್ಲಿ ಎಲ್ಲರಿಗೂ ಆರೋಗ್ಯದ ಮೂಲಭೂತ ಹಕ್ಕು ಕೊಟ್ಟು, ಸಾರ್ವತ್ರಿಕ ಸಮಗ್ರ ಉಚಿತ ಆರೋಗ್ಯ ಸೇವೆ ಜಾರಿ ಮಾಡಿದ್ದು ಅದ್ಭುತದಂತೆ ಕಾಣಬಹುದು. ಇಂತಹ ಅದ್ಭುತ ಹೇಗೆ ಕಾರ್ಯಸಾಧ್ಯವಾಯಿತು? ಅದರಿಂದ ನಾವು ಇಂದು ಏನನ್ನು ಕಲಿಯಬಹುದು ಎಂದು ನೋಡೋಣ.

ಆರೋಗ್ಯವನ್ನು ಮೂಲಭೂತ ಹಕ್ಕಾಗಿಸಿ ಸಾರ್ವತ್ರಿಕ ಸಮಗ್ರ ಉಚಿತ ಆರೋಗ್ಯ ಸೇವೆಯನ್ನು ಜಗತ್ತಿನಲ್ಲೇ ಮೊದಲ ಬಾರಿಗೆ ಜಾರಿ ಮಾಡಿದ ಮೊದಲ ದೇಶ ಸೋವಿಯೆಟ್ ಒಕ್ಕೂಟ. ಎಲ್ಲರಿಗೂ ಹುಟ್ಟಿನಿಂದ ಸಾವಿನ ವರೆಗೆ ಎಲ್ಲಾ ರೀತಿಯ ಆರೋಗ್ಯ ಸೇವೆಯನ್ನು ಉಚಿತವಾಗಿ ಸೋವಿಯೆಟ್ ಒಕ್ಕೂಟದಲ್ಲಿ ಮೊದಲ ಬಾರಿಗೆ ಒದಗಿಸಲಾಯಿತು. 1918ರಲ್ಲಿ ಸೋವಿಯೆಟ್ ಸರಕಾರ ಆರಂಭಿಸಿದ ಆರೋಗ್ಯ ಇಲಾಖೆ ಜಗತ್ತಿನಲ್ಲೇ ಮೊದಲ ಅಂತಹ ಪ್ರಯತ್ನ. ಆ ವರೆಗೆ ಖಾಸಗಿಯಾಗಿದ್ದದ್ದನ್ನು "ಸಾರ್ವಜನಿಕ ವೈದ್ಯಕೀಯ" ಸೇವೆಯಾಗಿ ರೂಪಿಸಿ ಬೆಳೆಸಿದ ಕೀರ್ತಿ ಮೊದಲ ಸೋವಿಯೆಟ್ ಆರೋಗ್ಯ ಮಂತ್ರಿಯಾಗಿದ್ದ ಸೆಮಾಶ್ಕೊಗೆ ಸಲ್ಲುತ್ತದೆ. ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಸೋವಿಯೆಟ್ ಆರೋಗ್ಯ ಸೇವೆಯ ಪರಿಣಾಮವಾಗಿಯೇ, ಅಷ್ಟರವರೆಗೆ ಪೂರ್ಣವಾಗಿ ಖಾಸಗಿ ಮತ್ತು ಆರೋಗ್ಯ ವಿಮೆ ಆಧಾರಿತವಾಗಿದ್ದ ವ್ಯವಸ್ಥೆಯಲ್ಲಿ ಸಾರ್ವಜನಿಕ ಅನುದಾನದ ಪಾಲು ಗಣನೀಯವಾಗಿ ಹೆಚ್ಚಿತು. ಸೋವಿಯೆಟ್ ಸಾರ್ವತ್ರಿಕ ಸಮಗ್ರ ಉಚಿತ ಆರೋಗ್ಯ ಸೇವೆಗೆ ಹತ್ತಿರ ಬರುವ ಬ್ರಿಟಿಶ್ "ರಾಷ್ಟ್ರೀಯ ಆರೋಗ್ಯ ಸೇವೆ" ಜಾರಿಗೆ ಬಂದಿದ್ದು 1948ರಲ್ಲಿ ಪೂರ್ವ ಯುರೋಪಿನಲ್ಲಿ ಸಮಾಜವಾದಿ ಸರಕಾರಗಳು ಅಧಿಕಾರಕ್ಕೆ ಬಂದ ಮೇಲೆ ಎಂದು ಗಮನಿಸಬಹುದು. ಶಿಕ್ಷಣ, ಆರೋಗ್ಯ ಸೇವೆಗಳನ್ನು ಲಾಭದ ಹಿಂದೆ ಬಿದ್ದಿರುವ ಖಾಸಗಿ ವಲಯಕ್ಕೆ ಮಾರುಕಟ್ಟೆಯ ಮರ್ಜಿಗೆ ಬಿಟ್ಟಾಗ ಎಂತಹ ಭೀಕರ ಪರಿಸ್ಥಿತಿ ಉಂಟಾಗುತ್ತದೆ ಎಂದು ಭಾರತ ಸೇರಿದಂತೆ ಇಡೀ ಜಗತ್ತಿಗೆ ಅರಿವಾಗುತ್ತಿದೆ. ಸಮಾಜವಾದ ಒಪ್ಪದಿರುವವರಿಗೂ ಇವರೆರಡು ಕ್ಷೇತ್ರಗಳನ್ನು ಖಾಸಗಿಯವರಿಗೆ ಬಿಡುವುದು ಸರಿಯಲ್ಲ ಎಂದು ಅನಿಸಹತ್ತಿದೆ. ಅಮೆರಿಕದಲ್ಲೂ ಕನಿಷ್ಟ ಬಡವರಿಗೆ ಸಾರ್ವಜನಿಕ ಅನುದಾನದ ಆರೋಗ್ಯಸೇವೆ ರಾಜಕೀಯ ವಿಷಯವಾಗಿರುವಾಗ, ಸೋವಿಯೆಟ್ ಒಕ್ಕೂಟದ ಈ ವಿಶಿಷ್ಟ ಕೊಡುಗೆ ನೆನೆಸಿಕೊಳ್ಳುವುದು ಅಗತ್ಯ.

ರೋಗಕ್ಕೆ ಔಷಧಿ ಕೊಡುವ ಬದಲು ರೋಗ ತಡೆಗಟ್ಟುವುದಕ್ಕೆ ಆದ್ಯತೆ ಈ ವ್ಯವಸ್ಥೆಯಲ್ಲಿ. ಗರ್ಭಿಣಿಯ ಆರೈಕೆ ಕೇಂದ್ರ, ಪ್ರಸವ ಕೇಂದ್ರಗಳು–ಆಸ್ಪತ್ರೆಗಳು, ತಾಯಿ ಮತ್ತು ಮಕ್ಕಳ ವಿಶೇಷ ಕ್ಲಿನಿಕ್ ಗಳು, ಕ್ರೆಶ್, ಬಾಲವಾಡಿ, ಕಿಂಡರ್ ಗಾರ್ಟನ್ ಗಳ ವ್ಯಾಪಕ ಜಾಲದ ಮೂಲಕ – ಮಹಿಳೆಯರು ಮತ್ತು ಮಕ್ಕಳಿಗೆ ಸಮಗ್ರ ಆರೋಗ್ಯ ಸೇವೆ ಇದರ ಪ್ರಧಾನ ಅಂಶವಾಗಿತ್ತು. ಕಾರ್ಖಾನೆ, ಕೃಷಿ ಫಾರ್ಮು, ಮತ್ತು ಎಲ್ಲಾ ಕೆಲಸದ ಸ್ಥಳಗಳಲ್ಲಿ ಆರೋಗ್ಯಕರ ಸುರಕ್ಷಿತ ಕೆಲಸದ ಪರಿಸ್ಥಿತಿ ನಿರ್ಮಿಸುವುದು, ಕೆಲಸದ ಸ್ಥಳಗಳ ಸಾರ್ವಜನಿಕ ಸ್ಥಳಗಳ ನೈರ್ಮಲ್ಯ ಕಾಪಾಡುವುದು, ಪರಿಸರ (ನೆಲ ಜಲ ಗಾಳಿಗಳ) ಸಂರಕ್ಷಣೆ, ಸಾಂಕ್ರಾಮಿಕ (ಕ್ಷಯ ಇತ್ಯಾದಿ) ಮತ್ತು ಸಾಮಾಜಿಕ (ಅತಿ ಮದ್ಯಪಾನ) ರೋಗಗಳನ್ನು ತಡೆಗಟ್ಟುವುದು ಈ ಸಮಗ್ರ ಆರೋಗ್ಯ ಸೇವೆಯ ಭಾಗವಾಗಿತ್ತು.



*** ಶಿಶುಕೇಂದ್ರಗಳು ಮತ್ತು ಟ್ರಾಕ್ಟರುಗಳು ನಮ್ಮ ಹೊಸ ದೇಶದ ಚಾಲಕ ಶಕ್ತಿಗಳು : 1931 ಸೋವಿಯೆಟ್ ಪೋಸ್ಟರ್**

ಝಾರನ ರಶ್ಯಾದಲ್ಲಿ ಆರೋಗ್ಯ ಸ್ಥಿತಿ ಭೀಕರವಾಗಿತ್ತು ಎಂಬುದು ಸ್ವಯಂವಿದಿತ. ಪ್ರತಿ ವರ್ಷ 20 ಲಕ್ಷ ಮಕ್ಕಳು ಮರಣ ಹೊಂದುತ್ತಿದ್ದರು. 45ರಿಂದ 70 ಲಕ್ಷ ನಿರ್ಗತಿಕ ಮಕ್ಕಳು ಇದ್ದರು. ಇಂತಹ ಪರಿಸ್ಥಿತಿಯಿಂದ ಸೋವಿಯೆಟ್ ಆರೋಗ್ಯ ಸೇವಾ ವ್ಯವಸ್ಥೆ ಭಾರೀ ಬದಲಾವಣೆಗಳನ್ನು ತಂದಿತು. ಶಿಶು ಮರಣ ದರ (ಪ್ರತಿ ಸಾವಿರ ಹುಟ್ಟಿಗೆ) ವನ್ನು 274 ರಿಂದ 1975ರ ಹೊತ್ತಿಗೆ 23ಕ್ಕೆ ಇಳಿಸಲಾಯಿತು. ಸರಾಸರಿ ಆಯುಷ್ಯ 30 ವರ್ಷ ಇದ್ದಿದ್ದು 1975ರ ಹೊತ್ತಿಗೆ 70.4 ವರ್ಷ ((ಅಮೆರಿಕಕ್ಕಿಂತ 8 ತಿಂಗಳು ಕಡಿಮೆ, ಯುರೋಪಿಯನ್ ಅಭಿವೃದ್ಧ ದೇಶಗಳಿಂದ 1–2 ವರ್ಷ ಕಡಿಮೆ) ಆಗಿತ್ತು. ಇದನ್ನು ಆರೋಗ್ಯ ಸೇವೆಯ ಸಂಪನ್ಮೂಲಗಳ ಯೋಜಿತ ಸತತ ವಿಸ್ತರಣೆಯ ಮೂಲಕ ಸಾಧಿಸಲಾಯಿತು. 1914 ರಿಂದ 1932(ಮೊದಲನೆಯ ಯೋಜನೆ ಕೊನೆಗೆ) ಅವಧಿಯಲ್ಲೇ ವೈದ್ಯರ ಸಂಖ್ಯೆ 19.8 ರಿಂದ 76 ಸಾವಿರಕ್ಕೇರಿತು. ಆಸ್ಪತ್ರೆ ಹಾಸಿಗೆಗಳು 175 ರಿಂದ 340 ಸಾವಿರಕ್ಕೆ, ನರ್ಸರಿಗಳ ಸಂಖ್ಯೆ 11ರಿಂದ 575 ಸಾವಿರಕ್ಕೆ ಏರಿತು. 1939ರ ಹೊತ್ತಿಗೆ ವೈದ್ಯರ ಸಂಖ್ಯೆ 132 ಸಾವಿರವಾಗಿತ್ತು. ವಿವಿದ ಮಕ್ಕಳ–ಮಹಿಳಾ ಕೇಂದ್ರಗಳ ಸಂಖ್ಯೆ (ಕ್ರಾಂತಿ ಪೂರ್ವ 2ರಿಂದ) 4384ಕ್ಕೆ ಏರಿತ್ತು. ಶಿಶು ಮರಣ ದರ ಮತ್ತು ಸರಾಸರಿ ಮರಣ ದರದಲ್ಲಿ ಶೇ. 50 ರಷ್ಟು ಕಡಿವಾಗಿತ್ತು. ಕ್ಷಯ ಪೀಡಿತರ ಸಂಖ್ಯೆ ಶೇ. 83ರಷ್ಟು, ಸಿಫಿಲಿಸ್ ಶೇ. 90ರಷ್ಟು ಕಡಿತವಾಗಿತ್ತು. ತಲಾ ಆರೋಗ್ಯ ಸೇವಾ ಬಜೆಟ್ 75 ಪಟ್ಟು ಹೆಚ್ಚು ಮಾಡುವ ಮೂಲಕ ಇದನ್ನು ಸಾಧಿಸಲಾಯಿತು. ಎರಡನೇ ಯೋಜನೆಯಲ್ಲಿ ವೈದ್ಯಕೀಯ ಶಿಕ್ಷಣ ವಿಸ್ತರಿಸುವ ಮತ್ತು ಉತ್ತಮ ಪಡಿಸುವ ಮೂಲಕ ಆರೋಗ್ಯ ಸೇವೆಯ ಗುಣ ಮಟ್ಟ ಏರಿಸುವುದಕ್ಕೆ ಒತ್ತು ಕೊಡಲಾಯಿತು.

1980ರ ದಶಕದಲ್ಲೇ ಸೋವಿಯೆಟ್ ಒಕ್ಕೂಟ ವೈದ್ಯರು, ನರ್ಸ್ ಗಳು, ಆಸ್ಪತ್ರೆ ಹಾಸಿಗೆಗೂ ಜನಸಂಖ್ಯೆಗೂ ಇರುವ ಅನುಪಾತ ಅತ್ಯಂತ ಹೆಚ್ಚು ಇರುವ ದೇಶವೆಂದು ಹೆಸರಾಗಿತ್ತು. 1986ರಲ್ಲಿ ಸೋವಿಯೆಟ್ ಆರೋಗ್ಯ ಸಂಪನ್ಮೂಲಗಳು ಅಮೆರಿಕವನ್ನು ಮೀರಿಸಿದ್ದವು. 1986ರಲ್ಲಿ ಸೋವಿಯೆಟ್ (ಮತ್ತು ಬ್ರಾಕೆಟಿನಲ್ಲಿ ಅಮೆರಿಕದ) ಆರೋಗ್ಯ ಸಂಪನ್ಮೂಲಗಳು ಹೀಗಿದ್ದವು : ಆಸ್ಪತ್ರೆ 23,100 (6,229); ಪ್ರತಿ ಲಕ್ಷ ಜನಸಂಖ್ಯೆಗೆ – ಆಸ್ಪತ್ರೆ ಹಾಸಿಗೆ – 1307(410), ವೈದ್ಯರು 429(225), ನರ್ಸುಗಳು 606(661); ದಾದಿಗಳು 114 (0) – ಇದ್ದವು. ಸೋವಿಯೆಟ್ ಸರಕಾರ ಭರಿಸುವ ವೈದ್ಯಕೀಯ ವೆಚ್ಚದ ಪ್ರಮಾಣ 92% ಇದ್ದರೆ ಅಮೆರಿಕನ್ ಸರಕಾರ ಕೇವಲ 43% ವೆಚ್ಚ ಭರಿಸುತ್ತಿತ್ತು.

ಸೋವಿಯೆಟ್ ಆರೋಗ್ಯ ವ್ಯವಸ್ಥೆ ಎಷ್ಟು ವಿಶ್ವವಿಖ್ಯಾತವಾಗಿತ್ತೆಂದರೆ 1978ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO) ಆಲ್ಮಾ ಆಟಾದಲ್ಲಿ ನಡೆದ ಸಮ್ಮೇಳನದಲ್ಲಿ ಮಹಿಳೆ–ಮಕ್ಕಳ ಆರೋಗ್ಯಕ್ಕೆ ಕ್ರಮಗಳು, ನೈರ್ಮಲ್ಯ ವೈದ್ಯಕೀಯ ಕ್ರಮಗಳಿಗೆ ಸೋವಿಯೆಟ್ ಮಾದರಿ ಎಂದು ಘೋಷಿಸಿತು. ●

'ಚಿರಸ್ಮರಣೆ'ಯ ಕಯ್ಯೂರು ಭೇಟಿ......... ಪುಟ 16 ರಿಂದ

ಈ ಐವರಲ್ಲಿ ಸಂಗಾತಿ ಚೋರಿಕಾಡನ್ ಕೃಷ್ಣನಾಯರ್ ಅಪ್ರಾಪ್ತ ವಯಸ್ಕನಾಗಿದ್ದರಿಂದ ಗಲ್ಲು ಶಿಕ್ಷೆಯ ಬದಲಾಗಿ ಬಾಲಾಪರಾಧಿಯಾಗಿ ಶಿಕ್ಷೆ ವಿಧಿಸಲಾಯಿತು. ಎಫ್‌ಐಆರ್ ಪ್ರತಿಯಲ್ಲಿ ನಮೂದಿಸಿದಂತೆ ತೀಯಾ ಜಾತಿಗೆ ಸೇರಿದ 23 ವರ್ಷದ ಅಪ್ಪು, ತೀಯಾ ಜಾತಿಗೆ ಸೇರಿದ 20 ವರ್ಷದ ಚಿರುಕಂಡ, ಮಾಪ್ಪಾ ಜಾತಿಯ 22 ವರ್ಷದ ಅಬೂಬಕ್ಕರ್, ನಾಯರ್ ಜಾತಿಯ 29 ವರ್ಷದ ಕುಂಞಂಬು ಸೇರಿದ್ದರು. ತೀಯಾ ಕೇರಳದ ಕೆಳಜಾತಿಗಳಲ್ಲೊಂದು. ಈ ಹೋರಾಟದ ನಾಯಕತ್ವದಲ್ಲಿ ಕೇವಲ ಮೇಲ್ಜಾತಿಯವರು ಮಾತ್ರ ಇರಲಿಲ್ಲ. ಬದಲಿಗೆ ಅಂದಿನ ಕಮ್ಯೂನಿಸ್ಟ್ ಚಳುವಳಿ ಕೇರಳದಲ್ಲಿ ದಲಿತರ ದೇವಸ್ಥಾನ ಪ್ರವೇಶದಂತಹ ಮಹಾನ್ ಹೋರಾಟಗಳನ್ನು ಕಮ್ಯೂನಿಸ್ಟ್ ಮುಖಂಡ ಎ.ಕೆ.ಗೋಪಾಲನ್ ರವರ ನೇತೃತ್ವದಲ್ಲಿ ನಡೆಸಲಾಗುತ್ತದೆ. ಇವುಗಳ ಸಂಪೂರ್ಣ ಮಾಹಿತಿ ಎಕೆಜಿಯವರ ಜೀವನ ಚರಿತ್ರೆಯ ಪುಸ್ತಕ "ನನ್ನ ಬದುಕು" ಇದರಲ್ಲಿ ಧಾಖಲಾಗಿದೆ.

ಒಟ್ಟಾರೆ ಈ ಓದು ಪ್ರವಾಸ ನನಗಂತೂ ಎಂದೂ ಮರೆಯಲಾಗದ ಅನುಭವವನ್ನು ಕೊಟ್ಟಿದೆ ಮಾತ್ರವಲ್ಲ, ಇದನ್ನು ನಿರಂತರವಾಗಿ ಮುಂದುವರೆಸುವ ಮನಸ್ಸಾಗಿದೆ. ಇದಕ್ಕಾಗಿ ಸಮಾನ ಮನಸ್ಕರು ಜೊತೆ ನಿಲ್ಲುತ್ತಾರೆಂಬ ಭರವಸೆ ಕಯ್ಯೂರು ಪ್ರವಾಸದ ಅಭೂತಪೂರ್ವ ಯಶಸ್ಸಿನಿಂದ ಗೊತ್ತಾಗಿದೆ. ಇದು ಕೇವಲ ಓದು ಮತ್ತು ಪ್ರವಾಸಕ್ಕೆ ಮಾತ್ರ ಸೀಮಿತವಾಗದೆ ಅವರ ಆದರ್ಶಗಳನ್ನು ನಮ್ಮ ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಅನುಸರಿಸಿ ಇಲ್ಲಿನ ಜನರ ಪ್ರಶ್ನೆಗಳ ಆಧಾರದ ಮೇಲೆ ಜನ ಚಳುವಳಿಯನ್ನು ಕಟ್ಟಿದರೆ ಮಾತ್ರ ಕಯ್ಯೂರಿನ ಹುತಾತ್ಮ ಸಂಗಾತಿಗಳಿಗೆ ನಿಜವಾದ ಶ್ರದ್ಧಾಂಜಲಿಯನ್ನ ಸಲ್ಲಿಸಿದಂತಾಗುತ್ತದೆ.

ಕಯ್ಯೂರಿನ ಹುತಾತ್ಮ ಸಂಗಾತಿಗಳಿಗೆ ಕೆಂಪು ವಂದನೆ ! ●

'ಚಿರಸ್ಮರಣೆ'ಯ ಕಯ್ಯೂರು ಭೇಟಿ : ಹೋರಾಟದ ನಾಡಿನ ಜೀವಂತ ಅನುಭವ

ಹಿಂದಿನ ಸಂಚಿಕೆಯಲ್ಲಿ ವರದಿಯಾದಂತೆ "ಚಿರಸ್ಮರಣೆ ಓದೋಣ ಕಯ್ಯೂರಿಗೆ ಹೋಗೋಣ" ಒಂದು ವಿಶಿಷ್ಟ ಚಳುವಳಿ. ಅದರ ಅನುಭವದ ಬಗ್ಗೆ ಎಚ್.ಆರ್. ನವೀನ್ ಕುಮಾರ್ ಬರೆದಿದ್ದಾರೆ. ಈ ಪಯಣ ಹಲವು ಕವಿತೆಗಳನ್ನು ಹುಟ್ಟು ಹಾಕಿತು. ಅವುಗಳಲ್ಲಿ ಒಂದು ಇಲ್ಲಿದೆ.

'ಚಿರಸ್ಮರಣೆ'ಯ ಮೂಲಕ ಅಂದಿನ ಕಯ್ಯೂರಿನಲ್ಲಿ ಕೈಹಿಡಿದು ನಡೆಸಿದ್ದವರು ನಿರಂಜನರು. ಅದನ್ನು ಓದಿ ಸ್ಫೂರ್ತಿಗೊಂಡು ಈ ಐತಿಹಾಸಿಕ ಸ್ಥಳಕ್ಕೆ ಭೇಟಿ ಕೊಡಬೇಕೆಂದು ಸಾಮಾಜಿಕ ಜಾಲತಾಣದಲ್ಲಿ ಸ್ನೇಹಿತರು ನಡೆಸಿದ ಚರ್ಚೆಯಿಂದಾಗಿ ಸಮಾನ ಮನಸ್ಕರೆಲ್ಲ ಸೇರಿ "ಚಿರಸ್ಮರಣೆ ಓದೋಣ ಕಯ್ಯೂರಿಗೆ ಹೋಗೋಣ" ಎಂಬ ಕಾರ್ಯಕ್ರಮೊಂದು ರೂಪಗೊಂಡಿತು. ಇದರ ಭಾಗವಾಗಿ 11 ನವೆಂಬರ್ 2017 ರಂದು 60 ಯುವಜನರ ತಂಡ ಕಯ್ಯೂರಿಗೆ ಪಯಣ ಆರಂಬಿಸಿತು.

ಕಯ್ಯೂರಿಗೆ ಪ್ರವೇಶ ಪಡೆದಾಗ ಒಂದು ರೀತಿ ಕಯ್ಯೂರೇ ನಮ್ಮನ್ನು ಕೈಹಿಡಿದು ನಡೆಸಿದ ಅನುಭವವಾಯಿತು. 1943ರ ಹಿಂದೆ ಮಡತ್ತಿಲ್ ಅಪ್ಪು, ಚಿರುಕಂಡ, ಅಬೂಬಕ್ಕರ್, ಪೊಡವರ ಕುಂಞಂಬು ರವರು ಕಯ್ಯೂರಿನಲ್ಲಿ ನಡೆಸಿದ ರೈತ ಚಳುವಳಿ ಆಮೂಲಕ ಅವರು ಮೈಗೂಡಿಸಿಕೊಂಡಿದ್ದ ಸಾಮ್ರಾಜ್ಯಶಾಹಿ ವಿರೊಧಿ ಚಿಂತನೆಗಳು ಇಂದಿಗೂ ಇಲ್ಲಿ ಜೀವಂತವಾಗಿವೆ. ಹುತಾತ್ಮ ಸ್ಮಾರಕಕ್ಕೆ ಭೇಟಿಕೊಟ್ಟ ಸಂಗಾತಿಗಳು ಕೊಟ್ಟ ಘೋಷಣೆ "ಅಂದು ಹರಿದ ನಿಮ್ಮಯ ರಕ್ತ, ನಮ್ಮ ರಕ್ತ ನಮ್ಮ ರಕ್ತ". ಮಾತ್ರವಲ್ಲ ಅಂದು ಅವರು ಬಿತ್ತಿದ್ದ ವಿಚಾರಗಳು 80 ವರ್ಷಗಳ ನಂತರವೂ ಇಲ್ಲಿ ಹಚ್ಚ ಹಸಿರಾಗಿ ನಳನಳಿಸುತ್ತಿದೆ. ಮಾತ್ರವಲ್ಲ ಇನ್ನಷ್ಟು ಗಟ್ಟಿಯಾಗಿ ಮುನ್ನಡೆಸಿಕೊಂಡು ಹೋಗಲಾಗುತ್ತಿದೆ. ಅದಕ್ಕೆ ಸಾಕ್ಷಿ ಎಂಬಂತೆ ಕಯ್ಯೂರಿನಲ್ಲಿ ಹೆಜ್ಜೆ ಹೆಜ್ಜೆಗೂ ಕೆಂಬಾವುಟಗಳು ರಾರಾಜಿಸುತ್ತಿದ್ದವು. ಚಿರಸ್ಮರಣೆಯ ಮೂಲಕ ಕಯ್ಯೂರನ್ನ ಪ್ರವೇಶಿಸಿದವರಿಗೆ ಹೋರಾಟದ ನಾಡಿನ ಜೀವಂತ ಅನುಭವವಾಯಿತು.



ಇಡೀ ಊರಿಗೆ ಊರೇ ತೆಂಗು, ಅಡಿಕೆ, ಬಾಳೆ ಮರಗಳ ಹಚ್ಚ ಹಸಿರಿನಿಂದ ಕೂಡಿದ ತೋಟ, ಮಲೆನಾಡಿನ ಈ ತೋಟಗಳ ಮಧ್ಯೆ ಎಲ್ಲರ ಗಮನ ಸೆಳೆಯುವ ಮನೆಗಳು, ಅಲ್ಲಿ ಹುತಾತ್ಮ ಸಂಗಾತಿಗಳಾದ ಅಪ್ಪು, ಚಿರುಕಂಡ ಮತ್ತು ಅಬೂಬಕರ್‌ರ ಮೂಲ ಮನೆಗಳಿಗೆ ಭೇಟಿಕೊಟ್ಟು ಅವರ ಮನೆತನದ ಇಂದಿನ ತಲೆಮಾರಿನವರನ್ನ ಭೇಟಿಯಾದಾಗ ಅವರುಗಳಿಗೆ ಅವರ ಹಿರಿಕರು ನಡೆಸಿದ ಹೋರಾಟದ ಬಗ್ಗೆ ಮತ್ತು ಅವರು ಪ್ರತಿಪಾದಿಸಿದ ಕಮ್ಯೂನಿಸ್ಟ್ ಸಿದ್ಧಾಂತದ ಬಗ್ಗೆ ಹೆಮ್ಮೆ ಇದೆ. ಮಾತ್ರವಲ್ಲ, ಅವರು ಆ ವಿಚಾರಗಳನ್ನು ಮುಂದುವರೆಸಲು ಎಂದಿಗೂ ಹಿಂಜರಿದವರಲ್ಲ.

ಕೇರಳ ಕಮ್ಯೂನಿಸ್ಟ್ ಚಳುವಳಿಯ ಇತಿಹಾಸವೇ ಹಾಗೆ. ಇಲ್ಲಿ ಸ್ವತಂತ್ರ–ಪೂರ್ವದಲ್ಲಿ ಬ್ರಿಟೀಷರ ವಿರುದ್ಧ ಆರಂಭವಾದ ಚಳುವಳಿ ತನ್ನ ಛಾಪನ್ನ ಇಲ್ಲಿಯವರೆಗೂ ಮುಂದುವರೆಸಿಕೊಂಡು ಬಂದಿದೆ. ಇಲ್ಲಿ ಕಮ್ಯೂನಿಸ್ಟ್ ಪಕ್ಷ ಒಂದು ರಾಜಕೀಯ ಪಕ್ಷ ಮಾತ್ರವಲ್ಲ. ಬದಲಿಗೆ ಅದೊಂದು ಸಾಂಸ್ಕೃತಿಕ ಚಳುವಳಿಯೂ ಹೌದು. ಹಾಗಾಗಿ ಇಲ್ಲಿಯ ಜನರಿಗೆ ಚಳುವಳಿ ಮತ್ತು ಕಮ್ಯೂನಿಸ್ಟ್ ರಾಜಕಾರಣ ಎನ್ನುವುದು ರಕ್ತದಲ್ಲೇ ಬೆರತು ಹೋಗಿದೆ. ಬದುಕಿನ ಭಾಗವಾಗಿದೆ. ಕೇರಳ ಕಮ್ಯೂನಿಸ್ಟ್ ಚಳುವಳಿಯ ಒಟ್ಟು ಕೊಡುಗೆಯನ್ನು ನೆನೆದರೆ ಅದು ಇಂದಿನ ಕೇರಳದ ಈ ಸ್ಥಿತಿಗೆ ಎಷ್ಟು ಕೊಡುಗೆ ಕೊಟ್ಟಿರಬಹುದು ಎಂಬುದು ಮನವರಿಕೆಯಾಗುತ್ತದೆ. ಒಂದು ಕಾಲದಲ್ಲಿ ಇದೇ ಕೇರಳವನ್ನು ಸ್ವಾಮಿ ವಿವೇಕಾನಂದರು ಹುಚ್ಚಾಸ್ಪತ್ರೆ ಎಂದು ಕರೆದಿದ್ದರಂತೆ. ಅಂತಹ ಕೇರಳವನ್ನು ಕಟ್ಟಿ ಬೆಳೆಸಿ ಇಂದು ಮಾನವಾಭಿವೃದ್ಧಿಯಲ್ಲಿ ದೇಶದಲ್ಲೇ ನಂಬರ್ ಒನ್ ಮಾಡುವ ಹಂತಕ್ಕೆ ತಂದಿರುವುದರಲ್ಲಿ ಕಮ್ಯೂನಿಸ್ಟ್ ಚಳುವಳಿಯ ಪಾತ್ರ ಮಹತ್ತರವಾದದ್ದು.

ದೇಶದ ಮೊಟ್ಟಮೊದಲ ಭೂಸುಧಾರಣೆ ಇಎಂಎಸ್ ನಂಬೂದರಿಪಾಡ್ ನೇತೃತ್ವದ ಕಮ್ಯುನಿಸ್ಟ್ ಸರ್ಕಾರದಲ್ಲಿ 1951 ರಲ್ಲೇ ನಡೆದಿದೆ. ಕೇರಳವನ್ನು ಅನಕ್ಷರತೆ ಮುಕ್ತ ರಾಜ್ಯವನ್ನಾಗಿ ಮಾಡಬೇಕೆಂದು ಪಣತೊಟ್ಟು ಇಂದು ಅದು ಸಂಪೂರ್ಣ ಸಾಕ್ಷರತೆಯನ್ನ ಸಾಧಿಸಿದೆ. ಇವುಗಳಿಗೆ ಸ್ವತಂತ್ರ–ಪೂರ್ವದಲ್ಲಿಯೇ ಕಯ್ಯೂರಿನಿಂದ ಆರಂಭವಾದ "ಉಳುವವನೇ ಹೊಲದೊಡೆಯ" ಎಂಬ ಹೋರಾಟವೇ ಮೂಲ. ಊರಿನಲ್ಲಿರುವ ಎಲ್ಲಾ ರೈತರು ರಾತ್ರಿ ಶಾಲೆಗಳಲ್ಲಿ ಸೇರಿ ಪತ್ರಿಕೆ ಓದುವುದು ಮತ್ತು ಅಕ್ಷರಾಭ್ಯಾಸ ನಡೆಸುತ್ತಿದ್ದರು. ಇದಕ್ಕಾಗಿ ಕೋರ ಎಂಬ ಬಡ ರೈತ ತನ್ನ ಮನೆಯನ್ನೇ ಬಿಟ್ಟುಕೊಟ್ಟಿದ್ದು. ಊರಲ್ಲೊಂದು ರೈತ ಸಂಘದ ಕಛೇರಿ ಆರಂಬಿಸಿ ಅದರ ಮೇಲೆ ಕೆಂಬಾವುಟ ಹಾರಿಸಿ, ಪ್ರತಿ ದಿನ ಊರ ರೈತರೆಲ್ಲ ಅಲ್ಲಿ ಸೇರಿ ದೇಶದ ಶೋಷಣೆಗೆ ಕಾರಣವಾಗಿರುವ ಬ್ರಿಟೀಷ್ ಸಾಮ್ರಾಜ್ಯಶಾಹಿಗಳು ಮತ್ತು ಕಯ್ಯೂರಿನ ಬಡ ರೈತರ ಶೋಷಣೆಗೆ ಕಾರಣವಾಗಿರುವ ಭೂಮಾಲಕಶಾಹಿಗಳ ವಿರುದ್ಧ ಹೋರಾಟ ರೂಪಿಸಲು ಚರ್ಚಿಸುತ್ತಿದ್ದರು. ಇದೇ ಬೀಜ ಇಂದು ಕೇರಳದ ಪ್ರತಿ ಹಳ್ಳಿಗಳಲ್ಲೂ ಹೆಮ್ಮರವಾಗಿ ಬೆಳೆದಿದೆ.

ಕಯ್ಯೂರಿಗೆ ಅಂಟಿಕೊಂಡಂತಿರುವ ತೇಜಸ್ವಿನಿ ನದಿ ಗಂಭೀರವಾಗಿ ಸದ್ದಿಲ್ಲದಂತೆ ಹರಿಯುತ್ತಿದ್ದರೂ ಅಂದು ರೈತ ಸಂಘದ ಮಾರ್ಚ್‌ಫಾಸ್ಟ್ ತಡೆಯಲು ಹೋಗಿ ರೈತರ ಪ್ರತಿರೊಧವನ್ನ ತಡೆಯಲಾರದೆ ತನ್ನ ಮಡಿಲಿಗೆ ಬಂದಾಗ ಅಲ್ಲಿಯೇ ಆತನನ್ನು ಇರಿಸಿಕೊಂಡು ಭೂಮಾಲಿಕರಿಗೆ ಮತ್ತು ಬ್ರಿಟೀಷ್ ಅಧಿಕಾರಿಗಳಿಗೆ ನಡುಕ ಹುಟ್ಟಿಸಿದ್ದ ಆ ದೃಶ್ಯ ಹಾಗೆ ಭಾಸವಾಗುತ್ತಿತ್ತು. ಮಾತ್ರವಲ್ಲ ಅದೇ ತೇಜಸ್ವಿನಿ ನದಿಯನ್ನ ದಾಟಿ ಅಪ್ಪು ಚಿರಕುಂಡ ಚರ್ವತ್ತೂರಿಗೆ ಮಾಸ್ಟರನ್ನು ಕಾಣಲು ಕುರುಡು ಅಜ್ಜನ ತೂತು ದೋಣಿಯನ್ನು ಬಳಸಿದ್ದು ನೆನಪಿಗೆ ಬಂತು.

ಕಯ್ಯೂರಿನ ಈ ಹುತಾತ್ಮ ರೈತ ವೀರರ ಹೋರಾಟದ ಮಹತ್ವವನ್ನು ಸಾರುವಂತಿದ್ದ ಹುತಾತ್ಮ ಸ್ಮಾರಕದ ಬಳಿಯಲ್ಲಿದ್ದ ಕಛೇರಿಗೆ ಭೇಟಿ ನೀಡಿದಾಗ ಅಲ್ಲಿದ್ದ ಕಯ್ಯೂರು ಹೋರಾಟಗಾರರ ಭಾವಚಿತ್ರಗಳನ್ನು ನೋಡಿ ಮನಸ್ಸು ಭಾರವಾಯಿತು. ಅಲ್ಲಿದ್ದ ಸಂಗಾತಿಯೊಬ್ಬರು ಎಲ್ಲವನ್ನೂ ವಿವರಿಸುತ್ತಿದ್ದಾಗ ನನ್ನ ಗಮನವನ್ನು ಸೆಳೆದದ್ದು ಮೂವರ ಭಾವಚಿತ್ರ. ಅದು ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಪಿ.ಸಿ.ಜ್ಯೋಷಿ, ಕೇರಳದ ಕಮ್ಯೂನಿಸ್ಟ್ ಚಳುವಳಿಯ ಆರಂಭದ ದಿನಗಳ ಪ್ರಮುಖ ನಾಯಕರಲ್ಲಿ ಒಬ್ಬರಾದ ಕೃಷ್ಣಪಿಳ್ಳೆ ಮತ್ತು ದೇಶದ ಬೃಹತ್ ರೈತ ಚಳುವಳಿ ಅಖಿಲ ಭಾರತ ಕಿಸಾನ್ ಸಭಾದ ಅದ್ಯಕ್ಷರು ಮತ್ತು ಭಾರತದ ಕಮ್ಯೂನಿಸ್ಟ್ ನವರತ್ನಗಳಲ್ಲಿ ಒಬ್ಬರಾದ ಸಿಪಿಐ(ಎಂ)ನ ಮೊದಲ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಪಿ.ಸುಂದರಯ್ಯನವರದ್ದು. ಈ ಕುರಿತು ವಿವರಗಳನ್ನು ಹುಡುಕಾಡಿದಾಗ ತಿಳಿದದ್ದೇನೆಂದರೆ ಮಂಗಳೂರು ನ್ಯಾಯಾಲಯದಿಂದ ಗಲ್ಲುಶಿಕ್ಷಗೆ ಗುರಿಯಾಗಿದ್ದ ನಾಲ್ವರು ಕಯ್ಯೂರು ರೈತ ವೀರರನ್ನು ಭೇಟಿಯಾಗಲು ಈ ಮಹಾನ್ ನಾಯಕರುಗಳು 1943 ಮಾರ್ಚ್ 28 ರಂದು ರಾತ್ರಿ 11 ಗಂಟೆಯ ಸಮಯಕ್ಕೆ ಕಣ್ಣೂರು ಸೆಂಟ್ರಲ್ ಜೈಲಿಗೆ ಬಂದಿದ್ದರು. ಅಂದರೆ ಕಯ್ಯೂರಿನ ಈ ಘಟನೆ ಕೇವಲ ಕೇರಳದಲ್ಲಿ ಮಾತ್ರವಲ್ಲ ದೇಶದ ರೈತ, ಎಡ ಪ್ರಜಾಸತ್ತಾತ್ಮಕ ಮತ್ತು ಕಮ್ಯೂನಿಸ್ಟ್ ಚಳುವಳಿಯಲ್ಲಿ ಒಂದು ಮೈಲಿಗಲ್ಲು ಎಂಬುದನ್ನು ಸಾಬೀತುಪಡಿಸುತ್ತದೆ.

ಕಯ್ಯೂರು ಭೇಟಿಯಲ್ಲಿ ನಾವುಗಳು ಕೊನೆಯದಾಗಿ ಸಂಗಾತಿ ಅಬೂಬಕ್ಕರ್ ಮನೆಗೆ ಮತ್ತು ಅವರ ಮನೆತನದವರ ದರ್ಗಾವನ್ನ ನೋಡಿದೆವು. ಅಬೂಬಕ್ಕರ್ ಒಬ್ಬ ಮುಸ್ಲಿಂ ರೈತ. ಅವನು ಅಂದು ಸೇರಿದ್ದ ರೈತ ಸಂಘ ಕೇವಲ ಮುಸ್ಲಿಮರದ್ದಾಗಿರಲಿಲ್ಲ ಅಂದರೆ ಅಂದು ನಡೆದ ಹೋರಾಟ ಅತ್ಯಂತ ಜಾತ್ಯಾತೀತವಾಗಿತ್ತು ಎಂಬುದನ್ನು ಸಾರಿ ಹೇಳುತ್ತದೆ. ಇಂದಿಗೂ ಅದು ಕಯ್ಯೂರಿನಲ್ಲಿ ಜೀವಂತವಾಗಿದೆ. ಅದಕ್ಕೆ ಸಾಕ್ಷಿ ಪ್ರಜ್ಞೆಯಂತಿದ್ದವರು ಟಿ.ಬಾಲನ್. ಇವರು ಕಳೆದ 15 ವರ್ಷಗಳಿಂದ ಅಬೂಬಕ್ಕರ್ ನ ಮನೆ ಮತ್ತು ದರ್ಗಾದ ಉಸ್ತುವಾರಿಯನ್ನ ನೋಡಿಕೊಳ್ಳುತ್ತಿದ್ದಾರೆ. ಈ ದೇಶದ ಕೋಮು ಸಾಮರಸ್ಯಕ್ಕೆ ಇದಕ್ಕಿಂತ ಜೀವಂತ ಉದಾಹರಣೆ ಮತ್ತೇನು ಬೇಕು?

ಈ ಓದು ಪ್ರವಾಸದಿಂದ ಸಾಮಾಜಿಕ ಜಾಲತಾಣದಲ್ಲಿರುವ ಹಿರಿಯರು ಕಿರಿಯರು ಸಾಕಷ್ಟು ಸಂಖ್ಯೆಯಲ್ಲಿ ಸ್ಫೂರ್ತಿಗೊಂಡಿದ್ದರು ಅದೇ ರೀತಿ ಕೆಲವರು ಇದನ್ನು ಮೂದಲಿಸಿದ್ದೂ ಇದೆ. ಅಲ್ಲಿ ಎದ್ದು ಬಂದ ಒಂದು ಪ್ರಶ್ನೆಗೆ ಇಲ್ಲಿ ಉತ್ತರಿಸಲೇ ಬೇಕಾಗಿದೆ. ಕಯ್ಯೂರಿನ ರೈತ ವೀರರು ಕೇವಲ ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳ ವಿರುದ್ದ ಮಾತ್ರ ಹೋರಾಡಿದ್ದಲ್ಲ. ಬದಲಾಗಿ ದೇಶದ ಜಾತಿವ್ಯವಸ್ಥೆಗೆ ಮೂಲ ಬೇರಾಗಿದ್ದ ಭೂಮಾಲಕಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡಿ ಮೇಲ್ಜಾತಿಯ ಭೂಮಾಲಕರುಗಳನ್ನು ಎದುರಿಸಿ ಧೈರ್ಯವಾಗಿ ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟಿದ್ದರು. ಕಯ್ಯೂರಿನ ಈ ಘಟನೆಯಲ್ಲಿ ಬ್ರಿಟೀಷ್ ಪೊಲೀಸಲು ಕಯ್ಯೂರಿನ ಒಟ್ಟು 60 ಜನರ ಮೇಲೆ ಮೊಕ್ಕದ್ದಮೆ ದಾಖಲಿಸಿದ್ದರು. ಅದರಲ್ಲಿ ಐವರಿಗೆ ಗಲ್ಲುಶಿಕ್ಷೆಯನ್ನು ವಿಧಿಸಿದ ಮಂಗಳೂರು ನ್ಯಾಯಾಲಯ ಉಳಿದ 55 ಜನರನ್ನು ಬಿಡುಗಡೆ ಮಾಡಿತು. ಗಲ್ಲುಶಿಕ್ಷೆಗೆ ಗುರಿಯಾದ

ಪುಟ 15 ಕ್ಕೆ

ನಾ ಎಲ್ಲಿಗೆ ಹೋಗಿದ್ದೆ ಗೊತ್ತಾ?

ಶ್ ಶ್ ಯಾರೂ ಮಾತಾಡಬೇಡಿ ಕೇಳಿಲ್ಲಿ,
ಇವತ್ತು ನಾ ಎಲ್ಲಿಗೆ ಹೋಗಿದ್ದೆ ಗೊತ್ತಾ?
ರೈಲಿನ ಇಡೀ ಬೋಗಿಯಲ್ಲಿ ನಾನೊಬ್ಬನೇ ಇದ್ದೆ,
ಜನರೆಲ್ಲಾ ಇದ್ರೆ ಕಿರಿಕಿಯಾಗುತ್ತೆ ಅದಕ್ಕೆ ಒಬ್ಬನೇ ಹೋಗಿದ್ದೆ!

ನೀಲೇಶ್ವರದಲ್ಲೇ ಇಳಿದೆ ಅಲ್ಲೆಲ್ಲ
ಎಂಥಾ ಬೆಳಕು,
ಅಗ್ನಿಶಿಲೆಯ ಹಾಗೆ ಊರಿಡೀ ಕೆಂಪಾಗಿ ಹೊಳೆಯುತ್ತಿತ್ತು!
ತೇಜಸ್ವಿನಿಯಲ್ಲಿ ಕ್ರಾಂತಿಗೀತೆ ಕಯ್ಯೂರಿಂದಲೇ ಕೇಳಿದ್ದಿರಬೇಕು!!
ಕಯ್ಯೂರಲ್ಲಿ ಕುಟ್ಟಿಕೃಷ್ಣನೊಬ್ಬನೇ ಕಾಯುತ್ತಿದ್ದ

ಸರಿ
ಮುಂದೆ ಅಪ್ಪುವಿನ ಮನೆ,
ಅಪ್ಪು ಅಲ್ಲಿರಲಿಲ್ಲ ಸಂಘದ ಆಫಿಸಲ್ಲಿ ನಾಲ್ವರೂ ಕಾಯುತ್ತಿದ್ದಾರೆಂದ
ಕುಟ್ಟಿಕೃಷ್ಣ,
ಅಲ್ಲಿ ಎಲ್ಲರೂ 'ದೇಶಾಭಿಮಾನಿ' ಓದುತ್ತಿದ್ದರು,
ಅರೆ ಮಾಸ್ಟರ್, ಕಣ್ಣನ್, ನಾಯರ್ ಎಲ್ಲರೂ ಇದ್ದಾರೆ!!
ಪಂಡಿತರನ್ನೂ ಕಂಡ ಹಾಗೇ ಆಯಿತು
ಪರಿಚಯ, ಚರ್ಚೆ, ಕ್ರಾಂತಿಗೀತೆ, ಒಂದಿಷ್ಟು ನಗು.

ಶ್ ಶ್ ಕೇಳಿಲ್ಲಿ,
ಒಂದಷ್ಟು ತಿಂದು
ಕೆಳಗೆ ತೇಜಸ್ವಿನಿಯ ಬದಿಯಲ್ಲಿ
ಗಂಭೀರ ಚರ್ಚೆ ಅಪ್ಪು, ಚಿರಕುಂಡ ಮತ್ತು ನಾನು,
ಹಳೇದೊಂದು ದೋಣಿಲಿ ಚೆರ್ವತ್ತೂರಿಗೂ ದಾಟಿ ಬಂದೆವು.

ಎಲ್ಲರ ಮನೆಗೊಮ್ಮೆ ಹೊಕ್ಕು
ತಂ(ಕೆಂ)ಪಾದ ಇಡೀ ಕಯ್ಯೂರ ಸುತ್ತಾಡಿದೆ ನಾನೊಬ್ಬನೆ!
ಸಂಜೆ ಹೊರಟಾಗಲೂ ನಾನೊಬ್ಬನೇ ಇಡೀ ಬೋಗಿಯಲ್ಲಿ,
ಎದೆಯೊಳಗವರೆಲ್ಲರೂ
ಒಂಟಿಯಲ್ಲ ನಾನು!

ಬಾನಿಡಿ ಕೆಂಪಾಗಿಸಿ ರವಿ ಮುಳುಗುತ್ತಿದ್ದ
ನಾಳೆ ಉದಿಸಿಯೇ ತೀರುತ್ತೇನೆಂಬ ದೃಡಸಂಕಲ್ಪದಲಿ
ಕಯ್ಯೂರಲ್ಲಿಯೂ ಉದಿಸಿಯಾಗಿತ್ತು ಅದೇ ವಿಶ್ವಾಸ ರವಿಗೂ.
ಕಿಟಕಿಯಾಚೆಯಿಂದ ನೋಡಿದೆ

ಕಯ್ಯೂರಿನ ವೀರಗಂಬದಲ್ಲೊಂದು ಕೆಂಬೆಳಕು
ಅದರಡಿಯಲಿ ನಾಲ್ವರೂ ನಗುತ್ತಿದ್ದರು,
ಅದಕ್ಕೂ ಕಾರಣವಿತ್ತು
'ದಲಿತಕೋಟಿಯ ಎದೆಗೂಡಲ್ಲಿ ಕಟ್ಟಿದ
ಸಾಮ್ರಾಜ್ಯ ಪುಡಿಪುಡಿಯಾಗಿತ್ತು'
'ದುಡಿವ ಜನರ ಕೈಯ್ಯಲ್ಲಿ ವಿಜಯಪತಾಕೆಯಿತ್ತು'
ನಾನೊಬ್ಬನೇ ಬೋಗಿಯಲ್ಲಿದ್ದೆ
'ಇಂಕ್ವಿಲಾಬ್' ಸ್ಪಷ್ಟವಾಗಿ ಕೇಳುತ್ತಿತ್ತು

– ನಜೀರ್ ಬಾಪು ಅಮ್ಮೆಂಬಳ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**